೨೦ ಪುಟಗಳು

ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೭-೧೦-೧೯೪೯



ಬೆಲೆ ಎರಡಾಣೆ

ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ

ಹೊಸ ಪುಸ್ತಕಗಳು

ವೇದಾಂತ ಮಾರ್ಗದ ನಿರಾಕರಣೆ

ಬುದ್ಧಿಯೋಗ

ಬರೆದವರು ಮತ್ತು ಪ್ರಕಾಶಕರು: ಶ್ರೀ ಮುಗದಲ್ ರಾಮಚಂದ್ರ, ಗೀತಾಶ್ರಮ, ಚಾಮರಾಜಪೇಟೆ, ಬೆಂಗಳೂರು ನಗರ. ಪುಟ ೩೦೪ ಬೆಲೆ ರೂ. ೪॥.

ಭಗವದ್ಗೀತೆಗೆ ಕರ್ಮಯೋಗ, ಅನಾಸಕ್ತಿಯೋಗ ಎಂದು ಮುಂತಾಗಿ ವಿವಿಧ ಹೆಸರುಗಳಿವೆ; ಅವು ಅಷ್ಟು ಉಚಿತವಾದುವಲ್ಲ, ಬುದ್ಧಿಯೋಗವೆನ್ನುವುದೇ ಉಚಿತ; ಏಕೆಂದರೆ ಅದರ ಎರಡನೆಯ ಅಧ್ಯಾಯದಲ್ಲಿ ಹಾಗೆಯೇ ಹೇಳಿದೆ ಎಂದು ಗ್ರಂಥಕರ್ತರು ಅಭಿಪ್ರಾಯ ಪಟ್ಟಿದ್ದಾರೆ. ಉಪಕ್ರಮದ ಶೀರ್ಷಕದಲ್ಲಿ ಗ್ರಂಥಕರ್ತರು ಭಗವದ್ಗೀತೆಯ ಹಿಂದಿನ ವ್ಯಾಖ್ಯಾತರ ಕ್ರಮಗಳನ್ನೆಲ್ಲ ಅಕ್ರಮಗಳೆಂದು ಸಾರಿಸಿ ತಾವು ಅದರ ಆಂತರಿಕ ವಿವರಣಗಳ ಸಹಾಯದಿಂದಲೇ ವ್ಯಾಖ್ಯಾನಿಸಿ ಅದರ ಮರ್ಮವನ್ನು ಹೊರಗೆಡುತ್ತೇವೆ ಎಂದು ಸಾಧಿಸಿದ್ದಾರೆ. ವೇದಾಂತ ಮತ್ತು ಇತರ ದರ್ಶನಗಳ ಪಾರಿಭಾಷಿಕ ಪದಗಳನ್ನು ಗೀತೆ ಬಳಸಿಕೊಂಡಿದ್ದರೂ ಅದು ಅವುಗಳ ಮೂಲಾರ್ಥವನ್ನು ಬದಿಗಿಟ್ಟು ಅವಕ್ಕೆ ತನ್ನದೇ ಆದ ಹೊಸ ಅರ್ಥವನ್ನು ಕೊಟ್ಟು ಅವನ್ನು ಆಯಾ ಸ್ಥಲಗಳಲ್ಲಿಯೇ ವಿವರಿಸಿದೆ ಎಂಬುದು ಗ್ರಂಥಕರ್ತರ ಈ ನವೋದ್ಯಮದ ಅಡಿಗಲ್ಲಾದ ವಾದ. ಇಷ್ಟಲ್ಲದೆ ಹಿಂದುಸ್ಥಾನದ ಎಲ್ಲ ದರ್ಶನಗಳಿಂದಲೂ ಗೀತೆ ಒಂದು ಹೆಜ್ಜೆ ಮುಂದೆ ಹೋಗಿದೆ ಎಂಬ ಭಾವ ಬರುವಂತೆ ಅದರ ಉತ್ಕರ್ಷವನ್ನು ಸುದೀರ್ಘವಾಗಿ ಅವರು ಹೊಗಳಿದ್ದಾರೆ.

ಉಪನ್ಯಾಸ ಪ್ರಾರಂಭವು ಮೇಲೆ ಹೇಳಿದಂತೆ ವೈಜ್ಞಾನಿಕ ದೃಷ್ಟಿಯ ಗರಡಿಯ ಕಸರತ್ತುಗಳನ್ನು ಪ್ರದರ್ಶಿಸಿ ಮುನ್ನಡೆಯುಟ್ಟಿದೆ. ಗೀತೆಯನ್ನು ದೇಶ, ಕಾಲ, ಸಂದರ್ಭ, ವ್ಯಕ್ತಿತ್ವ, ಪ್ರಾಚೀನ ಗ್ರಂಥಪ್ರಭಾವ ಮುಂತಾದವುಗಳ ಸಂಕೋಲೆಯಿಂದ ಬಿಡಿಸಿ ಸ್ವಯಂಪೂರ್ಣವೆಂದು ಸಾರಿ ಅರ್ಥ ಹೇಳಹೊರಟರು ಪ್ರಸು ವೈಜ್ಞಾನಿಕ ಎಂಬುದರ ಸತ್ಯತೆಯ ಬಗೆಗೆ ಕೆಲವರಿಗೆ ಪ್ರಾಮಾಣಿಕ ಸಂಶಯ ಬರಬಹುದು; ಆದರೆ ಇದನ್ನು ಸದ್ಯಃ ಗಣಿಸದಿರೋಣ. ಈ ಶುದ್ಧ ದಾರ್ಶನಿಕತೆಯು ಬುದ್ಧಿಯೋಗದ ಹರಿತ ಎಷ್ಟರ ಮಟ್ಟಿಗೆ ಪ್ರದರ್ಶಿತವಾಗಿದೆ ಎಂಬುದನ್ನು ನಿಧಾನವಾಗಿ ನಿರೀಕ್ಷಿಸಹೋದರೆ ಪುರುಷೋತ್ತಮನೆಂಬ ತತ್ವವು ಕ್ರಮೇಣ ವ್ಯಕ್ತಿಯಾಗಿ ನಿರೂಪಿಸಲ್ಪಟ್ಟು, ಆ ವ್ಯಕ್ತಿಯಾಡಿದ ಮಾತೆಂಬ ಒಂದೇ ಒಂದು ಕಾರಣದಿಂದ ಅದು ಅಜರಾಮರ ಸತ್ಯವೆಂದು ಶ್ರದ್ಧಾಭಕ್ತಿಸಮನ್ವಿತರಾಗಿ, ಓದುಗರು ಸ್ವೀಕರಿಸಬೇಕೆಂಬ ಪ್ರತಿಪಾದನೆಯ ಆಗ್ರಹ ಬರಹದಲ್ಲಿ ಕಂಡುಬರುವುದು ಉದ್ದೇಶಹಾನಿಯನ್ನು ತಂದಿದೆಯೆಂದು ವಿಷಾದದಿಂದ ಹೇಳದಿದ್ದರೆ ವಿಧಿಯಿಲ್ಲ. ಹಳೆಯ ಲೀಲಾವಾದದಿಂದ ಸೃಷ್ಟಿಯ ಕಾರಣವನ್ನು ವಿವರಿಸುವ ಶುದ್ಧ ಪೌರಾಣಿಕತೆ ಹೆಜ್ಜೆ ಹೆಜ್ಜೆಗೂ ಎದುರಾಗುವುದಲ್ಲದೆ, ಕಡೆಯಲ್ಲಿ ಬುದ್ಧಿಯ ಆರಾಧಕರಾದ ಗ್ರಂಥಕರ್ತರು ಅದಕ್ಕೆ ಸೃಷ್ಟಿಕ್ರಮ ವಿನ್ಯಾಸದಲ್ಲಿಯೂ ಭಕ್ತಿಗರಿಮಾವರ್ಣನದಲ್ಲಿಯೂ ಗೌಣಸ್ಥಾನವನ್ನು ದಯಪಾಲಿಸಿರುವುದು ವಿಚಾರಪರರಿಗೆ ಅಷ್ಟೇನೂ ಸಮಂಜಸವೆಂದು ತೋರದು.

ಈ ನಡುವೆ, "ಮಾನವನ ಆಧ್ಯಾತ್ಮಿಕ ಮತ್ತು ಭೌತಿಕ ಪ್ರವೃತ್ತಿಗಳ ಸಮತೋಲವನ್ನು ಧಾರ್ಮಿಕ ಭಾವಗಳು ಕಾದುಕೊಂಡು ಬಂದಿವೆ" "ನಮಗೆ ಇಲ್ಲಿಯ ವರೆಗೆ ತಿಳಿದು ಬಂದ ಪ್ರಕಾರ ಮನುಷ್ಯನ [illegible] ಯಾವ ಮದ್ದನ್ನೂ ಕಂಡುಹಿಡಿದಿಲ್ಲ" ಎಂದು ಹೇಳಿರುವ ಮಾತುಗಳು ಅನುಭವವೇದ್ಯವಾದ ಸತ್ಯಗಳಾಗಿವೆ. ಬರಹದ ಶೈಲಿ ಬಹಳ ಸರಳವಾಗಿಯೂ ಸುಂದರವಾಗಿಯೂ ಇರುವುದು ಪುಸ್ತಕದ ಒಂದು ಪ್ರಶಂಸಾರ್ಹವಾದ ಗುಣ.

ಉಪೋದ್ಘಾತದ ಬಳಿಕ ಬರುವ ಪಾಠದ ಅನುವಾದವಾದರೂ [illegible] ಪೌರಾಣಿಕ ಅನುಕ್ರಮಣಿಕೆಯಲ್ಲೇ ಜಗತ್ಸೃಷ್ಟಿ ಕಾರಣ, ಕಾರ್ಯ, ಫಲ ಇವನ್ನು ವಿವೇಚಿಸಿ ಹೇಳುವ ಪ್ರಾಗರ್ಭವನ್ನು ಹಿರಿದಿದೆ. ಈ ಅಂಶವನ್ನು ಅನುವಾದದೊಡನೆ ಇರುವ ಟಿಪ್ಪಣಿಯಲ್ಲಿ ಮುಖ್ಯವಾಗಿ ಕಾಣಬಹುದಾಗಿದೆ. ಇತರ ಮುದ್ರಿತ ಗೀತೆಯ ಮೂಲ ಪಾಠವನ್ನು ಒಪ್ಪಿಗೆ ಅನುಬಂಧಿಸಲಾಗಿದೆ. ವೈಜ್ಞಾನಿಕ ಮಾರ್ಗದ ಲಂಬಿನಗಳಿಗೆ ಈ ಪುಸ್ತಕದಲ್ಲಿ ಹೇಳಿದ. 'That the intellectual method which Vedanta has followed is ina equate to resolve these doubts is admitted by all except the Vedantists- ವೇದಾಂತ ಅನುಸರಿಸಿದ ಬೌದ್ಧಿಕ ವಿಚಾರಪದ್ಧತಿ ಈ ಸಂಶಯಗಳನ್ನು ಪರಿಹರಿಸಲು ಅಸಮರ್ಥವಿದೆಯೆಂಬುದನ್ನು ವೇದಾಂತಿಗಳನ್ನು ಬಿಟ್ಟರೆ ಮತ್ತೆಲ್ಲರೂ ಒಪ್ಪಿಕೊಳ್ಳುತ್ತಾರೆ' ಎಂಬ ಒಂದೇ ಒಂದು ಮಹಾವಾಕ್ಯ ಸಾಕು; ಅದರ ಅರ್ಥ ಅದರಲ್ಲೇ ಇದೆ!

ಮಾತನಾಡುವ ಕಲ್ಲು

ಬರೆದವರು: ಶ್ರೀ "ಆನಂದಕಂದ" (ಸಮಾಜ ಪುಸ್ತಕಾಲಯ, ಧಾರವಾಡ, ೧೦೬ ಪುಟ, ರೂ. ೧-೪-೦)

ಸಣ್ಣ ಕತೆಗಳ ಕಲೆಯಲ್ಲಿ ಅನೇಕ ಕಾಲದಿಂದ ಸಾಧನೆ ನಡೆಸಿ ಪ್ರಸಿದ್ಧರಾದ ಶ್ರೀ ಬೆಟಗೇರಿ ಕೃಷ್ಣಶರ್ಮ (ಆನಂದಕಂದರು) ಇಲ್ಲಿ ಕಥನಕ್ಕೆ ಕನ್ನಡ ನಾಡಿನ ಹಳೆಗಾಲದ ಹಳ್ಳಿಯ ಜೀವನದ ಹಿರಿಮೆಯನ್ನೆ ಬಳಸಿಕೊಂಡಿದ್ದಾರೆ. ಪ್ರಾಚೀನ ಕನ್ನಡಿಗರ ಧೈರ್ಯ, ಶೌರ್ಯ ಔದಾರ್ಯಾದಿ ಗುಣಗಳನ್ನು ಇಂದಿನ ಅಧಃಪತಿತ ಜನಾಂಗಕ್ಕೆ ನೆನಪು ಮಾಡಿಕೊಡುವುದೇ ಇದರ ಉದ್ದೇಶವೆಂದು ತೋರುತ್ತದೆ. ಯಾವ ಹಳ್ಳಿಗೆ ಹೋದರೂ ಅಲ್ಲಿ ಒಂದಲ್ಲ ಒಂದು ಐತಿಹ್ಯವನ್ನು ಹೊದ್ದ ಕಲ್ಲುಗಳು ಇದ್ದೇ ಇವೆ. ಅವುಗಳಲ್ಲಿ ಕೆಲವು ಸಾಂಕೇತಿಕವಾಗಿ ಉಳಿದಿದ್ದರೂ ಅವುಗಳ ಕತೆಗಳು ಮರವೆಯ ಗರ್ಭದಲ್ಲಿ ಅಡಗಿವೆ. ಅವು ಪೂರ್ತಿಯಾಗಿ ಮರೆತು ಹೋಗುವ ಮೊದಲೇ ಸಂಗ್ರಹಿಸಿ ಮುದ್ರಣದಲ್ಲಿ ಶಾಶ್ವತಗೊಳಿಸಬೇಕಾದ ಅವಶ್ಯಕತೆಯುಂಟೆಂದು ಅವರು ಹೇಳಿದ್ದು ಯುಕ್ತವೆ. ಆದರೆ ಶ್ರೀ. ಆನಂದಕಂದರು ಇಲ್ಲಿ ಅಂಥ ನಾನಾ ಜಾತಿಯ ಐತಿಹ್ಯಗಳನ್ನು ಸಂಕಲಿಸಿ ಕೊಟ್ಟಂತೆ ಕಂಡರೂ ಅವು ನಿಜವಾದವುಗಳೋ ಸ್ವಕಪೋಲಕಲ್ಪಿತವೋ ಗೊತ್ತಾಗುವುದಿಲ್ಲ. ಮುಂಬಯಿ ದಾನುಲಿಯಲ್ಲಿ ಹಳ್ಳಿಗರಿಗಾಗಿ ಬಿತ್ತರಿಸಿದ ಕತೆಗಳೇ ಇಲ್ಲಿ ಮುದ್ರಣದಲ್ಲಿ ಮೂಡಿವೆಯೆಂದು ಮೊದಲೇ ಅರಿತುಕೊಳ್ಳದಿದ್ದರೆ ಓದುಗನು ನಿರಾಶನಾಗಬಹುದು. ಹಳ್ಳಿಗರಲ್ಲಿ ಕಳೆದು ಹೋದ ಚರಿತ್ರಸಂಪತ್ತಿಯನ್ನು ಪುನರುಜ್ಜೀವಿಸುವ ಉದ್ದೇಶದಿಂದಲೇ ಇವು ಬರೆಯಲ್ಪಟ್ಟಿವೆ, ಆ ದೃಷ್ಟಿಯಿಂದಲೇ ಇವನ್ನೋದಬೇಕು.

ಶ್ರೀ. ಆನಂದಕಂದರು ಇಲ್ಲಿ ಬಳಸಿದ ಭಾಷೆಯನ್ನು ಕುರಿತು ಒಂದೆರಡು ಮಾತು ಹೇಳಬೇಕಾಗಿದೆ. ಹಳ್ಳಿಗರಿಗಾಗಿ ಇವನ್ನು ಬರೆದಿದ್ದರೆ ಬಿತ್ತರಿಸಿದ್ದರೆ, ಅವರಿಗೆ ತಿಳಿಯುವ ಗ್ರಾಮ್ಯಶೈಲಿಯಲ್ಲೇ ಪೂರ್ತಿಯಾಗಿ ಬರೆಯಬಹುದಾಗಿತ್ತು. ಹಾಗೆ ಮಾಡದೆ ಸಾಮಾನ್ಯ ಕತೆಗಳಲ್ಲಿ ಮಾಡುವಂತೆ ಇಲ್ಲಿಯೂ ಸಂಭಾಷಣೆಗಳಿಗೆ ಮತ್ತು ಉತ್ತಮಪುರುಷೋಕ್ತಿಗಳಿಗೆ ಮಾತ್ರ ಬಳಕೆ ಮಾತನ್ನುಪಯೋಗಿಸಿದ್ದಾರೆ. ಆದರೆ ಹಾಗೆ ಮಾಡುವಾಗ ತಾವು ಶತಮಾನಗಳ ಹಿಂದಿನ ವ್ಯಕ್ತಿಗಳ ಬಾಯಿಯಿಂದ ಮಾತಾಡಿಸುವುದನ್ನು ಮರೆತಂತೆ ಇಂದು ಜನರ ಬಾಯಲ್ಲಿರುವ ಅಂದಿಗೆ ಅಸ್ವಾಭಾವಿಕವಾದ ಶೈಲಿಯನ್ನೇ ಉಪಯೋಗಿಸಿದ್ದು ಸಮಂಜಸವಾಗಲಿಲ್ಲ. "ಸೀಮೆಯ ಕಲ್ಲು" ಎಂಬ ಕತೆಯಲ್ಲಿ ಬರುವ ಹಳೆಯ ಲಿಖಿತ ದಾಖಲೆಯೆಂದು ಲೇಖಕರು ನಟಿಸುವುದರ ಭಾಷೆ ತನ್ನ ಕೃತ್ರಿಮತೆಯನ್ನು ಕೂಗಿ ಕೂಗಿ ಸಾರುವಂತಿದೆ. ಇಂಥ ಸಂದರ್ಭದಲ್ಲಿ ಗ್ರಾಂಥಿಕ ಶೈಲಿಯೆ ಎಲ್ಲಕ್ಕೂ ಉಚಿತ.

ಆದರೆ ಇವು ಪುರಾರಾಧ್ಯರಿಗೆ ಕಾಣುವ ದೋಷಗಳು. ಶ್ರೀ ಆನಂದಕಂದರ ಬಳಸಿದ ಭಾಷಾಶೈಲಿ ಸಾಧ್ಯವಿದ್ದಷ್ಟು ಸರಳ ಮತ್ತು ಸುಂದರ ಶಬ್ದಗಳಿಂದ ಪಾಮರರಿಗೂ ತಿಳಿಯಬಹುದಾದಂತಿದೆ. "ಮಾತನಾಡುವ ಕಲ್ಲು" ಮುಂತಾದ ಕೆಲ ಕಥೆಗಳು ನಾಗರಿಕ ವಾಚಕರಿಗೂ ಸ್ವಾರಸ್ಯವೆನಿಸುವಂತಿವೆ. ದೇಶದ ನಾನಾ ಭಾಗಗಳಲ್ಲಿ ಜನರ ಬಾಯಲ್ಲಿ ಇನ್ನೂ ಉಳಿದಿರಬಹುದಾದ ಇಂಥ ಐತಿಹ್ಯಗಳನ್ನು ಕೂಡಿಸುವ ಸಾಹಸವನ್ನು ಯಾರಾದರೂ ಕೈಕೊಂಡರೆ ಅದು ತುಂಬ ಪ್ರತಿಫಲದಾಯಕವಾದೀತೆಂದು ಈ ಕಥೆಗಳು ತೋರಿಸಿಕೊಡುತ್ತವೆ. ಅದು ನಮ್ಮ ಗ್ರಾಮೀಣ ಸಂಸ್ಕೃತಿಯ ಕೈಗನ್ನಡಿಯಾಗಬಹುದು.

ಕನಸು—ನೆನಸು

ಬರೆದವರು: ಶ್ರೀ "ಚಿದಾನಂದ" (ಪರ್ಣಕುಟಿ ಗ್ರಂಥಮಾಲೆ, ಧಾರವಾಡ; ೫೨ ಪುಟ ರೂ. ೧.)

ಶ್ರೀ ಚಿದಂಬರ ಕುಲಕರ್ಣಿಯವರ ೨೭ ಭಾವಗೀತಗಳು ಈ ಸಂಗ್ರಹದಲ್ಲಿ ಬಂದಿವೆ. ವಿದ್ಯಾರ್ಥಿ ಜೀವನದಲ್ಲಿ ಬರೆಯಲ್ಪಟ್ಟವೆಯೆಂಬುದನ್ನು ಗಮನಿಸಿದರೆ, ಈ ಕವಿತೆಗಳನ್ನು-ಅವುಗಳ ಸರ್ವಥಾ ಅನಾಕರ್ಷಕವಾದ ಮುದ್ರಣಕ್ಕೆ ನೀವು ಬೇಸರದೆ-ಓದಿದಾಗ ಮುಂದೆ ಇವರು ಸ್ನಾತಕೋತ್ತರ ಜೀವನದಲ್ಲಿ ಬರೆದಿರಬಹುದಾದ ಕವಿತೆಗಳ ಸಂಗ್ರಹವನ್ನು ಕುತೂಹಲದಿಂದ ಎದುರುನೋಡೋಣ ಎನ್ನಿಸುತ್ತದೆ. "ನಿನ್ನ ಒಂದು ಸವಿಯ ನುಡಿಯು ಸಾಕು ಬಾಳ ಕಹಿಯನು, ಮಾರ್ಪಡಿಸಲು ಸುರಲೋಕದ ಆಗಿ ಮಧುರ ಸುಧೆಯನು" ಎಂಬೀ ಬಗೆಯ ಅಕ್ಷಮ್ಯ ದೂರಾನ್ವಯಗಳನ್ನೂ "ಸ್ವಪ್ನದ್ವೈಭವ"ದಂಥ "ಅಪಿ ಮಾಷಂ ಮಷಂ ಕೃತ್ವಾ"ಗಳನ್ನೂ ಕಾಣಬಹುದಾದರೂ

"ಒಮ್ಮೆ ನೋಡಲು ಜಗವು
ಅವನೋ ಕವಿವರನ

ಕಲ್ಪ ಕಲ್ಪಾಂತರದ
ಸ್ಫೂರ್ತಿಯಿಂ ಹೊಮ್ಮಿದ

ರುದ್ರ ರಮಣೀಯತೆಯ
ಮಹಾಕಾವ್ಯವೆನಿಪುದು

ಬಗೆನೊಮ್ಮೆ ನೋಡುತಿರೆ
ಅವನೋ ರಕ್ಕಸನು

ರಾಕ್ಷಸೀಯಾಕಾಂಕ್ಷೆ
ತೃಪ್ತಿಗೋಸ್ಕರ ತನ್ನ

ನಿರ್ಮಿಸಿದ ನಿರ್ದಯದ
ಸೆರೆಮನೆಯು ಎನಿಸುವುದು"

ಎಂಬಂಥ ಸುಂದರ ವಿಚಾರಗಳೂ ಇವೆ.

ಶ್ರೀ ಸದ್ಗುರು ಕೀರ್ತನ ಮಾಲಾ

(ಶ್ರೀ ರಾಘವೇಂದ್ರ ಸ್ವಾಮಿಗಳ ಮೇಲೆ ಹರಿದಾಸರುಗಳು ರಚಿಸಿರತಕ್ಕ ಕೀರ್ತನೆಗಳ ಸಂಗ್ರಹ) ಸಂಪಾದಕರು: ಸನಾತನ ಧರ್ಮ ಸೇವಾನಿರತ ಶ್ರೀ ಜಿ. ಎಸ್. ಕೃಷ್ಣರಾವ 'ಧರ್ಮ ಸಂದೇಶ. ಸಂಪಾದಕರು. ಪ್ರಕಾಶಕರು: ಶ್ರೀ ಎಚ್. ಎನ್. ಮಾಧವರಾವ್, ಶ್ರೀ ಕೃಷ್ಣಪ್ರೆಸ್ ಚಾಮರಾಜಪೇಟೆ ಬೆಂಗಳೂರು ೨ ಕ್ರೌನ್ ಅಷ್ಟಪತ್ರದಳಂ ಪುಟಗಳು ಬೆಲೆ ೧೨ ಆಣೆ. ಪ್ರಸ್ತುತ ಪುಸ್ತಕದಲ್ಲಿ ಶ್ರೀ ರಾಘವೇಂದ್ರ ತೀರ್ಥರ ಲಘುಪರಿಚಯ, ಶ್ರೀ ಗುರುರಾಜರ ಮಹಿಮೆ, ಅವರ ವೃಂದಾವನ ಮಹಿಮೆಯನ್ನು ಸಂಕ್ಷೇಪತಃ ಕೊಟ್ಟಿರುವದಲ್ಲದೆ ಶ್ರೀ ರಾಘವೇಂದ್ರ ಸ್ವಾಮಿಗಳ ಭಕ್ತರನೇಕರು ರಚಿಸಿದ ಕೀರ್ತನಗಳನ್ನು ಕೊಡಲಾಗಿದೆ. ಇದಲ್ಲದೆ ದಿವಂಗತ ಬೇಲೂರ ಕೇಶವದಾಸರು ರಚಿಸಿದ ಕನ್ನಡ ರಾಘವೇಂದ್ರ ಸ್ತೋತ್ರವನ್ನೂ ಈ ಸಂಗ್ರಹದಲ್ಲಿ ಸೇರಿಸಲಾಗಿದೆ. ದಾಸಶ್ರೇಷ್ಠರಾದ ಶ್ರೀ ಜಗನ್ನಾಥದಾಸರು, ಗೋಪಾಲದಾಸರು, ಗೋಪಾಲ ವಿಠ್ಠಲರು, ಜನಾರ್ದನ ವಿಠ್ಠಲರು ಮೊದಲಾದವರು ಭಕ್ತಿಪರವಶರಾಗಿ ಶ್ರೀ ರಾಘವೇಂದ್ರ ಸ್ವಾಮಿಗಳವರನ್ನು ಕಣ್ತುಂಬ ನೋಡಿ ಅವರ ಮಹಿಮೆಯನ್ನು ಕೊಂಡಾಡಿದ ಕೀರ್ತನಗಳು ಅತ್ಯಂತ ಭಕ್ತಿಪ್ರದವಾಗಿದ್ದು ಎಂಥ ನಾಸ್ತಿಕನಲ್ಲಿಯೂ ಗುರುಭಕ್ತಿಯನ್ನು ಹುಟ್ಟಿಸುವಂತಹವುಗಳಾಗಿವೆ. ಸದ್ಗತಿಯನ್ನಪೇಕ್ಷಿಸುವವರು ಗುರುವಿನ ಗುಲಾಮರಾಗುವದು ಆವಶ್ಯಕವಾಗಿರುವದರಿಂದ ಅಂಥ ಗುರುವಿನ ಗುಲಾಮನಾಗುವದಕ್ಕೆ ಇಂಥ ಕೀರ್ತನೆಗಳು ಸಾಧನಗಳಾಗಿವೆ. ಶ್ರೀ ಕೃಷ್ಣರಾಯರು ಈ ಕೀರ್ತನೆಗಳನ್ನು ಒಂದೆಡೆ ಸಂಗ್ರಹಿಸಿ ಭಕ್ತರ ಮೇಲೆ ಉಪಕಾರ ಮಾಡಿದ್ದಾರೆ. ಎಲ್ಲರೂ ಇದರ ಪ್ರಯೋಜನ ಪಡೆದು ಸಂಪಾದಕರು ಬಯಸಿದಂತೆ ಸದ್ಗುರುವಿನಲ್ಲಿ ನಿರತಿಶಯವಾದ ಭಕ್ತಿಯನ್ನು ಮಾಡಿ ಸದ್ಗತಿಯನ್ನು ಹೊಂದಲೆಂದು ಹಾರಯಿಸುತ್ತೇವೆ.

ಕ ರ್ಮ ವೀ ರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :

ಶ್ರೀ. ರಂ. ರಾ. ದಿವಾಕರ

ಸಂಪಾದಕರು :

ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಶಾಧ್ಯವಾಗದು.

ಒಮ್ಮೆ ಚಂದಾದಾರರಾದವರಿಗೆ ಅವರ ಅವಧಿ ಮುಗಿಯುವ ೧೫ ದಿನ ಮುಂಚಿತವೇ ವ್ಹಿ. ಪಿ. ಮಾಡಲಾಗುವದು. ಬೇಡಾದವರು ಮೊದಲೇ ತಿಳಿಸಬೇಕು. ಚಂದಾ ಹಣ ಮುಂಗಡ.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ಣಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ

ಕರ್ಮವೀರ

ಶ್ರೀಚಾಲುಕ್ಯ ವಿಕ್ರಮ ವರ್ಷ ೮೭೩
ಅಶ್ವಿನ ಶು. ೧೨ ಸೋಮವಾರ

ಕಾಶ್ಮೀರಿಗಳ ದೃಢನಿರ್ಧಾರ

ಕಾಶ್ಮೀರ ಸಮಸ್ಯೆ ಭದ್ರತಾಮಂಡಲಕ್ಕೆ ಹೋದಂದಿನಿಂದ ಮತ್ತಷ್ಟು ಜಟಿಲವಾಗುತ್ತ ನಡೆದಿದೆ. ಭದ್ರತಾಮಂಡಲವು ನೇಮಿಸಿದ ಕಾಶ್ಮೀರ ಉಪಸಮಿತಿಯವರು ಮೊದಲಿನಿಂದಲೂ ಪಾಕಿಸ್ತಾನಪರ ಧೋರಣವನ್ನು ತಾಳುತ್ತ ಬಂದದ್ದರಿಂದ ಈ ಪ್ರಶ್ನೆ ಬಗೆಹರಿಯದಂತಾಗಿದೆ. ಅಜಾದ ಕಾಶ್ಮೀರ ಸೇನೆಗೆ ತಮ್ಮದೇನೂ ಸಂಬಂಧವಿಲ್ಲೆಂದು ಹೇಳಿದ ಪಾಕಿಸ್ತಾನ ಸರಕಾರದವರೇ ಈಗ ಅದು ತಮ್ಮ ಸೈನ್ಯದ ಒಂದು ಭಾಗವೆಂದು ಒಪ್ಪಿಕೊಂಡಿದ್ದಾರಲ್ಲದೆ ಉಪಸಮಿತಿಯು ಮೊದಲು ಆದೇಶಿಸಿದಂತೆ ಆ ಸೈನ್ಯದ ವಿಸರ್ಜನೆಗೆ ಒಪ್ಪದಾಗಿದ್ದಾರೆ. ಶಾಂತಿ ಒಡಂಬಡಿಕೆಗೆ ಅಜಾದ ಸೈನ್ಯದ ವಿಸರ್ಜನೆಯು ಅತ್ಯವಶ್ಯವಾಗಿರುವಾಗ ಆ ಬಗ್ಗೆ ಉಪಸಮಿತಿಯು ಪಾಕಿಸ್ತಾನವನ್ನು ಒತ್ತಾಯಪಡಿಸದಿರುವುದು ಸಮಿತಿಯ ಮನೋವೃತ್ತಿಯ ಮೇಲೆ ಸ್ವಚ್ಛ ಬೆಳಕು ಚೆಲ್ಲುತ್ತದೆ. ಉಪಸಮಿತಿಯಾದರೂ ಈಗ ಪಾಕಿಸ್ತಾನದ ಅಭಿಪ್ರಾಯದಂತೆಯೇ ಕುಣಿಯುತ್ತಿದೆ. ಅಜಾದ ಸೈನ್ಯದ ವಿಸರ್ಜನೆಯ ಪ್ರಶ್ನೆಯು ಈಗ ಉದ್ಭೂತವಾಗಿದೆ ಸಾರ್ವತ್ರಿಕ ಮತಗಣನೆಯು ಕಾಲಕ್ಕೆ ಉದ್ಭೂತವಾಗುವುದೆಂದು ಪಾಕಿಸ್ತಾನದಂತೆ ಈ ಸಮಿತಿಯೂ ಈಗ ಅಭಿಪ್ರಾಯಪಡುತ್ತಿದೆ. ಪರಸ್ಪರರಲ್ಲಿ ಆದ ಯುದ್ಧವಿರಾಮ ಒಡಂಬಡಿಕೆಯನ್ವಯ ಯುದ್ಧ ನಿಂತು ಶಾಂತಿ ಒಪ್ಪಂದವಾದ ಕೂಡಲೆ ಇಡೀ ಕಾಶ್ಮೀರದ ಆಡಳಿತೆಯು ಅಧಿಕಾರವು ಕಾಶ್ಮೀರ ಸರಕಾರಕ್ಕೆ ಸಲ್ಲತಕ್ಕದ್ದು. ಆದರೆ ಅಜಾದ ಕಾಶ್ಮೀರ ಸೈನ್ಯವು ತನ್ನ ಅಧಿಕಾರವನ್ನು ನಡೆಸುತಿರುವಾಗ ಇದೆಂತು ಸಾಧ್ಯವಾಗಬಲ್ಲುದು? ಮಧ್ಯಸ್ಥರ ಮೂಲಕ ಮತಭೇದದ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಿರಿ ಎಂಬ ಕಾಶ್ಮೀರ ಸಮಿತಿಯ ತತ್ಸೋಪದೇಶವನ್ನು ಹಿಂದುಸ್ತಾನವು ನಿರಾಕರಿಸಿದ್ದು ನ್ಯಾಯ್ಯವೇ ಆಗಿದೆ. ಯಾವ ಪ್ರಶ್ನೆಯು ಒಮ್ಮೆ ಬಗೆಹರಿದಿರುವುದೋ ಅಂಥ ಪ್ರಶ್ನೆಯನ್ನು ಮಧ್ಯಸ್ಥನಿಗೊಪ್ಪಿಸಲಾಗುವದೆಂದು ಹೇಳುವದರಲ್ಲಿ ಅರ್ಥವೇನು? ಕಾಶ್ಮೀರ ಪ್ರಶ್ನೆಯ ಹಿನ್ನೆಲೆಯನ್ನು ಪೂರ್ಣವಾಗಿ ತಿಳಿದುಕೊಳ್ಳದೆ, ಟ್ರೂಮನ್ ಮತ್ತು ಅ್ಯಟ್ಲೀಯವರು ಮಧ್ಯಸ್ಥನನ್ನು ನೇಮಿಸುವದಕ್ಕೆ ಒಪ್ಪಿಗೆ ಕೊಡಿರಿ ಎಂದು ಹಿಂದುಸ್ತಾನಕ್ಕೆ ಕೇಳಿಕೊಂಡರೆಂಬುದು ಸ್ಪಷ್ಟವಿದೆ. ಈ ಬೇಡಿಕೆಯನ್ನು ಹಿಂದುಸ್ತಾನವು ನಿರಾಕರಿಸಿದ್ದೇಕೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಹಿಂದುಸ್ತಾನ ಸರಕಾರ, ಪಾಕಿಸ್ತಾನ ಸರಕಾರ ಮತ್ತು ಈ ಉಪಸಮಿತಿಗಳಲ್ಲಿ ನಡೆದ ಪತ್ರವ್ಯವಹಾರವೀಗ ಪ್ರಸಿದ್ಧವಾಗಿದ್ದು ಅದನ್ನು ಓದಿದರೆ ಹಿಂದುಸ್ತಾನದ ನಿಲುವೆ ಅತ್ಯಂತ ನ್ಯಾಯ್ಯವಾಗಿದೆಂಬುದು ಮನಗಾಣದಿರದು. ಯುಕ್ತ ರಾಷ್ಟ್ರಸಂಘದ ಸಭೆಯಲ್ಲಿ ಹಿಂದ ರಾಷ್ಟ್ರ ಪ್ರತಿನಿಧಿ ಮಂಡಲದ ಧುರೀಣರು ಇದನ್ನು ಸ್ಪಷ್ಟಪಡಿಸಿದ್ದಾರೆ. ಭದ್ರತಾ ಮಂಡಲವು ಇನ್ನಾದರೂ ಸರಿಯಾದ ದಾರಿಯನ್ನು ಹಿಡಿಯುವದು ಅವಶ್ಯವಾಗಿದೆ.

ಕಾಶ್ಮೀರ ಸಮಸ್ಯೆಯಲ್ಲಿ ಕಾಶ್ಮೀರ ಉಪಸಮಿತಿಯು ತನ್ಮೂಲಾಂತರ ಭದ್ರತಾ ಮಂಡಲವು ಇಂತು ತಪ್ಪು ಧೋರಣವನ್ನು ವಹಿಸಿದ್ದರಿಂದಲೆ ಕಾಶ್ಮೀರ ಪ್ರಜೆಗಳಲ್ಲಿ ಭದ್ರತಾ ಮಂಡಲದ ನ್ಯಾಯನಿಷ್ಠುರತೆಯ ಬಗ್ಗೆ ಸಂಶಯವುಂಟಾಗಿದೆ. ಶ್ರೀನಗರದಲ್ಲಿ ಕೂಡಿದ್ದ ಕಾಶ್ಮೀರ ರಾಷ್ಟ್ರೀಯ ಪರಿಷತ್ತಿನಲ್ಲಿ ಇದು ಬಹಿರಂಗವಾಗಿ ಪ್ರದರ್ಶಿಸಲ್ಪಟ್ಟಿತು. ಈ ವಿಷಯವನ್ನು ಯುಕ್ತ ರಾಷ್ಟ್ರಸಂಘದಿಂದ ಹಿಂತೆಗೆದುಕೊಳ್ಳಬೇಕು ಎಂಬ ತಿದ್ದುಪಡಿಯು ಮುಂದೆ ಬಂದಿತು. ಅನೇಕರು ಇದಕ್ಕೆ ಬೆಂಬಲ ಕೊಟ್ಟು ಶಾಂತಿಮಾರ್ಗದಿಂದ ಈ ಪ್ರಶ್ನೆ ಬಗೆಹರಿಯದಿದ್ದರೆ ಯುದ್ಧ ಮೂಲಕವಾಗಿಯಾದರೂ ಅಜಾದ ಕಾಶ್ಮೀರ ಸೈನ್ಯವನ್ನು ಕಾಶ್ಮೀರದಿಂದ ಹೊರಗಟ್ಟಬೇಕೆಂದು ಅಭಿಪ್ರಾಯಪಟ್ಟರು. ಪರಿಷತ್ತಿನಲ್ಲಿ ಈ ಬಗೆಯ ಅಭಿಪ್ರಾಯವು ವ್ಯಕ್ತಮಾಡಲ್ಪಡಬೇಕಾದರೆ ಭದ್ರತಾ ಮಂಡಲದಲ್ಲಿ ಕಾಶ್ಮೀರ ಜನತೆಯ ವಿಶ್ವಾಸವು ಎಷ್ಟು ಉಳಿದಿಲ್ಲೆಂಬುದು ಸ್ಪಷ್ಟವಾಗುವದು. ಈ ತಿದ್ದುಪಡಿಯ ಹಿನ್ನೆಲೆ ಮತ್ತು ಪರಿಷತ್ತಿನಲ್ಲಿ ಈ ಬಗ್ಗೆ ಪಟ್ಟ ಅಭಿಪ್ರಾಯ ಇದೆಲ್ಲವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಮುಂದಿನ ಕ್ರಮವನ್ನು ಕೈಕೊಳ್ಳಲಾಗುವುದೆಂದು ಕಾಶ್ಮೀರ ಮುಖ್ಯ ಮಂತ್ರಿ ಶೇಖ ಅಬ್ದುಲ್ಲಾ ಇವರು ಆಶ್ವಾಸನ ಕೊಟ್ಟ ಬಳಿಕ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

ಈ ಪರಿಷತ್ತಿನಲ್ಲಿ ಸ್ವೀಕೃತವಾದ ಗೊತ್ತುವಳಿಗಳು ಬಹಳ ಅರ್ಥಗರ್ಭಿತವಾಗಿವೆ. ಕಂದಾಯ ಮಂತ್ರಿಗಳಾದ ಮಿರ್ಜಾ ಅಫಜಲ ಬೇಗರು ರಾಜಕೀಯ ಪರಿಸ್ಥಿತಿಯ ಬಗ್ಗೆ ಮುಖ್ಯ ಗೊತ್ತುವಳಿಯನ್ನು ಮಂಡಿಸುತ್ತ ಕಾಶ್ಮೀರಿಗಳು ಮಧ್ಯಸ್ಥಿಯನ್ನಾಗಲಿ ಸಂಸ್ಥಾನದ ವಿಚ್ಛೇದನವನ್ನಾಗಲಿ ಒಪ್ಪಲಾರರೆಂದು ಹೇಳಿದರು. ಕಾಶ್ಮೀರಿಗಳಿಗೆ ತಮ್ಮ ಭವಿತವ್ಯವನ್ನು ನಿರ್ಧರಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕು. ತಮ್ಮ ಶ್ರೇಯದ ಸಾಧನೆಗಾಗಿ ಕಾಶ್ಮೀರ ಸಂಸ್ಥಾನ ಹಿಂದುಸ್ತಾನದೊಡನೆ ಮುನ್ನಡೆವುದು ಯಾರು ಅಗಲೆ ಸಿದ್ಧವಾಗಿರುವದು.

ಕಾಶ್ಮೀರು ಇಡಿಯಾಗಿ [illegible]. ಸ್ವಂತ ಸೈನ್ಯವು, ಮುಖಂಡರಾದ ಸೈನ್ಯವು, ಗಿಲ್ಗಿಟ್ ಸಹ ಸೈನ್ಯವು. ಕಾಶ್ಮೀರ ವಿಚ್ಛೇದನೆಯನ್ನು ಮಾಡಿದರೆ ರಾಷ್ಟ್ರಘಾತ ಮಾಡಿದಂತಾಗುವದು ಎಂದು ಅವರು ಸ್ಪಷ್ಟವಾಗಿ ಹೇಳಿದರು. ಸಾರ್ವತ್ರಿಕ ಮತಗಣನೆ ತನಗೆ ಅನುಕೂಲವಾಗುವದಿಲ್ಲೆಂದು ಪಾಕಿಸ್ತಾನಕ್ಕೆ ಮನವರಿಕೆಯಾದ್ದರಿಂದ ಅದು ಬೇರೆ ಮಾರ್ಗವನ್ನು ಹುಡುಕುತಿದೆ ಎಂದು [illegible] ಯವರು ಅಭಿಪ್ರಾಯಪಟ್ಟರು. ಪಾಕಿಸ್ತಾನವು ಇಸ್ಲಾಮದ ಹೆಸರಿನಲ್ಲಿ [illegible] ಸಾಧಿಸಿಕೊಳ್ಳಲು ಪ್ರಯತ್ನಿಸುತ್ತಿದೆಂದು ಡಾ. ಕಿಚಲು ಇವರು ಅಭಿಪ್ರಾಯಪಟ್ಟು ಶೇಖ ಅಬ್ದುಲ್ಲಾ ಇವರ ಧುರೀಣತ್ವವನ್ನು ಹೊಗಳಿದರು. ಕಾಶ್ಮೀರದ ಭವಿತವ್ಯವನ್ನು ನಿರ್ಣಯಿಸುವ ಅಧಿಕಾರವು ತಮ್ಮದು ಇದರಲ್ಲಿ ಯಾರ ಮಧ್ಯಸ್ಥಿಕೆಯೂ ಸಲ್ಲದು ಎಂದು ಕಾಶ್ಮೀರಿಗಳು ಈ ಪರಿಷತ್ತಿನಲ್ಲಿ ಸ್ಪಷ್ಟವಾದ ಧೋರಣವನ್ನು ಸ್ವೀಕರಿಸಿ ಅದರಂತೆ ನಿರ್ಧಾರಕ್ಕಿಳಿದಿದ್ದಾರೆ.

ಕಾಶ್ಮೀರಿಗಳ ನಿರ್ಧಾರವು ಇಷ್ಟೊಂದು ಸ್ಪಷ್ಟವಾಗಿರುವಾಗ ಭದ್ರತಾ ಮಂಡಲದ ಉಪಸಮಿತಿಯಾಗಲಿ ಪಾಕಿಸ್ತಾನ ಸರಕಾರವಾಗಲಿ ತದ್ವಿರುದ್ಧ ಧೋರಣವನ್ನು ಸ್ವೀಕರಿಸುವದರಿಂದ ಸಮಸ್ಯೆ ಎಂದಿಗೂ ಬಗೆಹರಿಯದು. ಹಿಂದುಸ್ತಾನ ಸರಕಾರವು ಕೇಳಿಕೊಂಡಂತೆ ಅಜಾದ ಕಾಶ್ಮೀರ ಸೈನ್ಯವನ್ನು ವಿಸರ್ಜಿಸಿ ಶಾಂತಿಪ್ರಯತ್ನಗಳಿಗೆ ಮಾರ್ಗವನ್ನು ಸುಗಮ ಮಾಡಬೇಕು. ಅನಂತರ ಸಾರ್ವತ್ರಿಕ ಮತಗಣನೆಯನ್ನು ನಡೆಸಿ ಕಾಶ್ಮೀರದ ಭವಿತವ್ಯವನ್ನು ನಿರ್ಣಯಿಸಿ ಬಿಡಬೇಕು. ಒಮ್ಮೆ ಬಗೆಹರಿದ ಪ್ರಶ್ನೆಗಳಿಗಾಗಿಯೇ ಮಧ್ಯಸ್ಥನ ನೇಮಕ ಮೊದಲಾದ ಸೂಚನೆಗಳನ್ನು ಮಾಡುವದು ಸಮಂಜಸವಲ್ಲ, ಮುತ್ಸದ್ದಿತನವೂ ಅಗದು. ಆದುದರಿಂದ ಪರಿಸ್ಥಿತಿ ತೀರ ಹದಗೆಟ್ಟು ಕೈಮೀರುವ ವರೆಗೆ ದಾರಿ ನೋಡದೆ ಆದಷ್ಟು ಬೇಗ ಸೂಕ್ತ ಧೋರಣವನ್ನು ವಹಿಸಿ ಇದೊಂದು ಪ್ರಶ್ನೆಯನ್ನಾದರೂ ಸಮಾಧಾನಕರವಾಗಿ ಬಗೆಹರಿಸಿದ ಶ್ರೇಯಸ್ಸನ್ನು ಭದ್ರತಾ ಮಂಡಲವು ಪಡೆಯುವದೆಂದು ಬಲವಾಗಿ ಆಶಿಸುತ್ತೇವೆ.

× × ×

ಮುಂಬಯಿ ಪ್ರಾಂತದ ಮುಂಬಯಿ ನಗರ, ಕೊಲ್ಹಾಪುರ, ವಿಜಾಪುರ ಜಿಲ್ಹೆಗಳಲ್ಲಿಯ ಬಹು ಭಾಗವಿಪರೀತ ಮಳೆಯಿಂದ ಹಾನಿಗೀಡಾಗಿದೆ. ಪ್ರಾಂತದ ಇತರ ಹಲವು ಭಾಗಗಳಲ್ಲಿಯೂ ಮಳೆಯು ಅನರ್ಥವನ್ನು ಉಂಟು ಮಾಡಿದೆ. ಕಾಲದ್ವಳ್ಳಿ ಭೀಮಾ ನದಿಗೆ ನೆರೆ ಬಂದು ವಿಜಾಪುರ ಕೊಲ್ಹಾಪುರ ಜಿಲ್ಹೆಗಳಿಗೆ ಅಪಾರ ಹಾನಿಯಾಗಿದೆ. ಮಳೆಯ ಅನರ್ಥದ ಸುದ್ದಿಗಳು ಒಂದೇ ಸಮನೆ ಬರುತ್ತಿವೆ. ಮಳೆ ಬಿದ್ದ ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ಅನೇಕ ಮನೆಗಳು ಬಿದ್ದು ಜನರು ನಿರಾಶ್ರಿತರಾಗಿದ್ದಾರೆ. ದನಕರುಗಳು ಕುರಿಗಳು ಹರಿದು ಹೋಗಿವೆ ಕೆಲವು ಕಡೆ ಪ್ರಾಣಹಾನಿಯುಗಳೂ ಸಂಭವಿಸಿದ್ದುಂಟು. [illegible]

× × ×

[illegible]

ಕಮ್ಯುನಿಸ್ಟರ ಹಿಂಸಾತ್ಮಕ ಚಟುವಟಿಕೆಗಳು

ಹತ್ತಿಕ್ಕಲು ಹಿಂದುಸ್ತಾನ ಸರಕಾರದ ನಿರ್ಧಾರ- ಮೈಸೂರು ಘಟನೆಯ ಹೊಸ ಕರಡು- ಮೈಸೂರ ಅರಸರಿಗೆ ರಾಜಪ್ರಮುಖ ಎಂದು ಕರೆಯದೆ 'ಅರಸ' ಎಂದು ಕರೆಯಬೇಕು- ಕಾಶಿಂ ರಜ್ವಿಯ ಮೇಲೆ ಕೊಲೆಯ ಚಾರ್ಜು ಇಡಲಾಯಿತು

ಕಮ್ಯುನಿಸ್ಟರ ಹಿಂಸಾತ್ಮಕ ಚಟುವಟಿಕೆ

ಕಮ್ಯುನಿಸ್ಟರ ಹಿಂಸಾತ್ಮಕ ಚಟುವಟಿಕೆಗಳ ಸಂಬಂಧದಲ್ಲಿ ಹಿಂದುಸ್ತಾನ ಸರಕಾರದವರು ಎಪ್ಪತ್ತೆರಡು ಪುಟಗಳ ಒಂದು ಪತ್ರಿಕೆಯನ್ನು ಹೊರಡಿಸಿ ಪಕ್ಷದ ಮೇಲಿನ ಆರೋಪಪತ್ರವನ್ನು ಪ್ರಸಿದ್ಧಿಸಿದ್ದಾರೆ. ಕಮ್ಯುನಿಸ್ಟ ಪಕ್ಷವು ವ್ಯಾಪಕವಾದ ಪ್ರಮಾಣದಲ್ಲಿ ಹಿಂಸೆಯನ್ನು ಯೋಜಿಸಿ ಪ್ರಚುರಪಡಿಸಿ ಹೊರಡಿಸಿದ ಪ್ರಕಟನೆಗಳ ಅಂಶಗಳನ್ನು ಸರಕಾರದವರು ಹೊರಡಿಸಿದ ಈ ಪ್ರಕಟನೆಯಲ್ಲಿ ಕೊಡಲಾಗಿದೆ. ಸರಕಾರದ ಸೈನ್ಯವನ್ನು ಸೋಲಿಸಲು ಜನರನ್ನು ತರಬೇತುಗೊಳಿಸಲು ಕೂಟಯುದ್ಧ ಪಡೆಗಳನ್ನು ಮತ್ತು ಭಯೋತ್ಪಾದಕ ತಂಡಗಳನ್ನು ನಿರ್ಮಿಸಲು ಪಕ್ಷವು ವಿವರವಾದ ಸೂಚನೆಗಳನ್ನು ಮಾಡಿದೆ- ಕಮ್ಯುನಿಸ್ಟ ಪಕ್ಷದ ಇಂಥ ಐದು ಪ್ರಕರಣಗಳನ್ನು ಸರಕಾರದವರು ಹೊರಗೆಡಹಿದ್ದಾರೆ. ದೇಶದ ತುಂಬೆಲ್ಲ ಚಳವಳಿ ಹೂಡಬೇಕೆಂದಿದ್ದರೂ ಪಕ್ಷದ ಮುಖ್ಯ ಕೇಂದ್ರಗಳು ಈಗ ಪಶ್ಚಿಮ ಬಂಗಾಲ ಮತ್ತು ಹೈದರಾಬಾದಗಳಲ್ಲಿ ಇವೆ ಎಂಬುದು ಅವರ ಪ್ರಕಟನೆಗಳಿಂದ ತಿಳಿಯುತ್ತಿದೆಯೆಂದು ಸರಕಾರದ ಅಭಿಪ್ರಾಯ. ನೆಹರೂ ಸರಕಾರದ ಅಜ್ಞೆಗಳನ್ನು ಪಾಲಿಸಲು ನಿರಾಕರಿಸಿರಿ, ಕಾಂಗ್ರೆಸ ಸತ್ತಾಧಿಕಾರಿಗಳ ಮೇಲೆ ನಿಮ್ಮ ಶಸ್ತ್ರಾಸ್ತ್ರಗಳನ್ನು ಹಿರಿಯಿರಿ, ಸೆರೆಮನೆಯ ಬಾಗಿಲುಗಳನ್ನು ತೆರೆದು ಹೊರಬನ್ನಿರಿ, ಕೂಲಿಕಾರರು ಮತ್ತು ವಿದ್ಯಾರ್ಥಿಗಳಲ್ಲಿ ಕ್ರಾಂತಿಯನ್ನುಂಟುಮಾಡಿರಿ ಎಂದು ಮುಂತಾಗಿ ಕಮ್ಯುನಿಸ್ಟರ ಪ್ರಕಟನೆಯಲ್ಲಿ ಹೇಳಲಾಗಿದೆ. ಈ ಬಗೆಯ ಹಿಂಸಾತ್ಮಕ ಚಟುವಟಿಕೆಗಳನ್ನು ನಡೆಸುತ್ತಿರುವ ಪಕ್ಷವನ್ನು ಸರಕಾರವು ಸರ್ವಶಕ್ತಿಯಿಂದ ಹತ್ತಿಕ್ಕಲು ನಿರ್ಧರಿಸಿದ್ದು ಸಾರ್ವಜನಿಕರು, ಇದರಲ್ಲಿ ಸಕ್ರಿಯ ಸಹಾಯವನ್ನು ನೀಡಬೇಕೆಂದು ಕೊನೆಯಲ್ಲಿ ಕೇಳಿಕೊಳ್ಳಲಾಗಿದೆ.

ಮೈಸೂರು ಘಟನೆಯ ಹೊಸ ಕರಡು

ಮೈಸೂರು ಘಟನಾಸಮಿತಿಯ ಅಧಿವೇಶನವು ೩೩ ನೇ ತಾರೀಕಿನಿಂದ ಜಗನ್ಮೋಹನ ಅರಮನೆಯಲ್ಲಿ ಶ್ರೀ ಕೆಮಂಕೂರು ಸುಬ್ರಹ್ಮಣ್ಯಂ ಇವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿದೆ. ಹಿಂದುಸ್ತಾನ ಸರಕಾರದ ಸಂಸ್ಥಾನ ಶಾಖೆಯವರು ಸಂಸ್ಥಾನಗಳಿಗಾಗಿ ರಚಿಸಲ್ಪಟ್ಟ ಘಟನೆಯ ಹೊಸ ಕರಡನ್ನು ಅಧ್ಯಕ್ಷರು ಸಭಿಕರಿಗೆ ತಿಳಿಸಿ ಹೇಳಿ ಸಲಹೆ ಸೂಚನೆಗಳನ್ನು ಕೊಡಬಹುದೆಂದು ಕೇಳಿಕೊಂಡರು. ಕರಡಿನಲ್ಲಿಯ ಮುಖ್ಯಾಂಶಗಳು ಇಂತಿವೆ. ಹಿಂದೀ ಘಟನೆಯ ಕರಡಿನಲ್ಲಿಯ ೬ ನೇ ಭಾಗದಲ್ಲಿ ಕೆಲ ಚಿಕ್ಕಪುಟ್ಟ ಬದಲಾವಣೆಗಳನ್ನು ಮಾಡಿ ಸಂಸ್ಥಾನಗಳಿಗೆ ಅನ್ವಯಿಸಲಾಗಿದೆ. ಸಾಮಾನ್ಯವಾಗಿ ಪ್ರಾಂತಗಳ ಗವರ್ನರರಿಗಿದ್ದಷ್ಟೇ ಅಧಿಕಾರಗಳನ್ನು ರಾಜಪ್ರಮುಖರಿಗೆ ಕೊಡಲಾಗಿದೆ ಮತ್ತು ಹೊಸ ಘಟನೆಯನ್ವಯ ಮೈಸೂರು ಮಹಾರಾಜರನ್ನು ರಾಜಪ್ರಮುಖರೆಂದು ಕರೆಯಲಾಗುವದು. ಈ ಬಗ್ಗೆ ಕರಡಿನಲ್ಲಿ ಹಿಂದೀ ಒಕ್ಕೂಟದ ಅಧ್ಯಕ್ಷರಿಂದ ನಿಯಮಿಸಲ್ಪಟ್ಟವರು ಮೈಸೂರಿನ ಮಹಾರಾಜರೆಂದು ನಮೂದಿಸಲ್ಪಟ್ಟವರು ಮೈಸೂರ ರಾಜಪ್ರಮುಖರೆಂದು ಇದೆ. ಮೈಸೂರ ರಾಜಪ್ರಮುಖರ ಖಾಸಗಿ ವೆಚ್ಚವನ್ನು ಕೇಂದ್ರ [illegible] ನಿರ್ಣಯಿಸುವರು. ಅಧ್ಯಕ್ಷರು ಆಗಾಗ [illegible] ಆದೇಶ [illegible] ಸಂಸ್ಥಾನ [illegible] ಅದನ್ನು [illegible] ಬಹುದು. [illegible] ಸಂಸ್ಥಾನಕ್ಕೆ ಈ ಕಲಮು [illegible] ಕೇಳಿಕೊಳ್ಳ[illegible]

ಬಹುದು. ಮೈಸೂರು ಹೈಕೋರ್ಟಿಗೆ ಇತರ ಪ್ರಾಂತಗಳಲ್ಲಿಯ ಹೈಕೋರ್ಟುಗಳಷ್ಟೇ ಅಧಿಕಾರ ಮತ್ತು ಸ್ಥಾನಮಾನಗಳಿರುವವು. ಹೊಸ ಶಾಸನಸಭೆಗಳ ಚುನಾವಣೆಯಾಗುವವರೆಗೆ ಮೊದಲಿನ ಶಾಸನಸಭೆಗಳೇ ಅಸ್ತಿತ್ವದಲ್ಲಿ ಇರುವವು ಮತ್ತು ಹೊಸ ಮಂತ್ರಿಮಂಡಳದ ರಚನೆಯಾಗುವ ವರೆಗೆ ಹಳೇ ಮಂತ್ರಿಮಂಡಳವೇ ಅಧಿಕಾರದಲ್ಲಿ ಉಳಿಯುವದು. ಅಧ್ಯಕ್ಷರು ಈರೀತಿ ಕರಡನ್ನು ವಿವರಿಸಿ ಹೇಳಿದ ನಂತರ ಚರ್ಚೆ ಪ್ರಾರಂಭವಾಯಿತು. ಮುಖ್ಯಮಂತ್ರಿ ಚೆಂಗಲರಾಯರೆಡ್ಡಿಯವರು ಭಾಷಣ ಮಾಡುತ್ತ ಪ್ರಾಂತಗಳ ಗವರ್ನರರ ವೇತನವನ್ನು ನಿರ್ಣಯಿಸುವ ಅಧಿಕಾರವು ಆಯಾ ಪ್ರಾಂತೀಯ ಶಾಸನಸಭೆಗಳಿಗೇ ಇದ್ದು ಸಂಸ್ಥಾನಗಳ ರಾಜಪ್ರಮುಖರ ಖಾಸಗಿ ವೆಚ್ಚವನ್ನು ನಿರ್ಧರಿಸುವ ಅಧಿಕಾರ ಒಕ್ಕೂಟ ಅಧ್ಯಕ್ಷರಿಗೆ ಇರುವದು ಸಮಂಜಸವಲ್ಲೆಂದೂ ಈ ಬಗ್ಗೆ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಬೇಕೆಂದೂ ಹೇಳಿದರು. ಕರಡಿನಲ್ಲಿಯ ಸೂಚನೆಗಳತ್ತ ಕೂಲಂಕಷವಾಗಿ ವಿಚಾರಿಸಿ ವರದಿಮಾಡಲು ಪರಿಶೀಲಕ ಸಮಿತಿಯೊಂದನ್ನು ನೇಮಿಸಬೇಕೆಂದು ಶ್ರೀ ಸಂಪಂಗಿ ರಾಮಯ್ಯನವರು ಅಭಿಪ್ರಾಯಪಟ್ಟರು. ಮೈಸೂರು ಘಟನಾ ಸಮಿತಿಯ ಧ್ಯೇಯನಿರೂಪಣ ಗೊತ್ತುವಳಿಗೆ ಈ ಸೂಚನೆಗಳು ವಿರುದ್ಧವಾಗಿರುವವೆಂದೂ ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕವಾದ ಒಂದು ಘಟನೆಯನ್ನು ರಚಿಸಿ ಅದನ್ನು ಹಿಂದೀ ಘಟನೆಯಲ್ಲಿ ಸೇರಿಸಬೇಕೆಂದೂ ಹುಚ್ಚೇಗೌಡರು ಅಭಿಪ್ರಾಯಪಟ್ಟರು. ಮಹಾರಾಜರ ಅಧಿಕಾರಗಳನ್ನೆಲ್ಲ ಕಸಿದುಕೊಂಡ ಬಳಿಕ ಅವರನ್ನು ಎಂತು ಕರೆದರೂ ಅಷ್ಟೆ; ದೇಶದಲ್ಲಿನ ವಿಘಾತಕ ಶಕ್ತಿಗಳೆಲ್ಲ ಪ್ರತಿಬಂಧಿಸಲ್ಪಡಬೇಕು ಎಂದು ಮಹಮ್ಮದ ಹನೀಫರು ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜರನ್ನು ರಾಜಪ್ರಮುಖರೆಂದು ಕರೆಯದೆ ಅರಸರೆಂದು ಕರೆಯಬೇಕೆಂಬ ನಿರ್ಣಯ ಸ್ವೀಕೃತವಾಯಿತು. ಮಹಾರಾಜರೆಂದೇ ಕರೆಯಬೇಕೆಂಬ ತಿದ್ದುಪಡಿ ನಿರಾಕೃತವಾಯಿತು.

ಔದ್ಯೋಗಿಕ ಬಾಂಧವ್ಯ ಕಾಯದೆ ತಿದ್ದುಪಡಿ

ಕೇಂದ್ರ ಸರಕಾರದವರು ಸುಗ್ರೀವಾಜ್ಞೆಯೊಂದನ್ನು ಹೊರಡಿಸಿ ಒಂದು ಪ್ರಾಂತಕ್ಕಿಂತ ಹೆಚ್ಚು ಪ್ರಾಂತಗಳಲ್ಲಿ ಶಾಖೆಗಳಿರುವ ಬ್ಯಾಂಕುಗಳ ಎಲ್ಲ ಔದ್ಯೋಗಿಕ ತಂಟೆಗಳನ್ನು ಕೇಂದ್ರದ ಕಡೆಗೆ ತೆಗೆದುಕೊಂಡದ್ದರಿಂದ ಮುಂಬಯಿಯ ಎಲ್ಲ ಬ್ಯಾಂಕಿಂಗ ಕಂಪನಿಗಳನ್ನು ಮುಂಬಯಿ ಔದ್ಯೋಗಿಕ ಕಾಯದೆಯ ಕಕ್ಷೆಯಿಂದ ಹೊರಪಡಿಸುವ ಮಸೂದೆಯೊಂದನ್ನು ಕೂಲಿಕಾರ ಮಂತ್ರಿಗಳಾದ ಶ್ರೀ ಗುಲಝಾರಿಲಾಲ ನಂದಾ ಇವರು ೨೩ ನೇ ತಾರೀಕಿನ ದಿನ ಮುಂಬಯಿ ಶಾಸನ ಸಭೆಯಲ್ಲಿ ಮಂಡಿಸಿದರು. ಕೋರ್ಟಿನ ಅಪ್ಪಣೆ ಪಡೆಯದೆ ಯಾವ ವಕೀಲನೂ ಕೂಲಿಕಾರರ ಕೋರ್ಟಿನಲ್ಲಿ ಹಾಜರಾಗತಕ್ಕದ್ದಲ್ಲೆಂಬ ಈ ಮಸೂದೆಯಲ್ಲಿ ಹೇಳಿರುವದರಿಂದ ವಕೀಲರು ಅನವಶ್ಯಕವಾಗಿ ಖಟ್ಲೆಗಳನ್ನು ಮುಂದಕ್ಕೆ ಹಾಕಿಸುವರೆಂಬ ಆರೋಪಕ್ಕೆ ಅವಕಾಶವಿಲ್ಲದಂತಾಗಿದೆ ಎಂದು ಶ್ರೀ ನಂದಾ ಇವರು ಹೇಳಿದರು. ಕೂಲಿಕಾರರ ಸಂಘಗಳನ್ನು ಬಲಗೊಳಿಸುವ ಉದ್ದೇಶದಿಂದ ಪ್ರಾತಿನಿಧಿಕ ಸಂಘ ಹಾಗು ಒಡೆಯರಲ್ಲಿ ಒಡಂಬಡಿಕೆಯಾದರೆ ಅದರ ಹಿನ್ನೆಲೆಯನ್ನು ವಿಚಾರಿಸದೆ ಅದನ್ನು ಜಾರಿಯಲ್ಲಿ ತರಬೇಕೆಂದು ಈ ಮಸೂದೆಯಲ್ಲಿ ಹೇಳಿದೆ. ಆದರೆ ಕೋರ್ಟು [illegible] ಇಲ್ಲದೆ ಪಂಚಾಯತದಾರರಿಗೆ [illegible] ಅಲ್ಪಮತ, ಬೋನಸ, ಅವಾಸ್ತವ [illegible] [illegible] ಅನ್ವಯಿಸುವದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು. ಅನಂತರ ರೇಲ್ವೆ ಕೂಲಿಕಾರ ಪ್ರತಿನಿ-

ಧಿಗಳೂ ಸಮಾಜವಾದಿಗಳೂ ಆಗಿರುವ ಪೀಟರ ಅಲ್ವಾರಿಸರು ಮಸೂದೆಯನ್ನು ವಿರೋಧಿಸಿ ಭಾಷಣ ಮಾಡಿದರು. ಕೂಲಿಕಾರರ ಸಾಂಘಿಕ ಶಕ್ತಿಯನ್ನು ದುರ್ಬಲಗೊಳಿಸಲು ಸರಕಾರದ ಕೂಲಿಕಾರ ಧೋರಣವು ಹೊರಟಿದೆಯೆಂದೂ ಒತ್ತಾಯದ ಪಂಚಾಯತಿಯು ಮುಂಬಯಿ ಹೊರತು ಬೇರೆಎಲ್ಲಿಯೂ ಇಲ್ಲವೆಂದೂ ಅವರು ಹೇಳಿದರು. ಸಂಪು ಹೂಡುವದು ಕೂಲಿಕಾರರ ಹಕ್ಕೆಂದೂ ಅಭಿಪ್ರಾಯಪಟ್ಟರು. ರೇಲ್ವೆ ಕೆಲಸಗಾರರ ಇನ್ನೊಬ್ಬ ಪ್ರತಿನಿಧಿಗಳಾದ ಪೇಡಗೀಕರರು ಪ್ರಾತಿನಿಧಿಕ ಸಂಘಕ್ಕೆ ಆಯಾ ಉದ್ಯೋಗಗಳ ಎಲ್ಲ ಕೂಲಿಕಾರರ ಪರವಾಗಿ ಒಡಂಬಡಿಕೆಯ ಅಧಿಕಾರವಿತ್ತದ್ದನ್ನು ವಿರೋಧಿಸಿದರು. ಡಾ. ಅಂಬೇಡ್ಕರರರು ಮಸೂದೆಗೆ ಬೆಂಬಲವಿತ್ತರು. ಯುಸುಫ ಮೆಹರಅಲ್ಲಿಯವರು ಪ್ರತಿಯೊಂದು ಉದ್ಯೋಗದ ಬಗ್ಗೆ ಒಂದೇ ಕೂಲಿಕಾರ ಸಂಘವಿರುವದವಶ್ಯವಾಗಿದ್ದರೂ ಹಿಂದುಸ್ತಾನದ ಸದ್ಯದ ಪರಿಸ್ಥಿತಿಯಲ್ಲಿ ಅದು ಶಕ್ಯವಿಲ್ಲೆಂದು ಅಭಿಪ್ರಾಯಪಟ್ಟರು.

೨೭ ನೇ ತಾರೀಕಿನ ದಿವಸ ಕೂಲಿಕಾರ ಮಂತ್ರಿಗಳು ಸರಕಾರದ ಧೋರಣವನ್ನು ಸ್ಪಷ್ಟೀಕರಿಸುತ್ತ ವಿರೋಧಕರ ಆರೋಪಗಳನ್ನು ಖಂಡಿಸಿದರು. ಇಂಥ ಕಾಯದೆಗಳಿಂದ ಕೂಲಿಕಾರರ ಸಂಘಗಳ ಬೆಳವಣಿಗೆಗೆ ಸಹಾಯವೇ ಆಗಿದೆಯೆಂಬದನ್ನು ೧೯೩೯ ರಲ್ಲಿದ್ದ ಜವಳಿ ಕೂಲಿಕಾರ ಸಂಘಗಳ ಸದಸ್ಯರ ಮತ್ತು ೧೯೪೯ ರಲ್ಲಿದ್ದ ಸದಸ್ಯರ ಅಂಕೆಗಳನ್ನು ತುಲನೆ ಮಾಡಿ ತೋರಿಸಿದರು. ಅವರು ತಮ್ಮ ಭಾಷಣದಲ್ಲಿ ಸರಕಾರವು ವಿಶಿಷ್ಟ ಸಂಘಕ್ಕೆ ಮನ್ನಣೆ ಕೊಡುತ್ತಿರುವ ಆರೋಪವನ್ನು ನಿರಾಕರಿಸಿ ಪ್ರಾಂತದಲ್ಲಿಯ ಪ್ರಾತಿನಿಧಿಕ ಸಂಘಗಳಲ್ಲಿ ೬ ಸಂಘಗಳು ಕಮ್ಯುನಿಸ್ಟರ ನೇತೃತ್ವದಲ್ಲಿ ಇವೆಯೆಂದು ಮುಂತಾಗಿ ಹೇಳಿದರು. ಶ್ರೀ ತುಳಸೀದಾಸ ಜಾಧವರು ಮಂಡಿಸಿದ ತಿದ್ದುಪಡಿ ೯ ವಿರುದ್ಧ ೧೧೦ ಮತಗಳಿಂದ ನಿರಾಕರಿಸಲ್ಪಟ್ಟಿತು.

ಪ್ರಾಥಮಿಕ ಶಿಕ್ಷಣ ಮಸೂದೆ, ಹಿಂದೀ ವೈದ್ಯಕ ಪದ್ಧತಿ ಮಂಡಲದ ಅವಧಿಯನ್ನು ೧೯೫೦ ಜನೆವರಿ ೩೧ ರ ವರೆಗೆ ಬೆಳೆಸುವ ಹಾಗು ಅಡಿಶನಲ್ ಸೆಶನ್ಸಜಜ್ಜರನ್ನು ವಿಶೇಷ ಜಜ್ಜರನ್ನಾಗಿ ನೇಮಿಸಲು ಬರುವಂತೆ ಸಾರ್ವಜನಿಕ ಸುರಕ್ಷಿತತೆ ಕಾಯದೆಯಲ್ಲಿ ತಿದ್ದುಪಡಿ ಮಾಡುವ ಮಸೂದೆಗಳು ಸ್ವೀಕೃತವಾದವು.

ಗುಜರಾಥ ವಿಶ್ವವಿದ್ಯಾನಿಲಯ

೨೮ ನೇ ತಾರೀಕಿನ ದಿವಸ ಗುಜರಾಥ ವಿಶ್ವವಿದ್ಯಾನಿಲಯ ಮಸೂದೆಯನ್ನು ಮುಖ್ಯ ಮಂತ್ರಿಗಳು ಮಂಡಿಸಿ, ಅಹಮ್ಮದಾಬಾದ ಖೇಡಾ, ಭಡೋಚ, ಪಂಚಮಹಾಲ, ಹಾಗು ಸುರತ ಮತ್ತು ಲೀನ ಹೊಂದಿದ ಗುಜರಾಥಿ ಸಂಸ್ಥಾನಗಳ ಮಟ್ಟಿಗೆ ಅದರ ಕಾರ್ಯಕ್ಷೇತ್ರವಿರುವದೆಂದು ಹೇಳಿ ಬಡೋದಾ ವಿಶ್ವವಿದ್ಯಾಲಯವು ಪ್ರತ್ಯೇಕ ಇರುವದರಿಂದ ಬಡೋದಾ ನಗರವು ಗುಜರಾತ ವಿಶ್ವವಿದ್ಯಾನಿಲಯಕ್ಕೆ ಸೇರುವದಿಲ್ಲೆಂದು ಹೇಳಿದರು. ಈ ಹೊಸ ವಿಶ್ವವಿದ್ಯಾಲಯವು ಕೂಡಲೆ ಪದವೀಧರೋತ್ತರ ಶಿಕ್ಷಣವನ್ನು ಕೈಕೊಳ್ಳುವದು. ಮೊದಲನೆ ಮೂರುವರುಷ ಅದು ಮನ್ನಣೆ ಕೊಡುವ ವಿಶ್ವವಿದ್ಯಾನಿಲಯವೆಂದು ಕಾರ್ಯನಡೆಸುವದು ಹತ್ತು ವರುಷಗಳ ವರೆಗೆ ಇಂಗ್ಲೀಶ ಬೋಧಭಾಷೆಯಾಗಬಹುದೆಂದೂ ರಾಷ್ಟ್ರಭಾಷೆಯು ಕಡ್ಡಾಯದ ವಿಷಯವಾಗಬೇಕೆಂದೂ ಸಮಿತಿಯು ಸೂಚಿಸಿರುವದೆಂದು ಹೇಳಿದರು ಪರೀಕ್ಷೆಗಳನ್ನು ಒಮ್ಮೆಲೆ ತೆಗೆಯುವದು ವ್ಯವಹಾರ್ಯವಾಗುವದಿಲ್ಲವಾದ್ದರಿಂದ ಕ್ರಮಶಃ ಅದಕ್ಕೆ ಮಹತ್ವ ಕೊಡುವದನ್ನು ಕಡಮೆ ಮಾಡಲಾಗುವದೆಂದು ಹೇಳಿದರು.

ಗುಜರಾಥದ ಅನೇಕ ಸದಸ್ಯರು ಮಸೂದೆಗೆ ಹಾರ್ದಿಕ ಬೆಂಬಲವಿತ್ತರು. ಪುರುಷೋತ್ತಮದಾಸ ತ್ರಿಕಮದಾಸರು ಪ್ರಾದೇಶಿಕ ಭಾಷೆಯನ್ನು ಬೋಧಕ ಭಾಷೆಯೆಂದು ಪರಿಗಣಿಸಿದ್ದನ್ನು ಟೀಕಿಸಿ ರಾಷ್ಟ್ರ ಭಾಷೆಯು ಬೋಧಕ ಭಾಷೆಯಾಗಬೇಕು. ಅದರಿಂದ ರಾಷ್ಟ್ರೀಯ ಐಕ್ಯಕ್ಕೆ ಸಹಾಯಕವಾಗುವುದು ಎಂದು ಮುಂತಾಗಿ ಹೇಳಿದರು. ಇನ್ನು ಹಲವರು ಮಸೂದೆಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕೃಷಿ ಅಸಮ್ಯ[illegible] ಗಳಲ್ಲಿ ಕಾರಖಾನೆಗಳನ್ನು ಸ್ಥಾಪಿಸುವ ಸಂಬಂಧದಲ್ಲಿ ಶಾಸನ ಸಭೆಯು ನೇಮಿಸಿದ ಪರಿಶೀಲಕ ಸಮಿತಿಯು ಕಾರಖಾನೆಗಳ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಹರಿಜನರಿಗೆ ಸ್ಥಳಗಳನ್ನು ಕಾಯ್ದಿರಿಸಬೇಕು. ಹಾಗು ಮುನಸಿಪಲ್ ಭಂಗೀ ಜನರಿಗೆ ಕಾರಪರೇಶನಗಳಿಂದ ವಸತಿಗಳನ್ನು ಕಟ್ಟಿಸಬೇಕು ಎಂಬ ಎರಡು ಮಹತ್ವದ ಸೂಚನೆ ಮಾಡಿರುವರೆಂದು ಮಂತ್ರಿವರ್ಯ ವರ್ತಕರು ಇಂದು ಸಭೆಯಲ್ಲಿ ಹೇಳಿದರು. ಅಹಮದಾಬಾದದ ಸದ್ಯದ ಸದಸ್ಯರು ಈ ಕಾಯದೆ ಪಾಸಾದ ಬಳಿಕ ಎರಡು ವರುಷಗಳ ವರೆಗೆ ಕಾರಪರೇಶನ್ನಿನ ಸದಸ್ಯರಾಗಿ ಉಳಿಯಬೇಕೆಂದೂ ಸಮಿತಿಯು ಅಭಿಪ್ರಾಯಪಟ್ಟದೆ.

ಕಾಶಿಂ ರಜ್ವಿಯ ಖಟ್ಲೆ

ಇಮ್ರೋಜ ಪತ್ರಿಕೆಯ ಸಂಪಾದಕ ಶೋಬುಲ್ಲಾಖಾನರ ಕೊಲೆಯ ಆರೋಪದ ಖಟ್ಲೆಯಲ್ಲಿ ಆರೋಪಿಗಳಾದ ಕಾಶಿಂ ರಜ್ವಿಯವರು ಕೋರ್ಟಿನಲ್ಲಿ ತಮ್ಮ ಹೇಳಿಕೆಯನ್ನು ಕೊಡುತ್ತ ತಾನು ನಿರಪರಾಧಿ, ಇತರರ ತಪ್ಪಿಗಾಗಿ ತನ್ನ ಮೇಲೆ ಖಟ್ಲೆ ಹಾಕಲಾಗಿದೆ ಎಂದು ಹೇಳಿದರಲ್ಲದೆ ಹಿಂದುಸ್ತಾನ ಸರಕಾರವು ಹೈದರಾಬಾದದ ಮೇಲೆ ತೆಗೆದುಕೊಂಡ ಕ್ರಮವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಈ ಖಟ್ಲೆಯ ನಾಟಕ ನಡೆದಿದೆಯೆಂದೂ ಹೇಳಿದರು. ಮೃತ ಶೋಬುಲ್ಲಾಖಾನರಸಲುವಾಗಿ ತಮಗೆ ವ್ಯಸನವಾಗುತ್ತದೆ. ಅವನ ತಂದೆ ತಾಯಿ ಅವನ ಹೆಂಡತಿ ಮತ್ತು ಚಿಕ್ಕ ಮಕ್ಕಳ ಬಗ್ಗೆ ಕೂಡ ತಮಗೆ ದುಃಖವಾಗುತ್ತದೆ. ಈ ಕೊಲೆಯನ್ನು ಸರಕಾರಕ್ಕಿಂತಲೂ ಅಧಿಕವಾಗಿ ನಾನು ಖಂಡಿಸುತ್ತೇನೆ. ಸರಕಾರಪರ ವಕೀಲರು ಏನೇ ಹೇಳಿಕೊಳ್ಳಲಿ ನಾನು ಮಾತ್ರ ನಾನೇ, ನನ್ನನ್ನೆಂದಿಗೂ ಅವರು ಮಾರ್ಪಡಿಸರು" ಎಂದು ಹೇಳಿದರು. ಕಾಶಿಂರಜವಿಯು ೨½ ಗಂಟೆಗಳ ವರೆಗೆ ಅಸ್ಖಲಿತವಾದ ಇಂಗ್ಲಿಶಿನಲ್ಲಿ ತನ್ನ ಹೇಳಿಕೆಯನ್ನು ಇತ್ತನು. ಇಮ್ರೋಜ ಪತ್ರಿಕೆಯ ಧೋರಣವು ನನಗೆ ಸರಿಬಾರದಿದ್ದರೆ, ಹೈದರಾಬಾದದ ನಿಜವಾದ ಅರಸನು ನಾನಾಗಿದ್ದರೆ ಆ ಪತ್ರಿಕೆಯ ಎರಡನೆಯ ಸಂಚಿಕೆಯೇ ಹೊರಡದಂತೆ ನಾನು ನೋಡಿಕೊಳ್ಳುತಿದ್ದೆ. ಆ ಪತ್ರಿಕೆಯ ಇಷ್ಟು ಸಂಚಿಕೆಗಳು ಹೊರಟಿವೆಯೆಂಬುದೇ ಆ ಪತ್ರಿಕೆಯ ಧೋರಣಕ್ಕೆ ನಾನು ವಿರೋಧಿಯಾಗಿರಲಿಲ್ಲೆಂಬುದನ್ನು ಸ್ಪಷ್ಟಪಡಿಸುತ್ತದೆ ಎಂದು ಹೇಳಿದರು. ತಮ್ಮ ಹೇಳಿಕೆಯ ಕೊನೆಗಲ್ಲಿ, ಈ ಖಟ್ಲೆಯಲ್ಲಿ ರಾಜಕಾರಣವನ್ನು ಸಮಾವೇಶಗೊಳಿಸಲಾಗಿದೆ. ಇಂಥ ಆರೋಪಕ್ಕೆ ಉತ್ತರವೀಯಲಾರೆ. ನಾನು ಹಾಗೆ ಮಾಡಿದರೆ ಈಗಾಗಲೆ ಕಷ್ಟನಷ್ಟಗಳನ್ನನುಭವಿಸುತ್ತಿರುವ ಅನೇಕರಿಗೆ ಇಮ್ಮಡಿ ಹೆಚ್ಚಿನ ತೊಂದರೆಯಾಗಬಹುದು ಎಂದು ಮುಂತಾಗಿ ಹೇಳಿದರು. ವಿಶೇಷ ನ್ಯಾಯಾಲಯವು ಹಾಕಿದ ಐವತ್ತು ಪ್ರಶ್ನೆಗಳಲ್ಲಿ ಬಹುಸಂಖ್ಯ ಪ್ರಶ್ನೆಗಳ ಬಗ್ಗೆ ತಮಗೇನೂ ಗೊತ್ತಿಲ್ಲೆಂದು ರಜವಿಯವರು ಹೇಳಿ ಇತ್ತೇಹಾದುಲ್ ಮುಸಲ್ಮೀನ ಸಂಸ್ಥೆಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಮಾತ್ರ ಉತ್ತರವಿತ್ತರು. ನಾನು ೧೯೪೭ ರಿಂದ ೪೮ ರ ವರೆಗೆ ಇತ್ತೆಹಾದುಲ್ ಸಂಸ್ಥೆಯ ಅಧ್ಯಕ್ಷನಾಗಿದ್ದೆ ಈಗಲೂ ಇದ್ದೇನೆ. ರಜಾಕಾರಎಂಬಶಬ್ದದಅರ್ಥವು ಸ್ವಯಂಸೇವಕ ಎಂದಲ್ಲದೆ ಸೈನಿಕ ಎಂದಲ್ಲ ಮಾನವ ಸೇವೆಯೇ ರಜಾಕಾರನ ಕರ್ತವ್ಯ. ಅದು ಇತ್ತೇಹಾದುಲ್‌ದ ಒಂದು ಅಂಶ. ಆ ಸಂಘದ ನಿಯಮದಂತೆ ರಜಾಕಾರರು ಆಯುಧಗಳನ್ನು ಧರಿಸಬೇಕೆಂಬ ಅವಶ್ಯಕತೆ ಇರಲಿಲ್ಲ. ಅವರು ಶಸ್ತ್ರಾಸ್ತ್ರಧರಿಸಿದ್ದು ನನಗೆ ಗೊತ್ತಿಲ್ಲ. ನಾನಜ ದಿನಾಚರಣೆಯ ಸಭೆಗೆ ನಾನು ಅಧ್ಯಕ್ಷನಾದದ್ದು ನಿಜ. ಆದರೆ ಆ ಸಭೆಯಲ್ಲಿ ನಾನು ಮಾಡಿದ ಭಾಷಣವೆಂದು ಇಲ್ಲಿ ಹಾಜರ ಮಾಡಿದ ವರದಿ ತಪ್ಪಾದದ್ದಿದೆ. ನಾನು ನನ್ನ ಜೀವನದಲ್ಲಿ ಎಂದೂ ಅನೈತಿಕ ಶಬ್ದವನ್ನಾಗಲಿ, ಮುಸ್ಲಿಮರನ್ನು ಹಿಂಸೆ ಮತ್ತು ಅನ್ಯಾಯದ ಕೃತಿಗಳಿಗೆ ಪ್ರಚೋದಿಸುವಂಥ ಶಬ್ದಗಳನ್ನಾಗಲಿ ಆಡಿಲ್ಲ; ಮಾಫಿ ಸಾಕ್ಷೀದಾರ ಆಸೀರಳಿಗೂ ನನಗೂ ಏನೂ ಸಂಬಂಧವಿಲ್ಲ ಎಂದು ಮುಂತಾಗಿ ಹೇಳಿ ತಮ್ಮ ಮೇಲಿನ ಆರೋಪಗಳನ್ನೆಲ್ಲ ಅಲ್ಲಗಳೆದರು. ವಿಚಾರಣೆಯು ಕೊನೆಗಂಡು ನ್ಯಾಯಾಧೀಶರು ಕೊಲೆಯ, ಕೊಲೆಗೆ ಪ್ರೋತ್ಸಾಹಿಸಿದ, ಕೊಲೆಯ ಒಳಸಂಚುಮಾಡಿದ ಆರೋಪಗಳನ್ನು ರಜವಿಯ ಮೇಲೆ ಇಡಲಾಗಿದೆಂದು ಸಾರಿದರು.

ಪತಿಯಾಲಾ ಪೂರ್ವ ಪಂಜಾಬ ಸಂಸ್ಥಾನಗಳ ಒಕ್ಕೂಟ-ಸರ್ಕಾರದಲ್ಲಿ ದೇವನಾಗರಿ ಲಿಪಿಯಲ್ಲಿಯ ಗುರುಮುಖಿಯು ಬೋಧಭಾಷೆಯಾಗಿ ಹೇರಲ್ಪಟ್ಟದ್ದರ ವಿರುದ್ಧ ಹಿಂದೀ ರಾಷ್ಟ್ರ ಭಾಷೆಯ ಬೆಂಬಲಿಗರು ಸತ್ಯಾಗ್ರಹ ಪ್ರಾರಂಭಿಸಿರುವರು.

ಪ್ರಾಥಮಿಕ ಶಿಕ್ಷಣ ಮತ್ತು ಕುಲವೃತ್ತಿ

[ಮುಂಬಯಿಯ ಭಾರತೀಯ ವಿದ್ಯಾಭವನದಲ್ಲಿ ಶ್ರೀ ಸಿ. ರಾಜಗೋಪಾಲಾಚಾರ್ಯರು ತಾ. ೮-೮-೫೫ ದಿನ ಕೊಟ್ಟ ಭಾಷಣದ ಅಧಿಕೃತ ವರದಿಯಿಂದ.]

ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯಲ್ಲಿ— ಅದು ಓದೇ ಇರಲಿ, ಬರಹವೇ ಇರಲಿ; ಇಲ್ಲವೇ ಗಣಿತವೇ ಇರಲಿ; ಅಥವಾ ಕೈಗೆಲಸದ ಮೂಲಕ ಕಲಿಯುವುದಿರಲಿ, ಅಥವಾ ಆನಂದದ ಮೂಲಕ ಶಿಕ್ಷಣವಿರಲಿ; ಮಕ್ಕಳನ್ನು ಜೀವನದ ಆರಂಭದಿಂದಲೇ ನಾನಾ ಸಂಕೇತಗಳಲ್ಲಿ ಅದ್ದಿ, ಗಾಬರಿ ಮತ್ತು ನೋವುಗಳಿಗೆ ರೂಢಿಸಿ ಪಳಗಿಸಿ ಬಿಡಬೇಕೆಂದು ನಮ್ಮ ಅಭಿಪ್ರಾಯವಿರಲಿ, ಇಲ್ಲವೆ ಆಟಕ್ಕೂ ಕೆಲಸಕ್ಕೂ ಭೇದವೇ ಗೊತ್ತಾಗದಂತೆ, ಅವೆರಡರಲ್ಲೂ ಅವರಿಗೆ ಆನಂದ ದೊರಕುವಂತೆ, ಅವರನ್ನು ಅವರ ಪಾಡಿಗೆ ಕಲಿತುಕೊಳ್ಳಲು ಬಿಡಬೇಕೆಂದೇ ಇರಲಿ; ನಮ್ಮ ಪದ್ಧತಿಯನ್ನು ನಾವು ಮಾಂಟಿಸೋರಿ ಪದ್ಧತಿಯೆಂದೇ ಕರೆಯಲಿ, ಮೂಲ ಶಿಕ್ಷಣವೆನ್ನಲಿ, ಅಥವಾ ಬೇರಾವುದೊಂದು ಪ್ರಿಯವಾದ ಹೆಸರಿಂದ ಕರೆಯಲಿ— ನಮ್ಮ ಮಕ್ಕಳ ಶಿಕ್ಷಣದ ಯೋಜನೆಯನ್ನು ನಮ್ಮ ಸ್ಥಿತಿಗತಿಗಳಿಗೆ ಸರಿಹೋಗುವಂತೆಯೇ ರಚಿಸಬೇಕಾಗಿದೆ. ಏಕೆಂದರೆ, ನಮ್ಮ ಮೋಹದ ಕಲ್ಪನೆಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಸ್ಥಿತಿಗತಿಗಳನ್ನೇ ಬದಲಿಸುವ ಸಾಮರ್ಥ್ಯ ನಮಗಿಲ್ಲ. ನಿಮ್ಮ ಯೋಜನೆಗಳನ್ನೂ ಆ ಯೋಜನೆಗಳು ಕಾರ್ಯರೂಪಕ್ಕೆ ಬರಲು ಬೇಕಾಗುವ ಹಣ ಒದಗಿಸುವ ರಾಷ್ಟ್ರೀಯ ಉತ್ಪನ್ನವನ್ನೂ ಸರಳ ಗಣಿತದ ಪರೀಕ್ಷೆಗೆ ಹಚ್ಚಿದರೆ, ಆಗ ನಿಮ್ಮ ಯೋಜನೆಗಳೆಲ್ಲ ಲೆಕ್ಕಾಚಾರ ಮುಗಿಯುವುದರೊಳಗಾಗಿಯೆ ತಲೆಕೆಳಗಾಗಿ ಬಿಡುವುವು. ಆಗ ನೀವು ಕಂಗೆಟ್ಟು, ಉಷ್ಟ್ರಪಕ್ಷಿ ತನ್ನ ತಲೆಯನ್ನು ಮರಳಲ್ಲಿ ಹುಗಿದು ವಸ್ತುಸ್ಥಿತಿಯನ್ನು ಕಾಣಲೊಪ್ಪದಿರುವಂತೆ, ನಿಮ್ಮ ಮುಂದಿರುವ ಆಗುಹೋಗುಗಳನ್ನು ಗಣನೆಗೆ ತಾರದೆ ಮುಂದೊತ್ತಬೇಕಾಗುವುದು.

ಪ್ರಾಥಮಿಕ ಶಿಕ್ಷಣ ಅನಿವಾರ್ಯವಲ್ಲ

ನಮ್ಮ ಇಂದಿನ ಧ್ಯೇಯಕ್ಕೆ ಪ್ರಾಥಮಿಕ ಶಿಕ್ಷಣ ಅಷ್ಟು ಅನಿವಾರ್ಯವೆಂದು ಹೇಳಬರುವುದಿಲ್ಲ. ಆದರೂ ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲವೆನ್ನಬಾರದು. ನಮ್ಮ ಮಕ್ಕಳನ್ನು ಸರಿಯಾದ ರೀತಿಯಲ್ಲಿ ವಿವೇಕದಿಂದ ತಿದ್ದಿ ಬೆಳೆಸದಿದ್ದರೆ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಬಗೆಯೆಂತು? ಪಾರ್ಲಮೆಂಟಿನ ಶಾಸನಗಳಿಂದಲೂ ಲೋಕೋಪಕಾರಿ ಚಳವಳಿಗಳಿಂದಲೂ ನಮ್ಮ ದೇಶದಲ್ಲಿ ಅವ್ಯವಸ್ಥೆ, ಸುಧಾರಣೆ ಪುನರ್ಘಟನೆಗಳೆಷ್ಟೇ ಸಂಭವಿಸಿದ್ದರೂ ನಮ್ಮ ರಾಷ್ಟ್ರದ ಜೀವನಕ್ಕೆ ಆಧಾರವಾಗಿರುವ ಶ್ರಮವಿಭಾಗದ ತಂತುಗಳು ಕೌಟುಂಬಿಕ ಸಂಪ್ರದಾಯದ ಬಲದಿಂದ ಅಭಿನ್ನವಾಗಿ ಉಳಿದಿರುವುದೊಂದು ಸುದೈವ. ಮಕ್ಕಳಲ್ಲಿ ಹೆಚ್ಚಿನವರು ಇಂದಿಗೂ ತಂದೆತಾಯಿಗಳಿಗೆ ಅವರ ಕೆಲಸಬೊಗಸೆಗಳಲ್ಲಿ ನೆರವಾಗುತ್ತ ಅವರ ಕಸುಬುಗಳನ್ನು ಶಾಲೆಸಂಸ್ಥೆಗಳ ಸಹಾಯವಿಲ್ಲದೆಯೆ ಚನ್ನಾಗಿ ಕಲಿಯುತ್ತಿದ್ದಾರೆ.

ರೈತ, ಬಡಿಗ, ಸಮಗಾರ, ಭಂಗಿ, ಕಮ್ಮಾರ, ನೇಕಾರ, ಅಂಗಡಿಕಾರ, ಗಾಡೀವಾಲ- ಈ ಎಲ್ಲ ಕೋಟ್ಯಂತರ ಪಾಮರ ಜನರು ದೊಡ್ಡವರ ಮಹತ್ವಾಕಾಂಕ್ಷೆ ಧ್ಯೇಯ ಧೋರಣೆಗಳಿಂದ ರವಷ್ಟೂ ಲಿಪ್ತರಾಗದೆ, ಯಥಾಪ್ರಕಾರವಾಗಿ ಸಾಗುತ್ತಿದ್ದಾರೆಂದೇ ನಾವಿಂದು ಉಳಿದುಕೊಂಡಿದ್ದೇವೆ. ಕೆಳಗಿರುವ ಪಾಮರ, ಅಶಿಕ್ಷಿತ ಜನರು, ನಾವು ಮೇಲ್ಮಟ್ಟದಲ್ಲಿ ಮಾಡುತ್ತಿರುವ ಮಹಾ ಸಾಹಸಗಳನ್ನು ಗಮನಿಸದೆ, ನಾವು ಹಾಳುತ್ತಿರುವ [illegible] ಭಾರವನ್ನು ಹೊತ್ತಿರುವಾಗ ನಾವು ಮೇಲೆ [illegible] [illegible] ಗಳು [illegible] ಉಳಿದಿವೆ, [illegible] [illegible] [illegible] ಮಕ್ಕಳ ಗುರು

ಗಳೂ ಆಗಿದ್ದಾರೆ, ಎಂದೇ ಇಂದು ನಮ್ಮ ಆಹಾರ ಬೆಳೆಯುತ್ತಿದೆ, ಬಟ್ಟೆ ನೇಯಲ್ಪಡುತ್ತಿದೆ, ದನಕರುಗಳು ಕಾಯಲ್ಪಡುತ್ತಿವೆ, ಪಾದರಕ್ಷೆಗಳು ಹೊಲಿಯಲ್ಪಡುತ್ತಿವೆ, ಪಾಯಖಾನೆಗಳು ಸ್ವಚ್ಛವಾಗುತ್ತಿವೆ, ಗಾಡಿಯ ಚಕ್ರಗಳೂ ಹೊಗ-ನೇಗಿಲುಗಳೂ ತಯಾರಾಗುತ್ತಿವೆ ಮತ್ತು ದುರಸ್ತಿಯಾಗುತ್ತಿವೆ.

ವ್ಯವಸ್ಥೆಯನ್ನು ಕಲಕಬಾರದು

ಈ ವ್ಯವಸ್ಥೆಗಳನ್ನು ತಲೆ ಕೆಟ್ಟವನೇ ಕಲಕಲು ಪ್ರವೃತ್ತನಾಗಬಹುದಲ್ಲದೆ, ಬುದ್ಧಿಶುದ್ಧಿಯುಳ್ಳವನಾರೂ ಆಗಲಿಕ್ಕಿಲ್ಲ. ಇದನ್ನರಿತು ನಾವೀಗಲೆ ಸ್ಥಾಪಿಸಿರುವ ಮತ್ತು ಇನ್ನೂ ಸ್ಥಾಪಿಸುತ್ತಿರುವ ಶಾಲೆಗಳಲ್ಲಿ ನಾವು ಯಾವ ಯೋಜನೆಯನ್ನು ಅನುಸರಿಸಬೇಕು? ನಮ್ಮ ಕೈಗೆ ಸಿಕ್ಕುವ ಹುಡುಗರನ್ನೆಲ್ಲ ಹಿಡಿದು ಅವರನ್ನು ತಮ್ಮ ಕುಲಕಸುಬಿನಿಂದ ತಪ್ಪಿಸಿ, ನಾವು ಸ್ಥಾಪಿಸಿರುವಂಥ ಶಾಲೆಗಳಲ್ಲಿಯೆ ತಮ್ಮ ಎಲ್ಲ ಹೊತ್ತನ್ನು ಕಳೆಯುವಂತೆ ಒತ್ತಾಯಗೊಳಿಸೋಣವೆ? ಈ ಶಾಲೆಗಳು ನಾವೆಷ್ಟೇ ಪ್ರಯತ್ನಿಸಿದರೂ ಎಷ್ಟು ಕಾರ್ಯಕ್ಷಮವಾಗಬಹುದೆಂದು ನಮಗೆ ಗೊತ್ತೇ ಇದೆ. ಹೀಗಿರುವಾಗ ನಾವು ಅವರನ್ನು ಶಾಲೆಗಳಲ್ಲಿ ಬಂಧಿಸಿದರೆ ತಮ್ಮ ತಂದೆ ತಾಯಿಗಳ ವೃತ್ತಿಯನ್ನು ಸರಿಯಾಗಿ ಕಲಿಯಲು ಅವರಿಗೆ ಸಾಧ್ಯವೇ ಇಲ್ಲ. ನಮ್ಮ ಶಾಲೆಗಳಲ್ಲಿ ಅಧಿಕಾರ ನಡೆಸುತ್ತಿರುವ, ಅವಸರದಿಂದ ತರಬೇತುಗೊಳಿಸಲ್ಪಟ್ಟ ಶಿಕ್ಷಕರಾದರೂ ಆ ವೃತ್ತಿಗಳನ್ನು ಹುಡುಗರಿಗೆ ಚನ್ನಾಗಿ ಕಲಿಸಬಲ್ಲರೆಂಬ ಆಶೆಯನ್ನಿಟ್ಟುಕೊಳ್ಳುವುದು ನಿರರ್ಥಕವೇ. ಇದನ್ನು ನೆನೆದರೆ ನನಗೆ ಅಂಜಿಕೆಯಾಗುತ್ತದೆ. ಏಕೆಂದರೆ ಇಂಥ ಉಪಕ್ರಮದಿಂದಾಗಬಹುದಾದ ಅನರ್ಥಗಳು ನನ್ನ ಕಣ್ಣ ಮುಂದೆ ಸ್ಪಷ್ಟವಾಗಿಯೆ ಗೋಚರವಾಗುತ್ತಿವೆ. ಆದರೆ ನನ್ನ ಭಯ ನಿಷ್ಕಾರಣವಾಗಿದೆ. ನಾವೆಷ್ಟೇ ಹೆಣಗಾಡಿದರೂ ಸುದೈವದಿಂದ ನಮ್ಮೀ ದಬ್ಬಾಳಿಕೆಯಿಂದ ಎಷ್ಟೋ ಹುಡುಗರು ಪಾರಾಗಿಯೆ ಆಗುವರೆಂದೂ ನಮ್ಮ ಪ್ರಯತ್ನಗಳನ್ನು ಹುಸಿಗೊಳಿಸಿ ಅವರು ತಮ್ಮ ಕುಲಕಸುಬುಗಳನ್ನೇ ನಡೆಸಿಕೊಂಡು ಹೋಗುವರೆಂದೂ ನನಗೆ ವಿಶ್ವಾಸವಿದೆ. ನಮ್ಮ ಶಿಕ್ಷಣಪ್ರಸಾರದ ಮಹಾ ಧ್ಯೇಯವನ್ನೂ ಪರಂಪರಾಗತವಾದ ವೃತ್ತಿ ಉದ್ಯೋಗಗಳನ್ನು ಉಳಿಸಿಕೊಂಡು ಹೋಗುವ ಅವಶ್ಯಕತೆಯನ್ನೂ ಹೇಗೆ ಹೊಂದುಗೂಡಿಸಬಹುದು? ನಾನೊಬ್ಬ ಮಿತವಾದಿ. ಎಲ್ಲ ಬಗೆಯ ವಿಚಾರಗಳನ್ನೂ ಹದವರಿತು ಒಪ್ಪಿಕೊಂಡು ಹೋಗಬೇಕೆನ್ನುವವನು. ಅದಕ್ಕಾಗಿ, ಒತ್ತಾಯದ ಪ್ರಾಥಮಿಕ ಶಿಕ್ಷಣದ ದಂಡಯಾತ್ರೆಗೆ ಹೊರಟವರಿಗೆ ನಾನು ಕೇಳುತ್ತೇನೆ, ವಾರಕ್ಕೆ ಮೂರು ದಿನ ಶಾಲೆ ನಡೆಸಿದರೆ ಸಾಲದೆ? ಎಂದು. ಈ ಮೂರು ಶಾಲಾ ದಿನಗಳಲ್ಲಿ ನೀವು ಹುಡುಗರನ್ನು ನಿಮ್ಮ ಇಚ್ಛೆಯಂತೆ ನಡೆಸಿಕೊಳ್ಳಲೊಲ್ಲೀರೇಕೆ; ಆದರೆ ಉಳಿದ ನಾಲ್ಕು ದಿನಗಳಲ್ಲಾದರೂ ತಮ್ಮ ಹೆತ್ತವರ ಸಂಗಡ ಕೆಲಸ ಮಾಡಲು ಅವರಿಗೆ ಅನುವು ಕೊಡಿರಿ. ಆಗ ಏನಾದೀತು- ನೋಡೋಣ. ಇದರಿಂದ ನಾವು ಜಾರಿ ಬೀಳದಂತೆ ಭದ್ರತೆಯುಟ್ಟುಕೊಂಡಂತಾಗುವುದು. ಅಂದರೆ, ನಾವು ಅತ್ತ ಮುನ್ನುಗ್ಗುತ್ತಿದ್ದರೂ ಇತ್ತ ಬೆಂಗಡೆಗಿರುವ ಸಂಪರ್ಕ ಸಾಧನಗಳನ್ನು ಸರಿಯಾಗಿ ಉಳಿಸಿಕೊಂಡಂತಾಗುವುದು. ಯಾರಿಗೆ ತಮ್ಮ ತಂದೆ ತಾಯಿಗಳ ವೃತ್ತಿ ಬೇಡವೆನಿಸುವುದೋ ಅಥವಾ ಆ ಕುಲಕಸುಬೇ ಇಲ್ಲವೊ, ಯಾರ ಹೆತ್ತವರು ಪರೋಪಜೀವನದ ಯೋಜನೆಯಲ್ಲಿ, ಸರಕಾರಿ ನೌಕರಿಯ ಆಸೆಯಲ್ಲಿ, ಅಥವಾ ನಾನಾ ಪ್ರಕಾರದ ಸ್ಪರ್ಧೆ ಮತ್ತು ಸುಲಿಗೆಯ ಹಂಬಲದಲ್ಲಿ ಇರುವರೋ ಅಂಥವರು ಈ ನಾಲ್ಕು ದಿನಗಳನ್ನು ಮನಬಂದಂತೆ ಉಪಯೋಗಿಸಲಿ. [illegible] ಈ ನಾಲ್ಕು ದಿನಗಳನ್ನು ತಮ್ಮ [illegible] ವೃತ್ತಿಯನ್ನು ಕಲಿಯಲಿಕ್ಕೆ ಉಪಯೋಗಿಸಬಹುದು. ಉಳಿದ ಮೂರು ದಿನಗಳಲ್ಲಿ ಅವರು ಶಾಲೆಗೆ [illegible] [illegible] ಸನ್ನಿ [illegible].

ಇದರಿಂದ ನಮ್ಮ ಶಾಲೆಗಳ [illegible] ಯಾಗುವುದು. ಏಕೆಂದರೆ, [illegible] [illegible] ಹುಡುಗರಿಗೆ ಶಿಕ್ಷಣ ಕೊಟ್ಟು ಶಿಕ್ಷಕರಿಗೆ ಒಂದು ದಿನ ವಿಶ್ರಾಂತಿ ಲಭಿಸುವುದು.

[illegible]

ಒಂದೇ ದಿನವನ್ನು ಇಬ್ಭಾಗಿಸಬೇಕೆಂಬ ಉಪಾಯಾಂತರ ನನಗೆ ಮೆಚ್ಚಿಕೆಯಾಗುವುದಿಲ್ಲ. ಶಾಲೆಯ ಚಟುವಟಿಕೆ ಮತ್ತು ಮನೆಯ ವೃತ್ತಿ ಇವೆರಡಕ್ಕೂ ಮುಂಜಾನೆ ಸಂಜೆಯ ವೇಳೆಗಳ ಪ್ರಯೋಜನವೂ ದೊರೆಯಬೇಕು. ರೈತರ ಹುಡುಗನು ಮೂರು ದಿನ ಪೂರ್ಣವಾಗಿ ಶಾಲೆಯಲ್ಲಿದ್ದು ಅದರಿಂದ ಉಪಯೋಗ ಹೊಂದಬೇಕು ಮತ್ತು ಅದೇ ಪ್ರಕಾರ ಹೊಲದಲ್ಲಿಯೋ ಮನೆತನದ ಕಮ್ಮಟಿಗೆಯಲ್ಲಿಯೋ ಪೂರ್ಣ ನಾಲ್ಕು ದಿನಗಳನ್ನು ಕಳೆಯಬೇಕು. ಬೆಳಗಿನ ಅಥವಾ ಸಂಜೆಯ ಅನುಕೂಲತೆಗಳನ್ನು ಶಾಲೆಯಿಂದಾಗಲಿ ಮನೆಯಿಂದಾಗಲಿ ಪೂರ್ತಿಯಾಗಿ ಕಸಿದುಕೊಳ್ಳುವುದು ಒಳಿತಲ್ಲ.

× × ×

ತಪ್ಪು ತಿಳುವಳಿಕೆ

[ಮೇಲಿನ ವಿಚಾರಗಳನ್ನು ಮಾನ್ಯ ರಾಜಾಜಿಯವರು ೧೦-೮-೫೫ ದಿನ ಪತ್ರಿಕೋದ್ಯೋಗಿಗಳ ಸಭೆಯಲ್ಲಿ ಇನ್ನಷ್ಟು ವಿಶದಗೊಳಿಸಿದರು.]

ಪ್ರಶ್ನೆ: ಮಾನ್ಯರೇ, ಪ್ರಾಥಮಿಕ ಶಿಕ್ಷಣವನ್ನು ಕುರಿತ ನಿಮ್ಮ ಹೇಳಿಕೆಯ ವಿಚಾರದಲ್ಲಿ, ಪ್ರಾಂತಿಕ ಸರಕಾರಗಳು ಮುಂದಿನ ಮುಂಗಡ ಪತ್ರಿಕೆಯನ್ನು ಸಿದ್ಧಪಡಿಸುವ ಮೊದಲೇ ಈ ಪ್ರಶ್ನೆಯನ್ನು ಕೈಯಲ್ಲಿ ತೆಗೆದುಕೊಳ್ಳಬೇಕೆಂದು ನಿಮ್ಮ ಮತವೆ?

ಉತ್ತರ: ನಾನೇನೂ ಶಿಕ್ಷಣ ಮಂತ್ರಿಯಲ್ಲ. ನಾನು ಬರಿ ನನಗೆ ಹೊಳೆದುದನ್ನು ಹೇಳಿದೆ. ನನ್ನ ವಿಚಾರಧಾರೆಯನ್ನು [illegible]

[illegible]

[illegible]

ವಿಚಾರದ್ವಂದ್ವ

ಆಧುನಿಕ ಸ್ತ್ರೀಯ ಧ್ಯೇಯಗಳು

ಮೇಲಿನ ತಲೆಬರಹದ ಕೆಳಗೆ ಹಿಮ್ಮ ತಾ. ೧೯ ರ ಸಂಚಿಕೆಯಲ್ಲಿ ಕುಮಾರಿ ಶಕುಂತಲಾ ಅವರು ಬರೆದ ಲೇಖನವನ್ನೋದಿದಾಗ ಆಧುನಿಕ ಸ್ತ್ರೀಯರೆನಿಸುವವರ ತಲೆಯಲ್ಲಿ ಸೇರಿಕೊಂಡ ಕೆಲ ತಪ್ಪು ತಿಳುವಳಿಕೆಗಳ ಬಗ್ಗೆ ಕನಿಕರವುಂಟಾಯಿತು. ನಾನೇನೂ "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ವಾದಿಯಲ್ಲ. ಆದರೂ ಶ್ರೀಮತಿ ಶಕುಂತಲಾ ಅವರು ಹೇಳಿದ ಹಾದಿಯಲ್ಲಿ ಆಧುನಿಕ ಸ್ತ್ರೀಯರು ಹೊರಟಿದ್ದರೆ ಅವರು ಗಂಡಾಂತರದ ಕಡೆಗೆ ಧಾವಿಸುತ್ತಿದ್ದಾರೆಂದು ನನಗನಿಸುತ್ತದೆ. ಮೊದಲನೆಯದಾಗಿ ಪುರುಷದ್ವೇಷದೊಡನೆ ಸ್ತ್ರೀಯರ ಚಳವಳಿ ನಡೆಸುವವರ ಪರಿಣಾಮವನ್ನು ಅವರು ಮನಗಂಡಂತಿಲ್ಲ. "ಪುರುಷನ ಸ್ವಾರ್ಥದಿಂದಾಗಲಿ ಸ್ತ್ರೀಯು ಅಜ್ಞಾನದಿಂದಾಗಲಿ" ಸ್ತ್ರೀ ಶತಮಾನಗಳಿಂದ ಪುರುಷನ ದಾಸಿಯಾಗಿದ್ದಾಳೆನ್ನುವ ಅವರ ಆರೋಪ ವ್ಯಭಾರೋಪವೇ ಸರಿ. ಸ್ತ್ರೀಯು ದಾಸಿಯಾಗಿದ್ದರೆ ಅದು ಅವಳ ಅಜ್ಞಾನದಿಂದಷ್ಟೋ ಅಷ್ಟೇ ಪುರುಷನ ಅಜ್ಞಾನದಿಂದಲೂ ಇರಬಹುದು. ಸ್ತ್ರೀಗೆ ಎಲ್ಲ ಅಜ್ಞಾನದ ಸೌಕರ್ಯವನ್ನು ಕೊಟ್ಟು, ಪುರುಷನಿಗೆ ಎಲ್ಲ ಸ್ವಾರ್ಥದ ಹೊಣೆಯನ್ನೀಯುವದು ಅಪಾಯಕರ ಪಕ್ಷಪಾತವಾಗಿದೆ. ಮುಖ್ಯವಾಗಿ ಭಾರತೀಯ ಪುರುಷರ ಮೇಲೆ ಈ ಆರೋಪ ತೀರ ಅನ್ಯಾಯದ್ದು. ಇಂಗ್ಲಂಡಿನಲ್ಲಿ ಈ ಶತಕದ ಆರಂಭದಲ್ಲಿ ಸ್ತ್ರೀಯರು ಮತಾಧಿಕಾರಕ್ಕಾಗಿ ಸತ್ಯಾಗ್ರಹ ಹೂಡಬೇಕಾಗಿ ಬಂದಿದ್ದರೆ, ಭಾರತದಲ್ಲಿ ಅವರು ಕೇಳದೆಯೇ ಅದು ದೊರಕುತ್ತಿರುವುದಕ್ಕೆ ಸ್ತ್ರೀಯರ ಹೋರಾಟಕ್ಕಿಂತಲೂ ಪುರುಷರ ಔದಾರ್ಯವೇ ಕಾರಣವೆಂದು ಯಾವ ನ್ಯಾಯವಾದಿ ಸ್ತ್ರೀಯಾದರೂ ಒಪ್ಪದಿರಲು.

ಪುರುಷನಿಗೆ ಸ್ವಾರ್ಥವನ್ನು ಆರೋಪಿಸಬಹುದಾದರೆ ಸ್ತ್ರೀಗೆ ಖಂಡಿತವಾಗಿ ಮೈಗಳ್ಳತನವನ್ನು, ಹೊಣೆಗೇಡಿತನಗಳನ್ನು ಆರೋಪಿಸಬಹುದು. ವೇದಕಾಲದಲ್ಲಿ ಸ್ತ್ರೀಯರು ಮಂತ್ರದ್ರಷ್ಟಾರರಾಗಬಲ್ಲವರಾಗಿದ್ದರೆ ಮುಂದೆ ಅಜ್ಞಾನದ ಕುಂಡದಲ್ಲಿ ಅವರೇಕೆ ಮುಳುಗಿದರು? ವ್ಯವಹಾರದ, ವಿದ್ಯೆಯ ಅವಶ್ಯಕತೆಯಿಲ್ಲ ಗಂಡನಿಗೆ, ಮನೆಯಲ್ಲಿದ್ದು ಗಂಡನು ತಂದು ಹಾಕಿದ್ದನ್ನು ಒಂದಿಷ್ಟು ಅಟ್ಟು ಬಡಿಸಿದರೆ ತನ್ನ ಕಾರ್ಯವಾಯಿತೆಂದು ಹೆಂಗಸು ಆಲಸ್ಯ ಮಾಡಿರಬೇಕು. ಈ ಭಾವ ಇಂದಿಗೂ ಸ್ತ್ರೀಯರಲ್ಲಿ ಕಾಣಸಿಗುತ್ತಿದೆ. ಇಂದಿಗಾದರೂ ಅನೇಕ ಆಧುನಿಕಳೆನ್ನುವ ಸ್ತ್ರೀಯರ ಸ್ತ್ರೀ ಸ್ವಾತಂತ್ರ್ಯದ ಕಲ್ಪನೆಯೆಂದರೆ, ಪುರುಷನ ಹಣದಿಂದ ಅಲಂಕಾರ ಮಾಡಿಕೊಂಡು, ವ್ಯಾನಿಟೀ ಬ್ಯಾಗ್ ಹಿಡಿದುಕೊಂಡು ಸಭೆ ಸಮ್ಮೇಲನಗಳೆಂಬ ಹರಟೆಯ ಕಟ್ಟೆಗಳಲ್ಲಿ ಕಾಲ ಕಳೆಯುವದೆಂದೇ ಇದೆ. ಅವರು ತಂದೆಯ ಆಸ್ತಿಯಲ್ಲಿ ಪಾಲು ಕೇಳಲು ಮುಂದಾಗುತ್ತಾರಾದರೂ ಸಂಪಾದನೆಯ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಲು ಸಿದ್ಧರಾಗಿಲ್ಲ. ಗಂಡಸರಂತೆ ನೂರಾರು ಜನರಲ್ಲಿ ಬೆರೆತು ತಮ್ಮ ಮತ್ತು ಕುಟುಂಬದ ಉದರಂಭರಣ ಕಾರ್ಯದಲ್ಲಿ ನೆರವಾಗುತ್ತಿರುವ ಶ್ರಮಜೀವಿ ವರ್ಗದ ಸ್ತ್ರೀಯರು ಮೇಲಿನ ವರ್ಗಗಳ ಪರಾವಲಂಬಿ "ಆಧುನಿಕ ಸ್ತ್ರೀ"ಯರಂತೆ ಸ್ವಾತಂತ್ರ್ಯದ ಕೂಗೆಬ್ಬಿಸುತ್ತಿಲ್ಲ. ಅವರಿಗೆ ಸ್ವಾತಂತ್ರ್ಯವಿದ್ದೇ ಇದೆ. ಹೊಣೆಯುಳ್ಳದ ಹಕ್ಕುಗಳನ್ನು ಸ್ತ್ರೀಯರಿಗೆ ಕೊಡಲು ಸ್ತ್ರೀ ದಾಕ್ಷಿಣ್ಯಶಾಲಿಗಳು ಕೂಡ ಮುಂದಾಗಲಾರರು. ಸಭೆ ಸಮ್ಮೇಲನಗಳು ಸಾಮಾಜಿಕ ಕಾರ್ಯಗಳೇ ಮೊದಲಾದವುಗಳಿಗೆ ಮಾತ್ರವಲ್ಲ, ಗಂಡಸಿಗೆ ಆರೋಪಿಸಲ್ಪಡುವ ಸ್ವಚ್ಛಂದ ಕಾಮಜೀವನಕ್ಕೆ ಕೂಡ ಸ್ತ್ರೀಯರಿಗೆ ಅನುಮತಿ ಕೊಡಲು ನಾನು ಸಿದ್ಧನಿದ್ದೇನೆ. ಆದರೆ ಇದು ಪುರುಷರೊಡನೆ ಸ್ಪರ್ಧೆಗೆ ಹೇತುವಾದೀತು. ಆಗ ಅವಳು ಆ ಸ್ಪರ್ಧೆಯಲ್ಲಿ ಪುರುಷನಿಂದ ಯಾವ ದಾಕ್ಷಿಣ್ಯವನ್ನು ನಿರೀಕ್ಷಿಸಕೂಡದು. ಕೌಟುಂಬಿಕ ಜೀವನದಲ್ಲಿ ಎರಡೂ ಲಿಂಗಗಳ ಆನಂದ [illegible] ಪ್ರಮಾಣವಿದ್ದಾಗುವುದರಿಂದ ಅವಳು ಪುರುಷನಷ್ಟೇ ಹೊಣೆ ಹೊರಲು ಸಿದ್ಧಳಾಗಲಿ. ಆಗ [illegible] ಸ್ಥಿತಿಯಲ್ಲಿ ಕೇವಲ ಶಯ್ಯಾಸುಖ [illegible] ಗಂಡಸೆಂಬ ಹೆಸರು ತನ್ನ [illegible] "ಗೃಹಲಕ್ಷ್ಮಿ"ಯಾಗಿ [illegible] ಸುಖ ಮತ್ತು ಶಾಂತಿಯ [illegible] ರಚನೆಯಲ್ಲಿ [illegible] ದ್ದಾಳೆ.

ಸ್ತ್ರೀಯು ಗೃಹೇತರ ಕಾರ್ಯಗಳಿಗೆ ಮನಸುಗೊಟ್ಟರೆ ಮಕ್ಕಳ ಪಾಲನೆ ಸರಿಯಾಗಿ ನಡೆಯಲಿಕ್ಕಿಲ್ಲ, ಅಥವಾ ನಡೆದೀತೆಂಬುದು ಅಭಿಪ್ರಾಯದ ಮಾತು. ಆ ಬಗ್ಗೆ ನನಗೆ ಚಿಂತೆಯಿಲ್ಲ. ಸ್ವಲ್ಪವೇ ಕಾಲದಲ್ಲಿ ಸಮಾಜ ಅದಕ್ಕೆ ತಕ್ಕ ಉಪಾಯವನ್ನು ಸಿದ್ಧಪಡಿಸೀತೆಂಬ ಭರವಸೆ ನನಗುಂಟು. ಇಲ್ಲದಿದ್ದರೆ ಗಂಡಸೇ ಆ ಕೆಲಸಕ್ಕೆ ಕೈಕೊಟ್ಟರೆ ತಪ್ಪೇನು? ಆ ಬಗ್ಗೆ ನಾನೇನೂ ನಾಚುವದಿಲ್ಲ.

ಶಾಂತಿಯನ್ನು ಸ್ಥಾಪಿಸುವ ಸಾಮರ್ಥ್ಯ ಸ್ತ್ರೀಯರಲ್ಲೇ ಇದೆಯೆಂಬುದು ಒಣ ಜಂಬದ ಮಾತು. ಇತಿಹಾಸವನ್ನೋದಿದವರಿಗೆ ಸ್ತ್ರೀಯರೇ ಅಸಂಖ್ಯ ಯುದ್ಧಗಳ ಬೀಜಗಳನ್ನು ಬಿತ್ತಿದರಲ್ಲದೆ ಅವುಗಳನ್ನು ಅತ್ಯಂತ ಹಿಂಸ್ರವಾಗಿ ಮಾಡುವಲ್ಲಿ ಸಕ್ರಿಯವಾಗಿ ಕೆಲಸ ನಡೆಸಿದರೆಂದು ಗೊತ್ತಾಗುತ್ತದೆ. ಮಹಾಭಾರತದಿಂದ-ಹಿಡಿದ., ೧೮೫೭ ರ ಹಿಂದೀ ಸ್ವಾತಂತ್ರ್ಯ ಸಮರದ ವರೆಗೆ ಇದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ದೊರಕಿಸಬಹುದು. ೧೮೫೭ ರ ದಂಗೆ ಅಯಶಸ್ವಿಯಾಗಲು ದಿಲ್ಲಿಯಲ್ಲಿಯ 'ವೀರಮಹಿಳೆ'ಯರು ತಮ್ಮ ಗಂಡಂದಿರನ್ನು ಜರೆದು ನಿಶ್ಚಿತ ಮುಹೂರ್ತಕ್ಕಿಂತ ಒಂದು ದಿನ ಮೊದಲೇ ಯುದ್ಧಪ್ರಾರಂಭಿಸುವಂತೆ ಮಾಡಿದ್ದೂ ಕಾರಣವಾಯಿತೆಂದು ತಿಳಿಯುತ್ತದೆ. ಇಂದಿಗೂ ಸಮುವಸ್ತ್ರದ ಮೇಲಿನ ಸ್ತ್ರೀಯರ ಮೋಹ ಜಗತ್ಪ್ರಸಿದ್ಧವಾಗಿದೆ.

ಮೇಲೆ ನಾನು ಕೆಲ ಕ್ರೂರವಾದ ಮಾತುಗಳನ್ನು ಹೇಳಿದ್ದೇನೆ. ಆದರೆ ಸ್ವಪ್ನದಲ್ಲಿ ನಡೆಯುವವರನ್ನು ಬಲವಾಗಿ ಕುಲುಕದಿದ್ದರೆ ಅವರು ಹೊಂಡದಲ್ಲಿ ಬೀಳಬಹುದಾಗಿದೆ. ಸ್ತ್ರೀಯರಿಗಿರುವ ಅಸಂಖ್ಯ ಕುಂದುಕೊರತೆಗಳನ್ನು ನೀಗಿಸುವುದು ಸಮಾಜಪ್ರಗತಿಗೆ ಅವಶ್ಯವೆಂದು ನನಗೆ ಗೊತ್ತು. ಆದರೆ ಅದಕ್ಕೆ ಪುರುಷನನ್ನು ಬೈಯುವುದಾಗಲಿ ಈಗಿದ್ದ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡುವುದಾಗಲಿ ಸರಿಯಾದ ಉಪಾಯವಲ್ಲ. ಇದರಿಂದ ದೇಶದ ಪ್ರತಿಯೊಂದು ಕುಟುಂಬವೂ ಮುರಿದುಬಿದ್ದು ಅನಾಹುತವಾದೀತು. ರಾಷ್ಟ್ರ ರಾಷ್ಟ್ರ, ಜಾತಿ ಜಾತಿಗಳ ನಡುವಣ ದೋಷಾರೋಪಣೆಗಳಿಗಿಂತಲೂ ಇದರ ಫಲ ಭಯಂಕರವಾದೀತು. ಮತ್ತು ಅದರ ದುಷ್ಫಲಗಳ ಜ್ವಾಲೆ ಹಿಂದುಳಿದ ಹೆಂಗಸನ್ನೇ ಹೆಚ್ಚು ಪಾಲು ತಟ್ಟಬಹುದು. ಸ್ತ್ರೀ ಸ್ವಾತಂತ್ರ್ಯವನ್ನು ಮೆಲ್ಲಮೆಲ್ಲನೆ ರೂಪಿಸಬೇಕಾಗಿದೆ. ಇಲ್ಲದಿದ್ದರೆ ಸ್ವಾತಂತ್ರ್ಯದ ಹೊಣೆ ಹಕ್ಕುಗಳ ತಿರುಳಿನ ಅನುಭವವಿಲ್ಲದ ಸ್ತ್ರೀಯರಿಗೆ ಅದು ಗಂಟಲಲ್ಲಿ ಇಳಿಯದ ಕಡುಬು ಆದೀತು.

—ಪಾ. ವೆ.

× × ×

ಆಯುರ್ವೇದಿಕ್ ಎಸ್.ಎಮ್.ಪಿ. ಗಳ ವೇತನ

ಸರಕಾರೀ ಸಹಾಯ ಹೊಂದಿ ಹಳ್ಳಿಗಳಲ್ಲಿ ವೃತ್ತಿ ನಡೆಸುತ್ತಿರುವ ವೈದ್ಯರಿಗೆ ಕಳೆದ ೧-೧೨-೧೯೪೭ ರಿಂದ ವೇತನವನ್ನು ಪುನರ್ವಿಮರ್ಶೆ ಮಾಡುವಾಗ ಆಯುರ್ವೇದ ವೈದ್ಯರಲ್ಲಿ ಕ್ವಾಲಿಫೈಡ್ ನಾನ್‌ಕ್ವಾಲಿಫೈಡ್ ಹೀಗೆ ಭೇದ ಮಾಡಿದ್ದು ಕ್ವಾಲಿಫೈಡ್ ಎಂದೆನಿಸಿದವರಿಗೆ ವೇತನ ತಿಂಗಳ ರೂ ೧೨೦ ಮತ್ತು ನಾನ್ ಕ್ವಾಲಿಫೈಡ್ ಎಸ್. ಎಮ್. ಪಿಯವರಿಗೆ ೮೦ ವೇತನವೆಂತ ನಿಶ್ಚಯಿಸಿಕೊಡುತ್ತಿರುವರು. ವಿದ್ಯಾಪೀಠದಲ್ಲಿ ತರಬೇತ ಹೊಂದಿ, ಆಯುರ್ವೇದಿಕ್ ಭಿಷಗ್, ವೈದ್ಯಭೂಷಣ, ಭಿಷಗ್ಮಣಿ, ಆಯುರ್ವೇದ ಶಿರೋಮಣಿ, ಆಯುರ್ವೇದ ವಿದ್ವಾನ್ ಮೊದಲಾದ ಕೆಲವು ಪದವೀಧರ ಎಸ್. ಎಮ್. ಪಿಗಳು ನಾನ್ ಕ್ವಾಲಿಫೈಡ್ ಎಂತ ಸರಕಾರದವರು ಪರಿಗಣಿಸಿದ್ದರಿಂದ ಪಶುಪಾಲನೆಯ ಡ್ಯೂಟಿ ಮೊದಲಾದ ಸರ್ವ ಕಾರ್ಯಗಳನ್ನು ಸರಿಸಮಾನರೀತಿಯಿಂದ ನಿರ್ವಹಿಸುತ್ತಿರುವ ಈ ಮೇಲಿನ ಪದವೀಧರ ಎಸ್. ಎಮ್. ಪಿ. ಗಳಿಗೆ ವೇತನ ಕೊಡುವ ವಿಷಯದಲ್ಲಿ ಪಕ್ಷಪಾತವಾದಂತಾಗಿದೆ. ಇದನ್ನು ಅವಲೋಕನೆಗೆ ತಂದು ನಮ್ಮನ್ನು ಸರಿ ಸಮಾನ ರೀತಿಯಿಂದ ನಡೆಸಿಕೊಳ್ಳಬೇಕಾಗಿ ಬೇಡಿಕೊಳ್ಳುತ್ತೇನೆ.

ತಾ ೧೩-೯-೪೯ ಹಿ. ಆರ್. ಭಟ್ಟ
ಎಸ್. ಎಮ್. ಪಿ., ಅಗಸ್ಸೂರ

× × ×

ಶ್ರೀಕೃಷ್ಣಾಪುರ ಮಠದ ಎಕ್ಸಿಕ್ಯೂಟಿವ್ ಆಫೀಸರರ ಅವಗಾಹನೆಗೆ

ಎಂಡೋಮೆಂಟು ಬೋರ್ಡು ಮಠ ದೇವಾಲಯಗಳ ಅಭಿವೃದ್ಧಿಗಾಗಿ ಇರುವ ಸಂಸ್ಥೆ ಎಂದು ಹೇಳಲಾಗುತ್ತದೆ. ಆದರೆ ಮಠ ದೇವಾಲಯಗಳು ಪ್ರಗತಿಯನ್ನು ಹೊಂದಿದ್ದುದು ಜನರ ತಿಳುವಳಿಕೆಗೆ ಬರುವದಿಲ್ಲ.

ಉಡುಪಿಯ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರ ಆಡಳಿತೆಯ ಮೇಲೆ ಆರೋಪ ಹೊರಿಸಿ ಎಂಡೋಮೆಂಟು ಬೋರ್ಡು ಅಲ್ಲಿ ಒಬ್ಬರನ್ನು ಎಕ್ಸಿಕ್ಯೂಟಿವ್ ಆಫೀಸರನ್ನಾಗಿ ನೇಮಿಸಿದೆ. ಆದರೆ ಅವರ ಆಡಳಿತೆಯಲ್ಲಿ ಧಾರ್ಮಿಕ ವಿಧಿ ವಿಧಾನಗಳಿಗೆ ಅಲಕ್ಷ್ಯವಾಗುತ್ತಿದೆ. ಸುರತ್ಕಲ್ ಗ್ರಾಮದ ಶ್ರೀ ಕೃಷ್ಣಾಪುರದಲ್ಲಿಯ ಪ್ರಾಚೀನ ಮಠವು ತುಂಬ ನಾದುರಸ್ತಿಯಲ್ಲಿದ್ದು ಕೆಲವು ಕಡೆ ಮಠ ಜರಿದು ಬಿದ್ದು—ಮುಂದೆಯೂ ಇನ್ನೂ ನಷ್ಟಕ್ಕೆ ಒಳಗಾಗುವ ಭೀತಿಯಿದೆ. ನಾವು ಊರವರು ನಂಬಿಕೊಂಡು ಬಂದ ಮಠದ ಮುಖ್ಯ ಪ್ರಾಣ ದೇವರ ಗುಡಿ ಪೂರ್ಣ ಜೀರ್ಣವಾಗಿದ್ದು ಅದರ ವಿಚಾರದಲ್ಲಿಯೂ ಯಾವುದೇ ಕ್ರಮ ಕೈಗೊಂಡಿಲ್ಲ. ಸುರತ್ಕಲ್ಲಿನಿಂದ ಕೃಷ್ಣಾಪುರಕ್ಕೆ ಹೋಗುವ ಮಾರ್ಗವು ಶ್ರೀ ಮಠದಿಂದ ನಿರ್ಮಿಸಲ್ಪಟ್ಟದ್ದು ಶ್ರೀ ಮಠದಿಂದಲೇ ದುರಸ್ತಿ ಮಾಡಿಸಲ್ಪಡುವಂಥದಿತ್ತು. ಈ ವರುಷ ಅದು ಒಂದು ಕಡೆ ಜರಿದು ಬಿದ್ದು ಸಂಚಾರಕ್ಕೆ ತಡೆಯಾಗಿದೆ. ನೂರಾರು ಗ್ರಾಮವಾಸಿಗಳು ದಿನವೂ ಹಾದು ಹೋಗುವ ಈ ರಸ್ತೆಯನ್ನೂ ರಿಪೇರಿ ಮಾಡಿಸುವ ಬುದ್ಧಿ ಎಕ್ಸಿಕ್ಯೂಟಿವ್ ಆಫೀಸರರಿಗೆ ಬರಲಿಲ್ಲ. ಎಂಡೋಮೆಂಟ್ ಬೋರ್ಡು ಸಾಧಿಸುವ ಪ್ರಗತಿ ಇದೆಯೋ?

ಗ್ರಾಮಸ್ಥರು

● ಡಿಸೆಂಬರ್ ೧೫ ರ ಸಮಯಕ್ಕೆ ಬ್ರಿಟನ್ನಿನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಬಹುದೆಂದು ನಂಬಲಾಗಿದೆ.

● ಪೌಂಡಿನ ಬೆಲೆಯನ್ನು ಇಳಿಸಿದ್ದರ ಪರಿಣಾಮವಾಗಿ ಬ್ರಿಟನ್ನಿನಲ್ಲಿ ಗೋದಿಯ ದರ ಏರಿದೆ. ಏಕೆಂದರೆ ಅಲ್ಲಿಗೆ ಬರುವ ಕೆನಡದ ಗೋದಿಯ ಬೆಲೆಯನ್ನು ಕೆನಡದವರು ಆಗಲೇ ಏರಿಸಿಬಿಟ್ಟಿದ್ದಾರೆ.

ರಾಯಬಹಾದುರರು ಮಿಸ್ಟರ್ ಗಧ್ಧಾ ಆದುದು!

ಭಾರತದ ಅತಿವೃದ್ಧ ರಾಜಕಾರಣಿಗಳ ಲ್ಲೊಬ್ಬರಾದ ಡಾ. ಸಚ್ಚಿದಾನಂದ ಸಿಂಹರು ೧೯೨೧ ರಲ್ಲಿ ನಡೆದ ಒಂದು ದೊಡ್ಡ ಕುಚೋದ್ಯದ ಸ್ವಾರಸ್ಯವಾದ ವೃತ್ತಾಂತವನ್ನು "ಇಂಡಿಯನ್ ಸೋಶಿಯಲ್ ರಿಫಾರ್ಮರ್" ಪತ್ರಿಕೆಯಲ್ಲಿ ಬರೆದಿದ್ದಾರೆ.

ಡಿಸೆಂಬರ ೧೯೨೧ ರಲ್ಲಿ ಬ್ರಿಟಿಶ ಯುವರಾಜರು ಭಾರತಕ್ಕೆ ಭೆಟ್ಟಿಕೊಟ್ಟ ಸಮಯವದು. ಅವರನ್ನು ಬಿಹಾರ-ಓರಿಸಾದ ಪರವಾಗಿ ಪಾಟಣಾದಲ್ಲಿ ಸಮಾರಂಭದಿಂದ ಎದುರುಗೊಳ್ಳಲು ಆಗ ಗವರ್ನರರಾಗಿದ್ದ ಲಾರ್ಡ ಸಿಂಹರು ಸರ್ವಸನ್ನಾಹ ನಡೆಸಿದ್ದರು. ಆದರೆ ಒಂದು ತಿಂಗಳ ಹಿಂದೆ ಅವರು ರಾಜೀನಾಮೆ ಕೊಟ್ಟಿದ್ದುದರಿಂದ ಯುವರಾಜರ ಆದರ ಸತ್ಕಾರದ ಭಾರವೆಲ್ಲ, ತಾತ್ಪೂರ್ತಿಕ ಗವರ್ನರ ಸರ್ ಹವಿಲಂಡ ಲೆ ಮಾಸೂರಿಯರ್ ಅವರ ಮೇಲೆ ಬಿತ್ತು. ಅದರಲ್ಲಿ ನಡೆದ ಬೇರೆ ಒಂದೆರಡು ಅಪ್ರಿಯ ಘಟನೆಗಳಲ್ಲದೆ ಒಬ್ಬ ರಾಯಬಹಾದುರ ಮಹಾಶಯರು ಕತ್ತೆಯಾದ ಸ್ವಾರಸ್ಯವಾದ ಬುದ್ಧಿಪೂರ್ವಕ ಕುಚೋದ್ಯವೂ ಉಲ್ಲೇಖಾರ್ಹವಾಗಿದೆ

ಗವರ್ನರರು ಸರಕಾರಿ ಭವನದಲ್ಲಿ ಯುವರಾಜರನ್ನು ಗೌರವಿಸಲು ಕೊಟ್ಟ ಸಂಧ್ಯಾ ಸತ್ಕಾರ ಕೂಟದಲ್ಲಿ ಅತಿಥಿಗಳನ್ನೆಲ್ಲ ಯುವರಾಜರಿಗೆ ಪರಿಚಯ ಮಾಡಿಕೊಡುವುದಾಗಿ ಅಕಸ್ಮಾತ್ತಾಗಿ ಘೋಷಿಸಲಾಯಿತು. ಭೋಜನ ಶಾಲೆಗೂ ಮೊಗಸಾಲೆಗೂ ನಡುವೆ ಇರುವ ಇಕ್ಕಟ್ಟಾದ "ಬಂಕ"ದಲ್ಲಿ ಒಂದು ಆಸನವನ್ನು ಇದಕ್ಕಾಗಿ ನಿಲ್ಲಿಸಲಾಯಿತು. ಯುವರಾಜರ ಸಮ್ಮುಖದಲ್ಲಿ ಅನವಶ್ಯಕ ಜನಸಂದಣಿ ಸೇರಬಾರದೆಂದು ಸಚ್ಚಿದಾನಂದ ಸಿಂಹರನ್ನು ಯುವರಾಜರ ಎದುರುಗಡೆ ನಿಲ್ಲಲು ಕೇಳಿಕೊಂಡಿದ್ದರಂತೆ ಉಳಿಯುವ ಎಡೆಯಲ್ಲಿ ಅತಿಥಿಗಳು ಒಬ್ಬೊಬ್ಬರಾಗಿ ಸಮ್ಮುಖಕ್ಕೆ ಬರಬೇಕು, ಅಷ್ಟು ಹೊತ್ತಿಗೆ ಸರಿಯಾಗಿ ಅವರ ಹೆಸರಿನ ವಿಜಿಟಿಂಗ್ ಕಾರ್ಡನ್ನು ಪ್ರಥಮ ಕಾರ್ಯದರ್ಶಿ ಓದಬೇಕು ಮತ್ತು ಅತಿಥಿಗಳು ಯುವರಾಜರಿಗೆ ಬಾಗಿ ಮುಂದೆ ಹೋಗಬೇಕೆಂಬುದು ವ್ಯವಸ್ಥೆಯಾಗಿತ್ತು. ಆದರೆ ಬಂದಿದ್ದ ಅತಿಥಿಗಳೆಷ್ಟೋ ಜನರಿಗೆ ಈ ಬಗೆಯಾಗಿ ಯುವರಾಜ ಸಮ್ಮುಖಕ್ಕೆ ಕರೆಯಲ್ಪಡುವ ವಿಚಾರ ಗೊತ್ತಿದ್ದಿಲ್ಲವಾಗಿ, ಅವರು ತಮ್ಮ ಹೆಸರಿನ ಮುದ್ರಿತ ಕಾರ್ಡುಗಳನ್ನು ತಂದಿರಲಿಲ್ಲ. ಅದರಿಂದ ಅವರಿಗೆ ತಂತಮ್ಮ ಹೆಸರುಗಳನ್ನು ಬರೆದುಕೊಡಲು ಖಾಲಿ ಕಾರ್ಡಿನ ತುಣುಕುಗಳನ್ನು ಹಂಚಲಾಯಿತು.

ಆದರೆ 'ರಾಯಬಹಾದುರ' ಬಿರುದಾಂಕಿತರಾದ ಜಮೀನ್ದಾರ ಮಹಾಶಯರೊಬ್ಬರಿಗೆ ಇಂಗ್ಲೀಷು ಬರುತ್ತಿರಲಿಲ್ಲವಾದುದರಿಂದ ಅವರು ತುಂಬ ಚಡಪಡಿಸಿದರು. ಅವರಿಗೆ ತಮ್ಮ ಹೆಸರು ಬಿರುದು ಬಾವಲಿಗಳೆಲ್ಲ ಯುವರಾಜರ ಮುಂದೆ ಓದಲ್ಪಟ್ಟು ನೆರೆದ ಅಧಿಕಾರಿ ವರ್ಗಕ್ಕೆ ತಮ್ಮ ಮಹಿಮೆಯ ಪರಿಚಯವಾಗಬೇಕೆಂಬ ಅಭಿಲಾಷೆಯಿತ್ತು. ಕೊನೆಗೆ ಅವರು ಒಬ್ಬ ಎಳೆಯ ಬ್ಯಾರಿಸ್ಟರರನ್ನು ಹಿಡಿದರು. ಬ್ಯಾರಿಸ್ಟರ ಮಹಾಶಯರು ಕಾರ್ಡಿನ ಮೇಲೆ ಬರೆದುಕೊಟ್ಟು, "ನೋಡಿ ನಿಮ್ಮ ಹೆಸರಿಗಿಂತಲೂ ಬಿರುದುಗಳಿಗೆ ಹೆಚ್ಚು ಮಹತ್ವ ಕೊಟ್ಟು ಬರೆದಿದ್ದೇನೆ" ಎಂದು ಕಣ್ಮರೆಯಾಗಿಬಿಟ್ಟರು.

ರಾಯಬಹಾದೂರರ ಸರತಿ ಬಂತು. ಪೂರ್ಣ ದರಬಾರ ಪೋಷಾಕಿನಲ್ಲಿದ್ದ ಅವರು ಉಬ್ಬುಬ್ಬಿ ಹುಂಜದ ನಡಿಗೆಯಿಂದ ಬಂದು ತಮ್ಮ ಕಾರ್ಡನ್ನು ಪ್ರಥಮ ಕಾರ್ಯದರ್ಶಿಯ ಕೈಯಲ್ಲಿಟ್ಟರು. ಆ ಬಡಪಾಯಿ ಅದನ್ನೆತ್ತಿ ನೋಡುತ್ತಲೆ ಹೊಟ್ಟೆಶೂಲೆಯೆದ್ದವನಂತೆ ಮುಖ ಕಿವುಚತೊಡಗಿದನು. ಒಂದು ಕ್ಷಣದ ನಂತರ ಅದನ್ನೋದುವ ಪ್ರಯತ್ನವೇನನ್ನೂ ಮಾಡದೆ ಅವನು ಎರಡನೆ ಅಧಿಕಾರಿಯ ಕೈಗೆ ಅದನ್ನು ದಾಟಿಸಿದನು. ಎರಡನೆ ಅಧಿಕಾರಿಯ ಮೇಲೂ ಅದು ಅದೇ ಪರಿಣಾಮವನ್ನು ಮಾಡಿತು. ಏನೋ ಪ್ರಮಾದ ನಡೆದಿರಬೇಕೆಂದು ಡಾ. ಸಿಂಹರು ಅದನ್ನ [illegible] ಪ್ರಯತ್ನ ಮಾಡುವ ಮೊದಲೇ ಅದು ಮೂರನೆ ಅಧಿಕಾರಿಯ ಕೈಸೇರಿತ್ತು. ಆ ಮಹಾಶಯ ಅದನ್ನೆತ್ತಿಕೊಂಡವನೇ ಗಟ್ಟಿಯಾಗಿ Mr. Howa ("ಶ್ರೀಮಾನ್ ಗಂಡುಕತ್ತೆ") ಎಂದೋದಿಬಿಟ್ಟನು. ಸಚ್ಚಿದಾನಂದ ಸಿಂಹರಿಗೆ ಬಹಳ ಉಬ್ಬಸ ಬಂದಂತಾಯಿತು. ಸಭೆಯಲ್ಲಿ ಗುಜು ಗುಜು ಎದ್ದಿತು. ಆದರೆ ರಾಯಬಹಾದುರ ಮಹಾಶಯರಿಗೆ ಅದೊಂದೂ ಗೋಚರಕ್ಕೇ ಬರಲಿಲ್ಲ. ಅವರು ಹೆಮ್ಮೆಯಿಂದ ಆ ಹೆಸರು ಕರೆದೊಡನೆ ನಿಜವಾದ ಭಾರತೀಯ ಪದ್ಧತಿಯಲ್ಲಿ ಯುವರಾಜರ ಮುಂದೆ ನೆಲಕ್ಕೆ ಹಣೆಗಚ್ಚಿ ಮೂರು ಸರೆಗೆ ಬಾಗಿ ಮನ್ನಣೆಯನ್ನರ್ಪಿಸಿ ಮುಂದೆ ಸಾಗಿದರು. ಸಭೆ ಮುಗಿಯುವವರೆಗೂ ಈ ವಾರ್ತೆಯು ಎಲ್ಲರ ಬಾಯಲ್ಲಿಯೂ. ಕಾಕ್ಟೆ'ಲ್ ಗವರ್ನರರಿಗೂ ತುಂಬ ಖೇದವಾಯಿತು. ಇಂಥ ಕುಚೋದ್ಯದ ಮೂಲವನ್ನರಿತು ಕ್ರಮ ಕೈಕೊಳ್ಳಬೇಕೆಂದು ಅವರು ಪ್ರಯತ್ನಿಸಿದರು. ಆದರೆ ಅಷ್ಟರಲ್ಲೇ ರಾಯಬಹಾದುರ ಮಹಾಶಯರು ಕಲಕತ್ತೆಗೆ ಹೋಗಿಬಿಟ್ಟಿದ್ದರು. ನಿಜ ವಿದ್ಯಮಾನಗಳು ಬೆಳಕಿಗೆ ಬರಬೇಕಾದರೆ ಹಲ ದಿನಗಳು ಹಿಡಿದವು. ಆ ಮೇಲೆ ಏನೂ ಕ್ರಮಕೈಕೊಳ್ಳಲಾಗಲಿಲ್ಲ.

ಪ್ರಜೋತ್ಪಾದನ ಕಡಿಮೆಯಾಗಲಿ!

ಡಾ. ಕಪೂರರ ಉಪದೇಶ

ಭಾರತದ ಪ್ರಜಾವೃದ್ಧಿಯ ಪ್ರಮಾಣ "ಹಿತ"ವಾಗಿಯೆ ಇದೆಯೆಂದು ನಮ್ಮ ಮುಖ್ಯ ಮಂತ್ರಿ ನೆಹರು ಅವರಿಂದಾರಂಭಿಸಿ ಅನೇಕರು ಹೇಳುತ್ತಿದ್ದಾರೆ. ಆದರೆ ಪೂರ್ವ ಪಂಜಾಬ ವೈದ್ಯ ಸಮ್ಮೇಲನದ ಅಧ್ಯಕ್ಷ ಡಾ. ಬಿ. ಎಲ್ ಕಪೂರರು ಭಾರತದಲ್ಲಿ ಸಂತಾನೋತ್ಪತ್ತಿಯ ಪ್ರಚಂಡ ವೇಗವನ್ನು ಕುರಿತು ಗಾಬರಿಯನ್ನು ವ್ಯಕ್ತಗೊಳಿಸಿ ಕೃತಕೋಪಾಯಗಳಿಂದ ಸಂತಾನ ಪ್ರತಿಬಂಧವನ್ನು ಕೈಕೊಳ್ಳಬೇಕೆಂದು ಸಾಧಿಸಿದ್ದಾರೆ.

ಡಾ. ಕಪೂರರ ಅಭಿಪ್ರಾಯದಲ್ಲಿ ನಾವು "ಹೆಚ್ಚು ಆಹಾರ ಬೆಳೆಯಿರಿ" ಎಂಬ ಪ್ರಚಾರವನ್ನು ಬಿಟ್ಟು "ಕಡಿಮೆ ಮಕ್ಕಳನ್ನು ಹಡೆಯಿರಿ" ಎಂಬ ಪ್ರಚಾರವನ್ನು ಪ್ರಾರಂಭಿಸಬೇಕು. ಬಹಳ ಮಕ್ಕಳನ್ನು ಸರಿಯಾಗಿ ಸಾಕುವ ಸಾಮರ್ಥ್ಯ ಬಡ ಹಿಂದೀಯರಿಗಿಲ್ಲ. ಭಾರತದಲ್ಲಿ ನಗರಗಳಲ್ಲಿ ಜನನ ಪ್ರಮಾಣ ನೂರಕ್ಕೆ ೪೭, ಹಳ್ಳಿಗಳಲ್ಲಿ ೪೭.೬೯ ಇದೆ. ಮರಣ ಸಂಖ್ಯೆಯಾದರೋ ಕ್ರಮವಾಗಿ ಸೇಕಡಾ ೨೩.೩ ಮತ್ತು ೨೪.೨. ಸರಾಸರಿ ತಲಾ ಉತ್ಪನ್ನ ದಿನಕ್ಕೆ ೧೧ ಪೈ ಮಾತ್ರ. ಪರಿಸ್ಥಿತಿಯನ್ನು ಹಿಡಿತಕ್ಕೆ ತಂದು ಸಂತಾನಾಭಿವೃದ್ಧಿಯನ್ನು ತಡೆಯದಿದ್ದರೆ, ಬೇಗನೆ ಎಲ್ಲವೂ ನಮ್ಮ ಕೈಮೀರಿ ಹೋಗಬಹುದು. ಬಡವರ್ಗದ ಹೆಂಗಸರು ಶ್ರೀಮಂತರಿಗಿಂತ ಹೆಚ್ಚು ಪ್ರಜೋತ್ಪಾದನ ಶಕ್ತಿಯುಳ್ಳವರಾಗಿರುವುದೊಂದು ಪ್ರಕೃತಿಯ ಕುಚೋದ್ಯ. ಸಾರ್ವಜನಿಕ ಆರೋಗ್ಯ ಶಾಖೆಯವರು ತಮ್ಮ ವರದಿಗಳಲ್ಲಿ ಈ ಪ್ರಜಾವೃದ್ಧಿ "ಹಿತ"ವಾಗಿದೆಯೆಂದು ಹೇಳಿರುವುದು ಶುದ್ಧ ತಪ್ಪು. "ಸುದೈವದಿಂದ ಪ್ಲೇಗು, ಕ್ಷಯ, ಮಲೇರಿಯ ಮೊದಲಾದ ಅನೇಕ ರೋಗಗಳಿವೆ. ಇಲ್ಲದಿದ್ದರೆ ಸ್ಥಿತಿ ಇನ್ನಷ್ಟು ಭಯಾನಕವಾಗುತ್ತಿತ್ತು" ಎಂದು ಡಾ. ಕಪೂರರು ಹೇಳಿದರು!

"ಆಹಾರ ಹೆಚ್ಚು ಬೆಳೆಯಿರಿ" ಎಂಬ ಪ್ರಚಾರ ಪತ್ರದ ಬದಲು ಸಂತತಿನಿಯಂತ್ರಣದ ವಿಷಯದಲ್ಲಿ ಜನರಿಗೆ ತಿಳಿಯಹೇಳಲು ಸರಕಾರ ಉಪಕ್ರಮಿಸಬೇಕು. ರಾಸಾಯನಿಕ ಪದ್ಧತಿ ನಿಶ್ಚಿತವಾಗಿಯೂ ಹಾನಿಕರವಾಗಿದ್ದು ಅನೇಕ ಪ್ರತೀಕಾರವೇ ಇಲ್ಲದ ರೋಗಗಳನ್ನು ಹೆಂಗಸರಲ್ಲಿ ಉಂಟುಮಾಡುವವು. ಯಾಂತ್ರಿಕ ಸಾಧನಗಳೂ ಅಪಾಯಕರವೇ. ಸಂತತಿನಿಯಂತ್ರಣದ ಆಸ್ಪತ್ರೆಗಳೇ ಇಲ್ಲದ ಈ ದೇಶದಲ್ಲಿ ಅವು ಪ್ರಚಾರಕ್ಕೆ ಬರುವುದೂ ಅಸಂಭವ. ಟ್ಯೂಬುಗಳ ಉಪಯೋಗವೇ ಎಲ್ಲಕ್ಕಿಂತ ನಿರಪಾಯಯಾದ ಸಂತತಿನಿಯಂತ್ರಣೋಪಾಯವೆಂದು ಡಾ. ಕಪೂರರ ಮತವಾಗಿತ್ತು. ಗರ್ಭಧಾರಣೆಯನ್ನು ನಿಲ್ಲಿಸಬಲ್ಲ ನಿಶ್ಚಿತವಾದ ನಿರಪಾಯಯ [illegible] ಈ ವರೆಗೆ ಕಂಡುಹಿಡಿಯಲ್ಪಟ್ಟಿಲ್ಲ. [illegible] ತಜ್ಞರು ಮಾಡುತ್ತಿರುವ ಪ್ರಯೋಗಗಳು ಆಶಾದಾಯಕವಾಗಿವೆ.

ಡಾ. ಕಪೂರರು [illegible] ಸಂತತಿನಿಯಂತ್ರಣೋಪಾಯವನ್ನೇ ಸಮರ್ಥಿಸಿದೆ, ಗರ್ಭ [illegible] ಗರ್ಭಪಾತ [illegible] ಅವಶ್ಯವೆಂದು [illegible] ದರು. ಇದು ಅಪರಾಧವೆಂದು [illegible]

ಅಸಹ್ಯ ಮತ್ತು ಪೌರಸ್ತ್ಯ ಮಕ್ಕಳು

"ಪ್ರಬಲ ಮತ್ತು ಪ್ರಾಂತಿಕ [illegible] ಮಕ್ಕಳು [illegible] ಆಗಿದರೆ ಆ ಮತ್ತು ಅವರ [illegible] ಕಾಣಿಸುತ್ತದೆ. ಆದರೆ ಪೌರಸ್ತ್ಯ ದೇಶಗಳ ಮಕ್ಕಳು [illegible] ಭಯಂಕರ [illegible] ಬೇಕಾಗಿದ್ದರು," [illegible]

[illegible]

ದೆಯಲ್ಲಿರುವವನ್ನು ರಕ್ಷಿಸಿಕೊಳ್ಳಬೇಕೆಂದೂ ಅವರ ಅಭಿಪ್ರಾಯವಾಗಿತ್ತು.

ಭಾರತದಲ್ಲಿ ಈಗ ಬಳಕೆಯಲ್ಲಿರುವ ಅರ್ಥದಲ್ಲಿ "ಇಂದ್ರಿಯ ಸಂಯಮ"ದಿಂದ ಕೂಡ ಪ್ರಜೋತ್ಪತ್ತಿಯ ಪ್ರಮಾಣವನ್ನು ಸಾಕಷ್ಟು ಕಡಿಮೆ ಮಾಡುವುದು ಸಾಧ್ಯವಿಲ್ಲೆಂದು ಡಾ. ಕಪೂರರು ಹೇಳಿದರು.

[illegible]

ಶಿಕ್ಷಣವಿಜ್ಞಾನ

ಚಿತ್ರದ ಭಾಷೆ

ಚಿತ್ರದ ಭಾಷೆಯಿಂದ ಚೈತನ್ಯಕ್ಕಿಂತ ಜಡಾಂಶ ಹೆಚ್ಚಿರುವವರಿಗೆ ಜ್ಞಾನಬೋಧ ಮಾಡುವುದು ಅನುಭವಸಿದ್ಧವಾದ ಪ್ರಾಚೀನ ಮಾರ್ಗ. ಆದರೆ ಕಾಲಕ್ರಮೇಣ ಅದರ ಅತಿ ಪ್ರಯೋಗ ಬಳಕೆಗೆ ಬಂದುದರಿಂದ ಆಧುನಿಕರು ಅದನ್ನು ಕೇವಲ ವರ್ಜ್ಯ ಎನ್ನಹತ್ತಿ, ಆ ಪ್ರಕಾರ ಶಾಲೆ ಕಾಲೇಜುಗಳಿಂದ ದೈಹಿಕ ಶಿಕ್ಷೆಯನ್ನಷ್ಟೇ ಏಕೆ, ಎಲ್ಲ ಶಿಕ್ಷೆಯನ್ನು ತೆಗೆದು ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವಾಚ್ಛಂದ್ಯವನ್ನು ಬಿತ್ತಿ ಬೆಳೆಸಿದರು. ಅದರ ಪರಿಣಾಮವಾಗಿ ಪಾಶ್ಚಾತ್ಯ ದೇಶಗಳಲ್ಲಿ ಮಕ್ಕಳಲ್ಲಿ ಅಪರಾಧಿಗಳ ಸಂಖ್ಯೆ ದಿನೇ ದಿನೇ ವೃದ್ಧಿಯಾಗುವುದು ತಿಳಿದು ಬಂದಿದೆ. ಅವೇ ಮಕ್ಕಳು ಮುಂದೆ ದೊಡ್ಡವರಾಗಿ ಯಾವ ಉದ್ಯೋಗ ಹಿಡಿದರೂ ಅದರಲ್ಲಿ ನಿರಂಕುಶ ವೃತ್ತಿಯವರೂ ಸ್ವಾರ್ಥಿಗಳೂ ಪರಪೀಡಕರೂ ಆಗಿ ಸಮಾಜಕ್ಕೆ ನಾನಾ ವಿಧವಾದ ಸಮಸ್ಯೆಗಳನ್ನು ತಂದೊಡ್ಡಿ ಅರಾಜಕತೆಗೆ ಎಡೆಮಾಡಿಕೊಡುತ್ತಿರುವುದು ಅನುಭವಕ್ಕೆ ಬಂದಿದೆ.

ಇಂಗ್ಲೆಂಡಿನ ವೆಯ್ಡ್‌ಸ್ಟನ್ನಿನಲ್ಲಿ ಒಂದು ಸಭೆ ಕೂಡಿತ್ತು. ತಮ್ಮ ಮಕ್ಕಳ ಕಾಡಾಡಿಗತನದಿಂದ ಬೇಸತ್ತು ಅವರು ವಿಚಾರಮಾಡಲು ನೆರೆದಿದ್ದರು. ಅವರಲ್ಲಿ ಐವರು ಹೆಂಗಸರು, ಒಬ್ಬರು ಪೋಲೀಸರು, ಮಿಕ್ಕವರು ಸಾಮಾನ್ಯ ನಾಗರಿಕರು. ವರಿಷ್ಠ ಪೋಲೀಸ ಕಾನ್‌ಸ್ಟಬಲ್ ಮೇಜರ್ ಜೆ. ಇ. ಫರ್ಗ್ಯುಸನ್ನನ ಸಲಹೆ ಹೀಗಿತ್ತು: ಕೆಂಟ್ ಜಿಲ್ಲೆಯಲ್ಲಿ ನೂರಕ್ಕೆ ೩೦ ರಷ್ಟು ಅಪರಾಧಿಗಳು ಅಪ್ರಾಯಸ್ಥರು; ನೂರಕ್ಕೆ ೨೫ ರಷ್ಟು ಅಪರಾಧಗಳನ್ನು ಅವರು ಮಾಡುತ್ತಿರುವುದು ನಮ್ಮ ಕಣ್ಣಿಗೆ ಬಿದ್ದಿದೆ. ಹಿಂದೆ ಕೆಟ್ಟ ಮಕ್ಕಳಿಗೆ ತಪ್ಪು ಮಾಡಿದರೆ ತಾಯ್ತಂದೆಯರು ಹೊಡೆದು ಬುದ್ಧಿ ಕಲಿಸುತ್ತಿದ್ದರು; ಅಷ್ಟಕ್ಕೂ ಮೀರಿದರೆ ಪೋಲೀಸರು ಎರಡು ಏಟು ಬಿಗಿದು ಸರಿಯಾದ ಹಾದಿಗೆ ಅವರನ್ನು ಹಚ್ಚುತ್ತಿದ್ದರು. ಅದು ಸರಿಯಾದ ಕ್ರಮ.

ಕೇಡಿ ಮಕ್ಕಳನ್ನು ಶಿಕ್ಷಿಸುವ ವಿಶಿಷ್ಟ ಕೋರ್ಟು

ಪೋಲಿಸನ ಮಾತನ್ನು ಪುಷ್ಟೀಕರಿಸುತ್ತ ನಾಗರಿಕರಲ್ಲಿ ಮುಖ್ಯರಾದ ಪೂರ್ವ ಕೆಂಟಿನ ಬಾಲ ವರ್ಗಸಿಕ ಸಮ್ಮೇಳನಕ್ಕೆ ಬಂದಿದ್ದ ಶ್ರೀ. ಹೆರಾಲ್ಡ್ ಫೆಸ್ಸೆಜರರು ಒಬ್ಬ ಮ್ಯಾಜಿಸ್ಟ್ರೇಟರ ಅನುಭವವನ್ನು ವಿವರಿಸಿದರು. ಮಕ್ಕಳೀಗ Juvenile Courts ಮಕ್ಕಳ ಕೋರ್ಟುಗಳನ್ನು ಲೇವಡಿ ಮಾಡಿ ಆಟ ಮಾಡುತ್ತಾರೆ. ಒಮ್ಮೆ ನಿಜವಾದ ಕೋರ್ಟಿನ ರುಚಿ ತಿಳಿದರೆ ಅವರೆಂದೂ ಹಾಗೆ ಕೋರ್ಟುಗಳನ್ನು ಆಟದ ಮನೆಗಳೆಂದು ತಿಳಿಯುವುದಿಲ್ಲ.

ಇಂಥ ಕೋರ್ಟಿಗೆ ಸೇರಿದ ಹುಡುಗನೊಬ್ಬ ಹೇಳುತ್ತಿದ್ದನಂತೆ: ಈಟನ್ನಿನ ಶಾಲೆಗಿಂತ Probation School-ಅಪರಾಧಿ ಹುಡುಗರ ಶಾಲೆ ಹೆಚ್ಚು ಯೋಗ್ಯ. ಏಕೆಂದರೆ, ಅಲ್ಲಿ ಈಜುವ ಕೆರೆ, ಟೆನ್ನಿಸ್ ಕೋರ್ಟುಗಳು ಇವೆ. ನಗರ ಸಭೆಯವರು ಅಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉಡಿಗೆ ತೊಡಿಗೆಗಳನ್ನು ಉಚಿತವಾಗಿ ಕೊಡುತ್ತಾರೆ. ಇಷ್ಟರ ಮೇಲೆ ಮಕ್ಕಳು ಮಾಡಿದ್ದೆಲ್ಲ ಕ್ಷಮ್ಯ! ಇಂಥ ಶಾಲೆಗಳಲ್ಲಿ ಒಬ್ಬನ (ಳ)ನ್ನಿಡಲು [illegible] ವಾರಕ್ಕೆ ೬ ಪೌಂಡು ಬೇಕಾಗುವುದು. ಇಷ್ಟು ಖರ್ಚು ಮಾಡಿ ಬರುವ ಪ್ರತಿಫಲವೆಂದರೆ ಮಕ್ಕಳ ಸ್ವಾಚ್ಛಂದ್ಯ, ಮನೆ ಹಾಳತನ.

ಮಕ್ಕಳ ಕೋರ್ಟುಗಳಾದರೂ ಎಂಥವು? ಅಲ್ಲಿ ಸರ್ ಎಡ್ವರ್ಡ ಹಾಡಿರುವುದರೆನ್ನುವಂತೆ ಅಪರಾಧಿ ಮಾಡಿದ್ದೆಲ್ಲ ಸಹಾನುಭೂತಿ, ದಯೆ, ಸಮಾಧಾನ, ಇವುಗಳನ್ನು ತೋರಿಸುತ್ತಿದ್ದರೆ, ಇನ್ನೊಮ್ಮೆ ಅಂಥ ಅಪರಾಧ ಮಾಡದಂತೆ ತಡೆದಿಡುವುದು ಮರೆಯುವಂತೆ ಶಿಕ್ಷೆ ವಿಧಿಸುವುದಿಲ್ಲ! [illegible] ಇದನ್ನು ಅಲ್ಲಿನ ಮಕ್ಕಳ ಶಿಕ್ಷಣಕ್ಕೆ ಈ Self expression at-any-price brand of psychologist ಎನ್ನುವ [illegible] ಅನುಭವಿಸಿಯಾದರೂ ಮಕ್ಕಳಿಗೆ ತಮ್ಮ ಪ್ರವೃತ್ತಿಯಂತೆ ನಡೆದು [illegible] ಕೊಡ [illegible] ಸಿದ್ಧಾಂತ [illegible] ಏಕೆಂದರೆ, [illegible] ಹಾಗೆ [illegible] ಅರ್ಥ

ವಲ್ಲೇ ಬಿಟ್ಟು ಮನೆಗೆ ಬಂದು ಹಳೆಯ ಕಾಲದ ಶಿಪಾಯಿಗಳಂತೆ ಬಾಯಿಗೆ ಬಂದ ಭಂಡ ಮಾತಾಡುತ್ತ ಮನಸ್ವಿಯಾಗಿ ನಡೆದುಕೊಳ್ಳುವ ತರುಣ ತರುಣಿಯರ ಸಂಖ್ಯೆ ಬೆಳೆಯುವಂತಾಗುತ್ತದೆ.

ಈ ಕಾಲದಲ್ಲಾದರೂ ಯೋಗ್ಯರೆನಿಸಿಕೊಂಡು ಸಮಾಜದಲ್ಲಿ ಹೆಸರು ಪಡೆದ ಎಲ್ಲ ಸಾತ್ವಿಕರೂ ಚಿಕ್ಕಂದಿನಲ್ಲಿ ತಮ್ಮ ಗುರು ಹಿರಿಯರು ನೀತಿ, ನ್ಯಾಯ, ನಡತೆ, ಶಿಸ್ತುಗಳಲ್ಲಿ ಚೆನ್ನಾಗಿ ಶಿಕ್ಷಣ ಕೊಟ್ಟಿದ್ದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆಂಬುದು ಎಲ್ಲ ದೇಶಗಳಲ್ಲೂ ಕಂಡು ಬರುತ್ತದೆ. ಮಕ್ಕಳನ್ನು ಮನಸ್ವಿಯಾಗಿ ಬಿಟ್ಟ ಅಮೇರಿಕದಲ್ಲಿ ಕೂಡ ಈ ಮಾತು ಸತ್ಯವೆನಿಸುತ್ತದೆ. ಆದರೆ ಈ ಅನುಭವದಿಂದ ತಾಯ್ತಂದೆಯರು ಪಾಠ ಕಲಿಯಲೊಪ್ಪದಿರಲು ಅವರ ಸೋಮಾರಿತನ ಮತ್ತು ಹೊಣೆಗೇಡಿತನಗಳೇ ಕಾರಣ. ಚಿಕ್ಕಂದಿನ ಸ್ವಾಚ್ಛಂದ್ಯದ ಪರಿಣಾಮವಾಗಿ ಅವರು ಬೆಳೆದ ಮೇಲೆ ಸಾಮೂಹಿಕ ಶಿಸ್ತುಭಂಗ, ಅಸಡ್ಡಾಳ ಕೆಲಸಗಾರಿಕೆ, ಔದ್ಯಮಿಕ ಅಸಂತೃಪ್ತಿ, ಹೊಣೆಯಿಲ್ಲದ ಆಂದೋಲನ ಮತ್ತು ವಿಘಾತಕವಾದ ಅನಧಿಕೃತ ಸಂಪು ಇವು ಸಂಭವಿಸುತ್ತಿರುವುದು ಇಂಗ್ಲೆಂಡಿನಲ್ಲಿ ಕಂಡು ಬಂದಿದೆಯೆನ್ನಲಾಗಿದೆ.

'ಅತಿ ಸರ್ವತ್ರ ವರ್ಜಯೇತ್'

ಅತಿಶಿಕ್ಷೆ ನಿಂದ್ಯವಾದಂತೆ ಅಶಿಕ್ಷೆಯೂ ನಿಂದ್ಯವೇ, ದುಷ್ಪರಿಣಾಮಕರವೇ ಎಂಬುದನ್ನು ನಾವಿಂದು ಗಮನಿಸಬೇಕು. ನಮ್ಮ ದೇಶದಲ್ಲಿಯೂ ಇಂಗ್ಲೆಂಡಿನಲ್ಲಿ ಆಗುತ್ತಿರುವಂತೆ ಚಿಕ್ಕ ಚಿಕ್ಕ ಅನಾನುಕೂಲತೆಗಳಿಗಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಸಂಪು ಹೂಡುವುದು, ಕಲ್ಲೆಸೆದು ದಂಗೆ ಹಾಕುವುದು, ಹರತಾಳ ಮಾಡಲು ಪ್ರಚಾರ ಮಾಡುವುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಇಂಗ್ಲೆಂಡಿನ ಒಂದು ಶಾಲೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಕನಿಗೆ ಗುಂಡಿಕ್ಕಿ ಕೊಂದರಂತೆ. ಏಕೆ? ಪರೀಕ್ಷೆಯಲ್ಲಿ ಆ ಗುಂಪಿನಲ್ಲಿ ಸೇರಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹೆಚ್ಚಿಗೆ ಗುಣಗಳನ್ನು ಕೊಡದ್ದಕ್ಕಾಗಿ! ಇದು "ಡೆಮಾಕ್ರಸಿ" ಅಥವಾ ಪ್ರಜಾಪ್ರಭುತ್ವ ತತ್ವದ ವಿಡಂಬನೀಯವಾದ ತುತ್ತತುದಿಯಲ್ಲವೆ? Corporal punishment ದೇಹದಂಡನೆ ಮಾಡುವುದೆಂದರೇ ಹೌಹಾರಿ ಬೀಳುವ ಇಂಗ್ಲೆಂಡಿನ "ನ್ಯಾಶನಲ್ ಫೌಂಡೇಶನ್ ಅಫ್ ರೀಸರ್ಚ" ನಂತಹ ಸಂಸ್ಥೆ ಇನ್ನಾದರೂ ಬುದ್ಧಿ ಗಲಿತುಕೊಳ್ಳಬೇಕಲ್ಲವೆ? ಶಿಕ್ಷಕರೆಂದರೆ Sadistic criminals ಹಿಂಸಾನಂದರಾದ ಅಪರಾಧಿಗಳು ಎಂದು ಗಣಿಸಿ ಬೆತ್ತವನ್ನು ಶಾಲೆಗಳಿಂದ ಬಹಿಷ್ಕರಿಸಿಬಿಡುವ ಆಧುನಿಕತೆಗೆ "ಮಾಡಿದ್ದುಣ್ಣೋ ಮಹಾರಾಯ" ಎಂಬ ಕಾಲವೀಗ ಬಂದಿದೆ. ಮುದ್ದು ಮಾಡಿ ಸಾಕುವ ದುಷ್ಪದ್ಧತಿಯ ಫಲಗಳನ್ನು ಕಂಡೂ ಅದೇ ಒಳ್ಳೆಯದೆಂಬ ಮನೋವಿಜ್ಞಾನಿಗಳನ್ನು ಮನೋವಿಜ್ಞಾನಿಗಳೆಂದು ನಂಬುವುದು ಮೂರ್ಖತನವೆಂಬುದನ್ನು ಕಂಡ ಶಿಕ್ಷಕನೊಬ್ಬನು, "ಭಾಷಣ" ಕೊಟ್ಟು ಅವರವರ ಸಮಸ್ಯೆಗಳನ್ನು ಅವರವರೇ ಬಗೆಹರಿಸಿಕೊಳ್ಳುವಂತೆ ಹೆಡ್ಮಾಸ್ತರುಗಳು ಅಪರಾಧಿಗಳಿಗೆ ವ್ಯವಸ್ಥೆ ಮಾಡಬೇಕು ಎಂದು ನಿರ್ಣಯಿಸಿದ ಸೆಂಟ್ ಅಲ್ಬನ್ಸ್ ಸಮಿತಿಗೆ ಹೇಳಿದನಂತೆ: "ಶಿಕ್ಷಕರಿಗೆ ಅವರ ಬೆತ್ತವನ್ನು ಹಿಂದಕ್ಕೆ ಕೊಡಿರಿ" ಎಂದು. ಅಪ್ರಾಯಸ್ಥರಲ್ಲಿ ನೀತಿ ಬೆಳೆದು ಬರಬೇಕಾದರೆ, ಶಿಸ್ತು ಬರಬೇಕಾದರೆ ಶಾಲೆಯಲ್ಲಿ ಗುರುವಿನ ನಿಯಂತ್ರಣ, ಮನೆಯಲ್ಲಿ ತಾಯ್ತಂದೆಯರ ನಿಯಂತ್ರಣ ಇರುವುದು ಅಗತ್ಯ ಎಂಬುದನ್ನು ಇಂಗ್ಲೆ ಸಮಾಜ ಇದೀಗ ಅರಿತುಕೊಳ್ಳುತ್ತಿದೆ. ಶಿಸ್ತಿಲ್ಲದಲ್ಲಿ ಯಾವ ಕೆಲಸವೂ ಸರಿಯಾಗಿ ನಡೆಯದು, ವಿವೇಕದಂತೆ ಬಾಳಲೂ ಬರದು, ಯಾವ ಸಮಾಜವೂ ನಿಜವಾಗಿ ನಾಗರಿಕವೆನಿಸದು ಮತ್ತು ಯಾವ ರಾಷ್ಟ್ರವೂ ಅಭಿವೃದ್ಧಿ ಹೊಂದದು ಎಂಬ ವಿಚಾರ ನಮ್ಮ ನಾಡಿನ ಶಿಕ್ಷಣನೇತೃಗಳ, ವಿದ್ಯಾಲಯಾಧಿಕಾರಿಗಳ, ತಾಯ್ತಂದೆಯರ ಮತ್ತು ಸಮಾಜದ ಹಿರಿಯರ ಗಮನಕ್ಕೆ ಈಗಲೇ ಬರಬೇಕಾಗಿದೆ.

— ಬಿ. ಹೆ. ಶ್ರೀ.

● ಅಂತಾರಾಷ್ಟ್ರೀಯ ನಿಧಿಯಿಂದ ಬ್ರಿಟನ್ ಮತ್ತು ಅಮೇರಿಕಗಳು [illegible] ಹಾಲರುಗಳ [illegible] ರಿಸಿದೆಯೆಂದು [illegible] ಅವರೆ ನಿಧಿಯ ಅಧಿಕಾರಿಗಳು [illegible] ಕೇಳುವದು ಅಸಂಭಾವ್ಯ ಎಂದು ಹೇಳಿದ್ದಾರೆ.

ಲಿಯಾಕತರ ಮಾಸ್ಕೋ ಯಾತ್ರೆ

ಬೇಗಮ ಲಿಯಾಕತರ ಕೈವಾಡವೆ?

ಭಾರತ ಮಾಡಿದ್ದಕ್ಕೆ ವಿರುದ್ಧವಾದುದೇನನ್ನಾದರೂ ಮಾಡುವುದು ಪಾಕಿಸ್ತಾನಕ್ಕೆ ರೂಢಿ ಬಿದ್ದು ಹೋಗಿದೆ. ಅದಕ್ಕೆ ಅದೀಗ ಒಂದು ಚಟವೇ ಆಗಿಬಿಟ್ಟಿದೆ. ಜಿನ್ನಾರ ಕಾಲದ ಮುಸ್ಲಿಂಲೀಗ್ ಗತ್ತುಗಾರಿಕೆಯ ಸಂಪ್ರದಾಯವೇ ಇಂದಿನ ಪಾಕಿಸ್ತಾನದ ಗತ್ತುಗಾರಿಕೆಯ ತಳಹದಿ. ಆದುದರಿಂದ ಭಾರತದ ಮುಖ್ಯಮಂತ್ರಿ ಜವಾಹರಲಾಲರು ನಾಳೆ ಅಕ್ಟೋಬರದಲ್ಲಿ ಅಮೇರಿಕೆಗೆ ಭೆಟ್ಟಿಕೊಡುತ್ತಿರುವಾಗ ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಕತಲ್ಲಿಖಾನರು ಮಾಸ್ಕೋಕ್ಕೆ ಹೋಗುವುದು ಪಾಸ್ತ್ರೋಕ್ತವಾಗಿಯೆ ಇದೆ. ಅವರು ನವಂಬರದಲ್ಲಿ ಮಾಸ್ಕೋಕ್ಕೆ ಹೋಗುವರು.

ಭಾರತ ಆಗ್ನೇಯ ಏಶಿಯದ ನಾಯಕತ್ವಕ್ಕೆ ಗಾಳ ಹಾಕುತ್ತಿದೆಯೆಂಬ ಚಿಂತೆಯಿಂದ ಪಾಕಿಸ್ತಾನ ಮಧ್ಯ ಪೂರ್ವದ ತನ್ನ ಬಲೆಯನ್ನು ಬೀಸಿದೆ. ಮಧ್ಯಪೂರ್ವದಲ್ಲಿ ಅರಬ ರಾಷ್ಟ್ರಗಳು "ಪ್ರತಿಗಾಮಿ" ಯೆಂದು ಮುದ್ರೆ ಹಾಕಿದ ರಶಿಯಕ್ಕೆ ಪಾಕಿಸ್ತಾನದೊಡನೆ ಏನು ಮಂತ್ರಾಲೋಚನೆಯೋ ಯಾರು ಬಲ್ಲರು? ಆದರೆ ಬದ್ಧವಿರುದ್ಧ ಧ್ಯೇಯಗಳಿಗೆ ವಿಧೇಯರಾಗಿದ್ದರೂ ಪಾಕಿಸ್ತಾನದ ಮುಂದಾಳುಗಳು ರಾಜಕಾರಣದಲ್ಲಾಗಲಿ ವಿದೇಶ ಸಂಬಂಧದಲ್ಲಾಗಲಿ ಅನುಸರಿಸುವ ರೀತಿನೀತಿಗೂ ಮಾಸ್ಕೋದ್ದಕ್ಕೂ ತುಂಬ ಸಾಮ್ಯವಿರುವುದು. ಈ ಗೆಳೆತನಕ್ಕೆ ಕಾರಣವಾಗಿರಬಹುದೇನೊ.

ಆದರೆ ಈ ಭೆಟ್ಟಿಯ ವ್ಯವಸ್ಥೆ ಹೇಗೆ ಮೊದಲಾಯಿತೆಂಬ ಬಗ್ಗೆ ಲಂಡನ್ನಿನಲ್ಲಿ ಸ್ವಾರಸ್ಯವಾದ ವೃತ್ತಾಂತವೊಂದು ಹಬ್ಬಿದೆಯೆಂದು ಇಲಾ ಸೇನರು "ಹಿಂದುಸ್ತಾನ ಟೈಮ್ಸ್" ಪತ್ರಿಕೆಯಲ್ಲಿ ಬರೆಯುತ್ತಾರೆ. ಮೋಹನಾಂಗಿ ಬೇಗಮ ಲಿಯಾಕತರಿಗೇ ಇದರ ಕೀರ್ತಿ ಸಲ್ಲಬೇಕಂತೆ. ತಮ್ಮ ಗಂಡನೊಡನೆ ನಾನಾ ದೇಶಗಳ ಸಂಚಾರದಲ್ಲಿ ಪಾಶ್ಚಾತ್ಯ ದೇಶಗಳನ್ನೆಲ್ಲ ಗೆದ್ದ ಬೇಗಮ ಸಾಹೇಬರು ಮಾಸ್ಕೋ ವಿಜಯವನ್ನು ಮುಗಿಸಿಬಿಡಬೇಕೆಂದು ನಿರ್ಣಯಿಸಿರಬೇಕು. ಈಚೆಗೆ ತೆಹರಾಣ (ಇರಾಣ)ಕ್ಕೆ ಅವರು ಭೆಟ್ಟಿಕೊಟ್ಟಾಗ ಒಬ್ಬ ಉಚ್ಚ ರಶಿಯನ್ ರಾಯಭಾರಾಧಿಕಾರಿಯ ಮುಂದೆ ಅವರು ತಮ್ಮ ಸಂಚಾರದ ಅನುಭವಗಳನ್ನು ಹೇಳುತ್ತಿರುವಾಗ್ಗೆ ಅವನು ಸಹಜವಾದ ಸ್ತ್ರೀದಾಕ್ಷಿಣ್ಯದಿಂದ "ಇಷ್ಟೆಲ್ಲ ದೇಶ ಸುತ್ತಿದ್ದೀರಂತೆ, ನಮ್ಮ ಮಾಸ್ಕೋಕ್ಕೇಕೆ ಒಮ್ಮೆ ಬರಬಾರದು" ಎಂದನಂತೆ. ಕೊಕ್ಕೆಯನ್ನು ನುಂಗಿದ ಮೀನನ್ನು ಬೇಗಮ ಸಾಹೇಬರು ಬಿಟ್ಟಾರೇ? ಒಡನೆ ಅವರು ಅವನನ್ನು ಕೆಕ್ಕರಿಸಿ, "ನೀವು ಕರೆಯಬಾರದೇಕೆ?" ಎಂದು ಕೇಳಿ, "ನೀವು ಕರೆದರೆ ನಾವು ಬರದಿರುತ್ತೇವೆಯೆ?" ಎಂದುಬಿಟ್ಟರು. ಆ ಅಧಿಕಾರಿ "ಹಾಗೆಯೆ ಆಗಲಿ" ಎಂದನಂತೆ.

ಹೀಗೆ ಸ್ಟಾಲಿನ್ನರಿಗೆ ಸೂಚನೆ ಹೋಯಿತು. ಆದರೆ ಆಗಲೇ ಲಿಯಾಕತ ದಂಪತಿಗಳನ್ನು ಕರೆಯಲು ಅವರಿಗೆ ಇಷ್ಟವಿರಲಿಲ್ಲ. ಕಾರಣ ಅಗಸ್ಟ ೧೫ ಕ್ಕೆ ಬರೋಣಾಗಬೇಕೆಂದು ಆಮಂತ್ರಣ ಹೋಯಿತು. ಆ ದಿನ ಅವರು ಬರಲಾರರೆಂದು ಸ್ಟಾಲಿನ್ನರಿಗೆ ಗೊತ್ತೇ ಇತ್ತು. ನಿರೀಕ್ಷಿಸಿದಂತೆ ನಿರಾಕರಣೆಯ ಉತ್ತರ ಬಂದ ಮೇಲೆ ರಶಿಯನ್ ಚಳಿಯ ರುಚಿ ತೋರಿಸಲೆಂದು ನವಂಬರಕ್ಕೆ ಅವರ ಸ್ವಾಗತ ದಿನ ನಿರ್ಧರಿಸಲ್ಪಟ್ಟಿತು. ಆದರೆ ಬೇಗಮ ಸಾಹೇಬರು ಅದಕ್ಕೆ ಬೆದರಲಿಲ್ಲ. ಆದ್ದರಿಂದ ಲಿಯಾಕತ ದಂಪತಿಗಳು ರಾಯಭಾರ ಚತುರರ ಮಹಾಪರಿವಾರಗಣಸಮೇತರಾಗಿ ಮಾಸ್ಕೋಕ್ಕೆ ಬಿಜಯಂಗೈಯುವವರಿದ್ದಾರೆ.

● ನಾಗಪುರದ ಸೆಶನ್ಸ ಕೋರ್ಟಿನಲ್ಲಿ ಯಾವುದೋ ಒಂದು ಪ್ರಕರಣದಲ್ಲಿ ಸಾಕ್ಷಿಯಾಗಿ ಕರೆಯಲ್ಪಟ್ಟ ರೇಲ್ವೆ ಗಾರ್ಡನೊಬ್ಬನು ಬಾಯಲ್ಲಿ ಸಿಗರೇಟು ಇಟ್ಟುಕೊಂಡೇ ನ್ಯಾಯಮೂರ್ತಿಗಳೆದುರು ಬಂದನು. ಮಾನ್ಯ ನ್ಯಾಯಾಧೀಶರು ಒಂದು ಕ್ಷಣ ಅವನ ಮುಖವನ್ನೇ ದಿಟ್ಟಿಸಿ ಗುಡುಗಿದರು: "ನಾನೇನು ನಿನ್ನ ಸ್ಟೇಶನ್ ಮಾಸ್ತರನೆಂದು ಬಗೆದೆಯಾ? ನನ್ನ ನ್ಯಾಯಾಲಯದಲ್ಲಿ ಸಿಗರೇಟು ಸೇದುತ್ತ ಬಂದಿದ್ದೀಯಲ್ಲ!" ನ್ಯಾಯಾಸನದಲ್ಲಿ ಒಳಗೊಳಗೇ ನಗು ಎದ್ದಿತು. ಸಾಕ್ಷಿದಾರನು ಕ್ಷಮೆ ಬೇಡಿ ಹೊರಹೋಗಿ ಸಿಗರೇಟಿಲ್ಲದೆ ಮರಳಿದನು.

— ಜಿಕಪಾದ

ನಗೆ

"ಎಷ್ಟೋ ನಾಯಿಗಳಿಗೆ ಅವುಗಳ ಯಜಮಾನರಿಗಿಂತ ಹೆಚ್ಚು ಬುದ್ಧಿ ಇರುತ್ತದೆ," ಎಂದನು ಶ್ವಾನಪ್ರಿಯ ಬೊಮ್ಮ.

"ನಿಜ, ನಿಜ," ಎಂದ ತಿಮ್ಮ, "ಅಂಥ ಒಂದು ನಾಯಿ ನನ್ನಲ್ಲೇ ಇದೆ."

ಎಲ್ಲರೂ ಗೊಳ್ಳನೆ ನಕ್ಕರು. ಇವರೇಕೆ ನಗುತ್ತಾರೆಂದು ತಿಮ್ಮ ತಲೆ ಕೆರೆದುಕೊಂಡೇ ಕರೆದುಕೊಂಡ!

●

ಪತಿಭಕ್ತಿಯ ವಿಚಾರದಲ್ಲಿ ಪುರಾಣದ ಆಚಾರ್ಯರು ಬಿಡಿಬಿಡಿಸಿ ಬಹಳ ಮಾತಾಡಿದರು. ಕೊನೆಗೆ ಹೇಳಿದರವರು: "ಆದರೆ ನಿಮ್ಮಲ್ಲಿ ಒಬ್ಬಳು ತನ್ನ ಪತ್ನೀಧರ್ಮವನ್ನು ಆಚರಿಸುತ್ತ ಇಲ್ಲವೆಂದು ಕೇಳುತ್ತೇನೆ. ದುಡಿದು ಸಣ್ಣಾಗಿ ಗಂಡ ಮನೆಗೆ ಬರುತ್ತಿರುವಾಗ, ಅವನಿಗಾಗಿ ಕಾಲುತೊಳೆಯಲು ಬಿಸಿನೀರು ಕಾಸಿ, ಸವಿಯಾದ ಅಡಿಗೆ ಮಾಡುವ ಬದಲು ಸಂಜೆಯೆಲ್ಲ ಮಂದಿಯ ಮನೆಯಲ್ಲಿ ಚಕ್ಕಂದವಾಡುತ್ತ ಕಳೆಯುವಳಂತೆ. ಪರಿಣಾಮವಾಗಿ ಅವಳ ಗಂಡ ಬೇಸತ್ತು ಕೆಟ್ಟಚಾಳಿಗೆ ಬೀಳುತ್ತಿದ್ದಾನೆ. ಅವಳಾರೆಂದು ನಿಮಗೆಲ್ಲ ತಿಳಿಯುವಂತೆ ಈ ಹಲಗೆಯನ್ನು ಅವಳ ಮೇಲೆ ಒಗೆಯುತ್ತೇನೆ ಈಗ" ಎಂದು ಪುರಾಣದ ಪುಸ್ತಕದ ಮೇಲು ಹಲಗೆಯನ್ನು ಎತ್ತಿದರು.

ಪುರಾಣ ಕೇಳಬಂದ ಮುತ್ತೈದೆಯರ ತಂಡಕ್ಕೆ ತಂಡವೇ ಬೆಚ್ಚಿ ಏಟು ತಪ್ಪಿಸಿಕೊಳ್ಳಲು ಮಿಡುಕಿದರು.

ಕಲೆ ಯೆಂದರೇನು?

ಮನುಷ್ಯನ ಲಕ್ಷಣಗಳನ್ನು ನಾನಾವಿಧವಾಗಿ ನಿರ್ದೇಶಿಸಲಾಗಿದೆ. ಮನುಷ್ಯನೆಂದರೆ ವಿಚಾರಶೀಲ ಜಂತು, ಎಂಬುದು ಅಂಥ ಲಕ್ಷಣ ನಿರ್ದೇಶಗಳಲ್ಲೊಂದು. ಇದು ಮನುಷ್ಯ ಜಾತಿಯ ಅಪ್ರಸ್ತುತ ಸ್ತುತಿಯೆಂದು ತೋರುತ್ತದೆ.

ಮನುಷ್ಯನ ಇರವು-ನಡೆವಳಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅವನು ಎಲ್ಲಾದರೂ ಅಗೊಮ್ಮೆ ಈಗೊಮ್ಮೆ ವಿಚಾರಪ್ರಕಾಶವನ್ನು ಬೀರುವ ಶುದ್ಧ ಅವಿಚಾರಿ ಪ್ರಾಣಿಯೆಂದೇ ಹೇಳುವುದು ಹೆಚ್ಚು ಯುಕ್ತವೆನಿಸುವುದು. ವಿಶ್ವವನ್ನೆ ನಾಶಮಾಡುವ ಯುದ್ಧಗಳು ತರ್ಕಬದ್ಧವೆಂದು ಹೇಳುವವನಾರು? ನಾನಾ ದೇಶಗಳಲ್ಲಿ ನಾನಾ ರೂಪಗಳಲ್ಲಿ ಕಾಣಬರುವ, ಮನುಷ್ಯನು ಗಾಢವಾದ ಮೋಹದಿಂದ ತಬ್ಬಿಕೊಳ್ಳುತ್ತಿರುವ ರೂಢಿ ಸಂಪ್ರದಾಯಗಳು ವಿಚಾರಯುಕ್ತವಾದವುಗಳೇ? ಮಾದಕಗಳನ್ನು ಉತ್ಪಾದಿಸಲು ಕೋಟ್ಯಂತರ ಧನವ್ಯಯ ಮಾಡುವುದು ವಿಚಾರಶೀಲತೆಯೆ? ವರ್ಣದ್ವೇಷವನ್ನು ವಿಚಾರಶೀಲವೆಂದು ಯಾರು ಸಮರ್ಥಿಸಬಲ್ಲರು?

ಮನುಷ್ಯನು ನಗುವ ಪ್ರಾಣಿಯೆಂದೂ ಕೆಲವರು ಅಂದಿದ್ದಾರೆ. ಬೇರೆ ಬೇರೆ ಪ್ರಾಣಿಗಳು ತಮ್ಮ ಮುಖಭಂಗಿಗಳನ್ನು ಬದಲಿಸುವ ಮೂಲಕ ತಮ್ಮ ಭಾವಗಳನ್ನು ಪ್ರಕಟಿಸುವುದನ್ನು ನಾವು ಕಾಣಬಹುದಾದರೂ ಅವು ನಗುತ್ತವೆಯೆಂದು ಯಾರೂ ಹೇಳಲಾರರು. ಆದರೆ ಮನುಷ್ಯನಿಗೆ ನಗುವ ಪ್ರವೃತ್ತಿಯುಂಟೆಂಬಲ್ಲಿ ಸಂಶಯವಿಲ್ಲ. ಮನುಷ್ಯ ತಪ್ಪು ಮಾಡುವುದರಲ್ಲಿ ನಿಸ್ಸೀಮ. ಆ ವಿಷಯದಲ್ಲಿ ಅವನೆಷ್ಟು ಮುಂದುವರಿದಿದ್ದಾನೆಂದರೆ, ತನ್ನ ಮರುಳತನವನ್ನು ಮರೆತು ಮನಸ್ಸು ಹಗುರು ಮಾಡಿಕೊಳ್ಳಲೆಂದೇ ಈ ನಗುವ ಕಲೆಯನ್ನು ಬೆಳೆಸಿಕೊಂಡಿದ್ದಾನೆಂದು ತೋರುತ್ತದೆ.

ಮನುಷ್ಯನನ್ನು ಅಗ್ನಿಭಕ್ಷಕನೆಂದಲ್ಲದಿದ್ದರೂ ಅಗ್ನಿಯನ್ನುಪಯೋಗಿಸುವ ಜೀವಿಯೆನ್ನುವುದೂ ಉಂಟು. ಬೇರಾವ ಪ್ರಾಣಿಯೂ ಅದನ್ನುಪಯೋಗಿಸುವುದಿಲ್ಲವೆಂಬುದು ನಿಜ. ಎಷ್ಟೋ ಪ್ರಾಣಿಗಳು ಬೆಂಕಿಗೆ ಅಂಜಿ ಓಡಿಹೋಗುತ್ತವೆ. ಮನುಷ್ಯನೊಬ್ಬನೇ ಅದನ್ನು ಬಹು ವಿಧವಾಗಿ ಉಪಯೋಗಿಸಿಕೊಳ್ಳುವವ. ಆದರೆ ಇದಾದರೂ ಅವನ ದುರಾಶೆಯ ಫಲವೇ. ಪ್ರಕೃತಿ ತಾನಾಗಿ ಒದಗಿಸುವ ವಸ್ತುಗಳಿಂದ ಅವನಿಗೆ ತೃಪ್ತಿಯೆನಿಸುವದಿಲ್ಲ. ಅದರಿಂದ ಅಲ್ಲಿ ದೊರಕಿದ್ದನ್ನು ಬೆಂಕಿಯ ಸಹಾಯದಿಂದ ಮಾ[illegible]ಕೊಳ್ಳುತ್ತಾನೆ.

ಪ್ರಕೃತಿಯನ್ನು ತಿದ್ದುವವ

ಆದರೆ ಮನುಷ್ಯನ ಈ ಯಾವ ವರ್ಣನೆಯೂ ಸಮರ್ಪಕವಾದುದಲ್ಲ. ಪ್ರಕೃತಿಯಲ್ಲಿದ್ದುದಕ್ಕೆ ತನ್ನದನ್ನೂ ಸೇರಿಸಬಲ್ಲ, ಸೌಂದರ್ಯದೃಷ್ಟಿಯುಳ್ಳ ಜೀವಿಯೆಂದು ನಾವು ಮನುಷ್ಯನನ್ನು ವರ್ಣಿಸಬಹುದು. ಕೋಟ್ಯೇತರ ವರ್ಷಗಳಿಂದ ಬಾಳುತ್ತಿರುವ ಮನುಷ್ಯೇತರ ಪ್ರಾಣಿಗಳ ಜೀವನಕ್ರಮದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಅವು ಏನನ್ನೂ ಕಂಡು ಹಿಡಿದಿಲ್ಲ, ಪ್ರಕೃತಿಗೆ ಏನನ್ನೂ ಸೇರಿಸಿಲ್ಲ. ಮನುಷ್ಯನು ಮಾತ್ರ ಹೊಸ ಹೊಸದನ್ನು ಸೇರಿಸುತ್ತ ಭೂಮಿಯ ಸ್ವರೂಪವನ್ನೇ ಮಾರ್ಪಡಿಸಿಬಿಟ್ಟಿದ್ದಾನಲ್ಲ. ಅಲ್ಲದೆ ಅವನು ತನ್ನ ಕಲಾಬುದ್ಧಿಯಿಂದ ಜೀವನವನ್ನು ಸುಂದರಗೊಳಿಸಿದ್ದಾನೆ. ಅದೇ ಮನುಷ್ಯನಿಗೂ ಇತರ ಪ್ರಾಣಿಗಳಿಗೂ ಇರುವ ಭೇದದ ಹೆಗ್ಗುರುತು.

ಪ್ರಕೃತಿಯು ರೀತಿ ನೀತಿಗೆ, ಜೀವನ ಪದ್ಧತಿಗೆ ತನ್ನದೇ ಒಂದನ್ನು ಬೆರಸುವುದೇ ಕಲೆ. ಪ್ರಕೃತಿಯನ್ನು ತಿದ್ದಿ ತೋರುವುದೇ ಕಲೆಯ ಲಕ್ಷಣವೆಂದೂ ಹೇಳಬಹುದು. ಅದರಲ್ಲಿ ಯಾವಾಗಲೂ ಪ್ರಕೃತಿಯೊಂದಿಗೆ ಏನಾದರೂ ಬೇರೊಂದು ಕೂಡಿರುತ್ತದೆ. ಆ "ಏನಾದರೂ" ಏನೆಂಬುದು ಆಯಾ ಸ್ಥಿತಿಗತಿಗನುಗುಣವಾಗಿ ಭಿನ್ನ ಭಿನ್ನವಾಗಿರುತ್ತದೆ. ಮನುಷ್ಯನು ಬರಿ ಬಾಳುವೆ ಮಾಡುವುದಿಲ್ಲ; ಅವನು ಪ್ರಕೃತಿಸಿದ್ಧ ಜೀವನದಿಂದ ಭಿನ್ನವಾದ ಬಾಳುವೆ ಮಾಡುತ್ತಿರುತ್ತಾನೆ. ನನ್ನ ವಿಚಾರದಲ್ಲಿ, ನಶ್ವರವಾದ ಭೌತ ಜಗತ್ತಿನಿಂದ ಸ್ವರ್ಗಕ್ಕೇರುವ ಹಂಬಲದಲ್ಲಿ ಮನುಷ್ಯ ಕಟ್ಟುವ ಸೇತುವೇ ಕಲೆ.

ಪ್ರಕೃತಿಗೆ ಅಪ್ರಾಕೃತವನ್ನು ಬೆರೆಸುವುದೆಂಬ ಕಲಾಲಕ್ಷಣ ಪೂರ್ಣವಾದುದಲ್ಲ. ಮರದ ಕೊಂಬೆಯನ್ನು ಕತ್ತರಿಸಿ ತನ್ನ ಕೈಗೆ ಹುಟ್ಟಿ ಕೊಂಡಾಕ್ಷಣವೇ ಮನುಷ್ಯ ಪ್ರಕೃತಿಗೆ ತನ್ನದನ್ನು ಸೇರಿಸುವುದು ಪ್ರಾರಂಭವಾಗುತ್ತದೆ. ಆದರೆ ಅದು ಕಲೆಯೆನಿಸಲು ಇನ್ನೂ ಬಹುಕಾಲ ಕಾಯಬೇಕಾಗುತ್ತದೆ. [illegible] ಅಂಚು ಸೆರಗು ಅಥವಾ ಚಿತ್ರವಿಚಿತ್ರ ವರ್ಣದ ಸೀರೆಗಳು ಉಪಯೋಗಕ್ಕೆ ಬಂದಾಗಲೇ "ಇದು ಕಲೆ" ಎಂದು ನಾವು ಉದ್ಗಾರ ತೆಗೆಯುತ್ತೇವೆ. ಹೀಗೆ "ಪ್ರಯೋಜಕ ಕಲೆ" ಮತ್ತು

ಲೇ: ಶ್ರೀ ರಂ. ರಾ. ದಿವಾಕರ

"ಲಲಿತ ಕಲೆ" ಯೆಂಬ ವರ್ಗೀಕರಣವನ್ನು ನಾವು ಮಾಡಬೇಕಾಗುತ್ತದೆ. ಇಲ್ಲಿ ಕೂಡ ಸ್ಪಷ್ಟವಾದ ಭೇದಗಳನ್ನು ಮಾಡುವುದು ಕಠಿನವಾದ ಕೆಲಸವೇ ಸರಿ. ಎಷ್ಟೋ ಬೇಳೆ ಪ್ರಯೋಜಕ ಕಲೆ ಲಲಿತಕಲೆಯೊಡನೆ ಏಕತವಾಗಿರುವುದುಂಟು. ತತ್ಕಾಲಕ್ಕೆ ಪ್ರಯೋಜಕವಾಗಿದ್ದರೂ ಸಾಕಷ್ಟು ಸೌಂದರ್ಯವಿಲ್ಲದಿರುವುದನ್ನು ಮೊದಲನೇ ವರ್ಗಕ್ಕೂ ಅದೇ ಸೌಂದರ್ಯ ದೃಷ್ಟಿಯಿಂದ ರೂಪಿಸಲ್ಪಟ್ಟಾಗ ಲಲಿತ ಕಲೆಯೆನಿಸಿಕೊಳ್ಳುವುದಕ್ಕೂ ಯೋಗ್ಯವಾಗುವುದೇನೋ. ಆದುದರಿಂದ ಲಲಿತಕಲೆಯ ಗುಣ ಪ್ರಯೋಜನ—ಅಪ್ರಯೋಜನಾಪೇಕ್ಷಿಯಾಗಿರದೆ, ಸೌಂದರ್ಯಾನುಸಂಧಾನಾಪೇಕ್ಷಿಯಾಗಿದೆಯೆನ್ನಬಹುದು. ನಿಜವಾಗಿ ನಮ್ಮ ಉದಾತ್ತ ಮತ್ತು ಸೂಕ್ಷ್ಮತರ ಸ್ವಭಾವದ ವಿಕಾಸಕ್ಕೆ 'ಸೌಂದರ್ಯವೆಂಬುದು ಉಪಯುಕ್ತವೂ ಅವಶ್ಯವೂ ಆದ ವಸ್ತು. ನಮ್ಮ ಐಹಿಕ ಜೀವನಕ್ಕೆ ಉಪಯೋಗಿಸುವ ವಸ್ತುಗಳು, ಸೌಂದರ್ಯಗುಣವಿಹೀನವಾಗಿದ್ದರೆ ನಮ್ಮ ಜೀವನ ಪಶುಜೀವನಸದೃಶವಾಗಿ, ಸಾಂಸ್ಕೃತಿಕ ಅಸ್ತಿತ್ವದ ಉಚ್ಚತರ ಅವಸ್ಥೆಯನ್ನು ಬೆಳೆಸಿಕೊಳ್ಳುವುದೇ ನಮಗೆ ಸಾಧ್ಯವಾಗಲಿಕ್ಕಿಲ್ಲ.

ಶರೀರವಾದ್ಯ

ಹೇಳಿಕೇಳಿ ನಮ್ಮ ಭೌತ ಶರೀರಕ್ಕೂ ನಮಗೂ ಬಿಡಿಸಲಾರದ ಬಂಧನವುಂಟು. ಅದು ನಮ್ಮ ವಿಕಾಸದ ಸಾಧನ. ಅದನ್ನು ಮಾಟವಾಗಿಟ್ಟುಕೊಂಡರೇ ನಾವು ಮೇಲ್ಪಟ್ಟದ ಅವಸ್ಥೆಯನ್ನು ಮುಟ್ಟಬಲ್ಲೆವು. ಆದರೆ ಈ ದೇಹವನ್ನು ಜೀವಂತವಾಗಿಯೂ ಆರೋಗ್ಯವಾಗಿಯೂ ಇಟ್ಟುಕೊಳ್ಳುವ ಚಿಂತೆಯಿಂದ ನಮ್ಮ ಅಂತರಂಗವನ್ನು ಅಲಿಪ್ತವಾಗಿಟ್ಟುಕೊಂಡಾಗಲೇ ನಾವು ಉನ್ನತವಾದ ಭೌತಾತೀತ ಜೀವನವನ್ನು ಅನುಭವಿಸಬಲ್ಲೆವು. ನಿಜವಾಗಿ, ನಾವು ದೇಹವನ್ನು ಕಡೆಗಣಿಸಿದರೆ ನಮಗೇ ಹಾನಿ. ಅದನ್ನು ಸ್ನಾಯುಯಲ್ಲಿ ಇರಿಸದೆ ನಾವೆಂದೂ ಲಲಿತಕಲೆಗೆ ಅನುಕೂಲವಾದ ಅವಸ್ಥೆಯನ್ನು ಮುಟ್ಟಲಾರೆವು. ಅದು ಸ್ನಾಯು ತಪ್ಪಿದರೆ ನಾವು ಎಷ್ಟು ಹೆಣಗಿದರೂ ಸುಶ್ರಾವ್ಯವಾದ ಸಂಗೀತ ಅದರಿಂದ ಹುಟ್ಟಲಾರದು. ಆಧುನಿಕ ದೃಷ್ಟಾಂತವನ್ನು ಕೊಡಬೇಕಾದರೆ, ಈ ದೇಹವೊಂದು ರೇಡಿಯೋ ಯಂತ್ರದಂತಿದೆ. ಅದರ ಮೊಳೆಗಳನ್ನು ಸರಿಯಾದ ತರಂಗಮಿತಿಗೆ ಹೊಂದಿಸದಿದ್ದರೆ ನಮ್ಮ ಸುತ್ತ ಮುತ್ತ ಇರುವ ಅನಂತ ಸಂಗೀತದ ಆನಂದದ ಸಾಮ್ರಾಜ್ಯದೊಳಗೆ ಹಣಕುವದು ಅಸಾಧ್ಯ.

ಅದ್ದರಿಂದ ಪ್ರಯೋಜಕ ಕಲೆಗಳೂ ಲಲಿತ ಕಲೆಗಳೂ ಅವಳಿಜವಳಿಯೆಂದು ಹೇಳಬೇಕು. ಜೀವನವನ್ನು ಸರ್ವಾಂಗಸುಂದರವಾಗಿ ಮಾಡಲು ಎರಡೂ ಬೇಕು. ಪ್ರಾಚೀನ ಭಾರತೀಯ ಗ್ರಂಥಗಳಲ್ಲಿ ಪ್ರಯೋಜಕ ಮತ್ತು ಲಲಿತಕಲೆಗಳನ್ನು ೧೮ ವಿದ್ಯೆಗಳು ಮತ್ತು ೬೪ ಕಲೆಗಳೆಂದು ಉಲ್ಲೇಖಿಸಲಾಗಿದೆ. ಈ ಪ್ರಕಾರ ಲಲಿತ ಕಲೆಗೂ ಪ್ರಯೋಜಕ ಕಲೆಗೂ ಇರುವ ಅಂತರ ಪ್ರಯೋಜಕತೆಯಲ್ಲೂ ಇಲ್ಲ, ಒಳ್ಳೆಯತನದಲ್ಲೂ ಇಲ್ಲ, ಬೇಕುಬೇಕಿಲ್ಲದಲ್ಲೂ ಇಲ್ಲ. ಅದು ಸೌಂದರ್ಯ ಗುಣದಲ್ಲಿ ಮಾತ್ರ.

ಸೌಂದರ್ಯವೆ ಕಲೆಯ ಆತ್ಮ

ಉದ್ದಿಷ್ಟ ಇಂದ್ರಿಯಗಳನ್ನು [illegible] ಉಪಯೋಗಿಸಿದ ಸಾಮಗ್ರಿಯನ್ನು ಬಳಸಿದ ಸಾಧ್ಯವನ್ನು ಅನುಸರಿಸಿ ಕಲೆಗೆ [illegible] ಬರುವದು ಸ್ವಾಭಾವಿಕ. ಆದರೆ ಕಲೆಯ [illegible] ಧ್ಯೇಯವೂ ಎಲ್ಲೆಡೆಯಲ್ಲಿ ಒಂದೇ. ಸಾಹಿತ್ಯವಿರಲಿ, ಸಂಗೀತವಿರಲಿ, ಚಿತ್ರವಿರಲಿ, ಶಿಲ್ಪವಿರಲಿ, ಮುನ್ನಾವುದೇ [illegible]ವಿರಲಿ,—ಎಲ್ಲವನ್ನೂ ಮನುಷ್ಯನು ತನ್ನ ಮನುಷ್ಯೇತರಿಕೆಗೆ ಒಂದು

ಬಗೆಯ ಉದಾತ್ತತೆಯನ್ನು ಕೊಟ್ಟು ಅದನ್ನು ಉನ್ನತಸ್ಥಾನಕ್ಕೆ [illegible] ಮುಟ್ಟಿಸಲೆಂದೇ [illegible] ಹೋಗುತ್ತಾನೆ. [illegible] ಸಾಮಗ್ರಿ [illegible] ಇದ್ದರೂ ಸೌಂದರ್ಯಭಕ್ತಿ, ಸೌಂದರ್ಯಬೋಧ ಮತ್ತು ಸೌಂದರ್ಯಾಸ್ವಾದಗಳೇ ಎಲ್ಲ ಕಲೆಯ ಸಾರ. ಅದೇ ಕಲೆಯ [illegible] ಹೇಳಬಹುದು. [illegible] ಇದ್ದು [illegible] ಸೌಂದರ್ಯವಿಲ್ಲದಿದ್ದರೆ ಅಲ್ಲಿ ಕಲೆ ಯಿಲ್ಲವೆಂದೇ ಹೇಳಬಹುದು. ಸೌಂದರ್ಯವನ್ನು ಈ ಗುಣಗಳೆಲ್ಲದರ [illegible] ಸಂಧಿ [illegible] ಕಲೆಯ [illegible] ಸೌಂದರ್ಯವೇ ಕಲೆಯ ಆತ್ಮ [illegible] ಎಂಬುದು ಕಲೆ ಮತ್ತು ಸೌಂದರ್ಯವನ್ನು [illegible] ಸೌಂದರ್ಯಕಲ್ಪನೆ ಮತ್ತು ಅದರ ಅಭಿವ್ಯಕ್ತಿಯು [illegible] ಎಲ್ಲ ಕಲೆಯ [illegible] ಕಲಾವಿದನು [illegible] ಅವರಿಂದ ಮತ್ತು [illegible] ವಿಶಿಷ್ಟ ಕಲಾಮಾಧ್ಯಮವನ್ನು ಆರಿಸಿಕೊಳ್ಳುತ್ತಾನೆ. ಅವನು ಅದರ್ಶವಾದಿಯಾಗಿ ಪ್ರಯೋಜನವಾದಿಯು ಇರಲಿ, [illegible]ನಾಗಿರಲಿ ನಿರುದ್ದೇಶನಾಗಿರಲಿ, ಕಲಾವಿದನು ಕಲಾಸೃಷ್ಟಿಯ ಮೂಲಕ ವಿಚಾರಗಳನ್ನು ಅಭಿವ್ಯಂಜಿಸುತ್ತಿದ್ದರೆ ಸಾಕು, ಅವನನ್ನು ನಿಜವಾದ ಕಲಾವಿದನೆಂದು ಒಪ್ಪಿಕೊಳ್ಳಬಹುದು.

ಕಲಾವಿದನ ಬುದ್ಧಿ ಅವನ ಇತಿಮಿತಿಗಳ ಬಂಧನದಿಂದ ಮುಕ್ತವಾಗಿರುವ ವಿರಳವಾದ ಮುಹೂರ್ತಗಳಲ್ಲಿ ಮಾತ್ರ ಅವನಲ್ಲಿ ಸ್ಫೂರ್ತಿ ಚಿಮ್ಮುತ್ತದೆ. ಅವನು ಸ್ಫೂರ್ತಿಪ್ರೇರಿತನಾಗಿದ್ದಾಗ ಸೌಂದರ್ಯ ಕಲ್ಪನೆಯನ್ನು ಪಡೆಯುತ್ತಾನೆ; ಅದರ ಬೋಧ ಅವನಿಗಾಗಿ, ಅದೇ ಚಿಂತನೆಯಲ್ಲಿ ಕ್ಷಣಕಾಲ ಅವನು ಅದರಲ್ಲಿ ತಾದಾತ್ಮ್ಯವನ್ನು ಹೊಂದುತ್ತಾನೆ. ಯಾವುದಾದರೊಂದು ಬಗೆಯ ಸೌಂದರ್ಯದಲ್ಲಿ ತಲ್ಲೀನನಾಗಿ ಕಲಾವಿದನು ಆನಂದವನ್ನು ಅರಾಧಿಸುತ್ತಾನೆಂದು ಹೇಳಬಹುದು.

ಕಲೆಯ ಆಸ್ವಾದಾಧಿಕಾರ

ಬೇರೆ ಎಲ್ಲ ಮಹಾ-ಸುವಸ್ತುಗಳಂತೆ ಕಲೆಯಾದರೂ ಕೆಲವೇ ಜನರ ಸೊತ್ತಾಗಿದ್ದರೆ ಸಾಲದು. ಲಲಿತ ಕಲೆಯ ನಿರ್ಮಾಣಶಕ್ತಿ ಯಾವಾಗಲೂ ಕೆಲವೇ ಜನರಿಗೆ ಹಸ್ತಗತವಾಗಿರುವ ಕಾರಣ ಅದು ಮೂಲದಲ್ಲಿ ಸಂಪನ್ನಜನಾಶ್ರಯವಾಗಿದೆಯೆಂಬುದು ನಿಜ. ಆದರೆ ಕಲಾನಿರ್ಮಾತರು ಕೆಲವೇ ಜನರಾಗಿದ್ದರೂ ಅವರ ಉಪಭೋಗವನ್ನು ಎಲ್ಲರೂ ಮಾಡಬಾರದೇಕೆ? ವ್ಯಕ್ತಿಗೂ ಸಮಾಜಕ್ಕೂ ಅಭೇದವನ್ನು ಹೇಳುವ ಕಾಲವಿದು. ಇಂದು ಲಲಿತ ಕಲೆಯ ಆಸ್ವಾದವನ್ನು ಕೆಲವೇ ಜನರಿಗೆ ಮಿತಗೊಳಿಸುವುದು ಅವಶ್ಯವೂ ಅಲ್ಲ, ಸಾಧ್ಯವೂ ಅಲ್ಲ. ಇದಕ್ಕೆ ಸಂಬಂಧಿಸಿದವರೆಲ್ಲ ಕಲೆಯನ್ನು ಆಸ್ವಾದಿಸುವ ಸಾಮರ್ಥ್ಯವ ಲಕ್ಷ್ಯಕೊಟ್ಟು [illegible] ಅಷ್ಟೇ ಜನಸಾಮಾನ್ಯರಿಗೂ [illegible]ವಾಗುವಂತೆ ನೋಡಿಕೊಳ್ಳಬೇಕು. ಸಾಮಾನ್ಯ ಜನರಿಗೆ ತಿಳಿಯುವುದಿಲ್ಲೆಂದು ಹೇಳುವ ಅಧಿಕಾರ ನಮಗಿಲ್ಲ. ಅವರಿಗೆ ಅರ್ಥವಾಗದಿದ್ದರೆ, ಅರ್ಥವಾಗುವವನು ಅವರಲ್ಲಿರುವ ಸುಪ್ತಶಕ್ತಿಯನ್ನು ಜಾಗೃತಗೊಳಿಸಲು ಕರ್ತವ್ಯಬದ್ಧನಾಗಿದ್ದಾನೆ. ವಸ್ತುತಃ, ಈಗ ಪ್ರಜಾರಕ್ಕೆ ಕರುತ್ತಿರುವ [illegible] ಪ್ರಾಥಮಿಕ

[illegible]

ಸತ್ಯ ಮತ್ತು ಸೌಂದರ್ಯ

[illegible]

—[illegible]

ಖಾದೀ ಭಾವನೆ

(ಗಾಂಧಿಯವರಿಂದ)

ಕಳ್ಳ ತಿಕ್ಕೀಕಸದಲ್ಲಿ ಸಂಧಿ! ಖಾದಿ ಯನ್ನು ಕೇಗೆ ಅಭಿವೃದ್ಧಿಗೊಳಿಸಲು ಸಾಧ್ಯವೆಂಬುದನ್ನು ತೋರಿಸುವುದರ ಸಲುವಾಗಿ ಕೆಲ ಮಾತುಗಳನ್ನು ಹೇಳದಿದ್ದರೆ ನಾನು ತಪ್ಪು ಮಾಡಿದಂತಾದೀತು. "ಖಾದೀ ಭಾವನೆ" ಯನ್ನು ಆ ಶಬ್ದದಿಂದಲ್ಲದೆ ಬೇರೆಯ ವಿಧದಿಂದ ಆ ಭಾವನೆಯನ್ನು ಹೆಚ್ಚು ಚೆನ್ನಾಗಿ ಅಭಿವ್ಯಕ್ತಿಗೊಳಿಸಲು ನಾವು ತರಲಾರೆವು ಎಂಬುದು ನನ್ನ ನಚ್ಚಿಕೆ. ದಯವಿಟ್ಟು ನಾನು ಹೇಳುತ್ತಿರುವ ವ್ಯತ್ಯಾಸವನ್ನು ಗಮನಿಸಿರಿ. ಕೇವಲ ಖಾದಿಯನ್ನು ಧರಿಸುವುದರಿಂದ ಸಂಧಿಯ ಭಾವನೆಯನ್ನು ಅಭಿನಯಿಸಿ ತೋರಿಸಬಹುದೆಂದು ನಾನು ಹೇಳುತ್ತಿಲ್ಲ; ನಮಗೆ "ಖಾದೀಭಾವನೆ" ಬೇಕೆಂದು ನಾನು ಹೇಳುತ್ತೇನೆ. ಈ ದೇಶದಲ್ಲಿ ಕಳ್ಳನಾಗಲಿ, ಸೂಳೆಯಾಗಲಿ, ನಮ್ಮಂತೆಯೇ ಏನನ್ನಾದರೂ ಉಡಲೇಬೇಕಾಗಿದೆ; ಆದುದರಿಂದ ಅವನೂ ಅವಳೂ ಖಾದಿಯನ್ನು ಧರಿಸಲೇಬೇಕೆಂದು ನಿರೀಕ್ಷಿಸಬೇಕು. ಆದರೆ "ಖಾದೀ ಭಾವನೆ" ಯೆಂದರೆ ಖಾದೀಧಾರಣದ ಅರ್ಥವನ್ನು ನಾವು ತಿಳಿದಿರಬೇಕು ಎಂದರ್ಥ. ಹೊರದುವು ದಕ್ಕೆಂದು ಪ್ರತಿ ದಿನ ಬೆಳಿಗ್ಗೆ ನಾವು ಹಾಗೆ ಮಾಡುತ್ತಿರುವುದು ದರಿದ್ರನಾರಾಯಣನ ಹೆಸರಿನಲ್ಲಿ, ಭಾರತದಲ್ಲಿ ಉಪವಾಸದಿಂದ ಸಾಯುತ್ತಿರುವ ಕೋಟ್ಯವಧಿ ಜನರಿಗಾಗಿ ಎಂಬುದನ್ನು ನೆನಪಿನಲ್ಲಿಡಬೇಕು. ನಮ್ಮಲ್ಲಿ "ಖಾದೀ ಭಾವನೆ" ಇದ್ದರೆ ಪ್ರತಿಯೊಂದು ಜೀವನ ಕ್ಷೇತ್ರದಲ್ಲೂ ನಾವು ನಮ್ಮ ಸುತ್ತಲೂ ಸರಳತೆ ಯಿರುವಂತೆ ನೋಡಿಕೊಳ್ಳುವೆವು. "ಖಾದೀ ಭಾವನೆ ಎಂದರೆ ಅಪರಿಮಿತ ಸಹನೆ. ಖಾದಿಯ ಉತ್ಪಾದನದ ಬಗ್ಗೆ ಏನಾದರೂ ಗೊತ್ತಿದ್ದವರಿದ್ದರೆ, ಅವರಿಗೆ ತಮ್ಮ ಉದ್ಯೋಗದಲ್ಲಿ ನೂಲುಗಾರರೂ ನೇಯ್ಗೆಗಾರರೂ ಎಷ್ಟು ಸಹನೆಯಿಂದ ದುಡಿಯಬೇಕಾಗುತ್ತದೆ ಎಂಬುದು ತಿಳಿದಿದೆ. ಅದೇ ಮೇರೆಗೆ "ಸ್ವರಾಜ್ಯಸೂತ್ರವನ್ನು" ರಚಿಸುವಾಗಲೂ ಅಷ್ಟೇ ಸಹನೆ ಯಿರಬೇಕು. "ಖಾದೀ ಭಾವನೆ" ಎಂದರೆ ಹಾಗೇ ಅಪರಿಮಿತ ಶ್ರದ್ಧೆಯೆಂದು ಅರ್ಥವಾಗುತ್ತದೆ. ತಾನು ನೂಲುವ ನೂಲು ಸ್ವಲ್ಪವಾದರೂ ಅದನ್ನೆಲ್ಲ ಒಟ್ಟುಗೂಡಿಸಿದರೆ ಅದು ಭಾರತದಲ್ಲಿಯ ಪ್ರತಿಯೊಬ್ಬನಿಗೂ ಬಟ್ಟೆಯನ್ನು ಒದಗಿಸಿ ಕೊಡಲು ಸಾಕಾಗುವುದು ಎಂಬ ಅಪರಿಮಿತ ಶ್ರದ್ಧೆ ಚರಕ ಹಿಡಿದು ದುಡಿಯುತ್ತಿರುವ ನೂಲುಗಾರನಿಗಿರುವಂತೆಯೇ ನಮ್ಮ ಖಾದಿಯಲ್ಲಿರುವ ಅಡೆತಡೆಗಳನ್ನು ಸತ್ಯ ಅಹಿಂಸೆಗಳು ಗೆದ್ದುಕೊಡುವುವೆಂಬುದರಲ್ಲಿ ನಾವು ಅಮೋಘಶ್ರದ್ಧೆಯುಳ್ಳವರಾಗಬೇಕು.

ಭೂಮಿಯ ಮೇಲಿರುವ ಪ್ರತಿಯೊಬ್ಬನೂ ನಮ್ಮ ನೆರೆಯವನೆಂದು ತಿಳಿದುಕೊಳ್ಳುವುದೇ "ಖಾದೀ ಭಾವನೆ". ಅದೆಂದರೆ, ನಮ್ಮ ನೆರೆಯವರಿಗೆ ಹಾನಿಯನ್ನುಂಟುಮಾಡಬಹುದಾದ ಪ್ರತಿಯೊಂದನ್ನೂ ಸಂಪೂರ್ಣವಾಗಿ ತ್ಯಾಗ ಮಾಡಿಬಿಡುವದು. ನಮ್ಮಲ್ಲಿಯ ಕೋಟಿಗಟ್ಟಲೆ ಜನರಲ್ಲಿ ನಾವು ಆ ಭಾವನೆ ಬೆಳೆದು ಬರುವಂತೆ ಮಾಡಿದ್ದೇ ಆದರೆ ನಮ್ಮ ಈ ಭಾರತ ಎಂಥ ಚೆಲುವಿನ ನಾಡಾದೀತು! ದೇಶದಲ್ಲಿ ಹೆಚ್ಚು ಹೆಚ್ಚಾಗಿ ತಿರುಗಿದಷ್ಟೂ ಪರಿಸ್ಥಿತಿಯನ್ನು ನಾನೇ ಸ್ವತಃ ಅವಲೋಕಿಸಿದಷ್ಟೂ ಚರಕದ ಸಾಮರ್ಥ್ಯದಲ್ಲಿ ನನ್ನ ಶ್ರದ್ಧೆ ಹೆಚ್ಚು ಹೆಚ್ಚು ದೃಢವಾಗುತ್ತ ಬಂದಿದೆ. "ರಾಮ" ಎಂಬ ಹೆಸರನ್ನು ಸುಮ್ಮನೆ ಜಪ ಮಾಡುತ್ತ ಕುಳಿತುಕೊಳ್ಳುವುದರ ಸಾಮರ್ಥ್ಯವನ್ನು ನಮ್ಮ ಬುದ್ಧಿ ಬಲದಿಂದ ವಿವೇಚಿಸ ಹೋದರೆ ನಮ್ಮ ಬುದ್ಧಿಯು ಹೃದಯಕ್ಕೆ ಸಮಾಧಾನವನ್ನು ತಂದುಕೊಡಲಾರದು. ಆದರೂ ಅಂಥ ಹೆಸರುಗಳನ್ನು ಜಪಿಸುವ ಆಸ್ತಿಯನ್ನು ನಮಗೆ ಬಿಟ್ಟುಹೋದ ಋಷಿಗಳನ್ನು ಈ ಸಭೆಯಲ್ಲಿರುವ ಯಾರೂ ಹುಚ್ಚರು ಅಥವಾ ದಡ್ಡರು ಎಂದು ಬಗೆಯಲಾರರೆಂದು ನನ್ನ ನಂಬಿಗೆ. ಹಾಗೆಯೇ ಈಗ ನಾನು ನಿಮಗೆ ವರ್ಣಿಸಿದ ಎಲ್ಲ ಸಾಮರ್ಥ್ಯವೂ ಖಾದೀಭಾವನೆಯಲ್ಲಿದೆ ಎಂದು ಸೂಚಿಸುತ್ತೇನೆ. ಆದರೆ ಅದರ ಹಿಂದೆ ಒಂದು ಶರ್ತವಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಭಾವನೆಯ ಪ್ರಕಟನೆಗೆ ಒಂದೇ ಒಂದು ಶರ್ತ ಅಂಟಿಕೊಂಡಿದೆ. ಅದೇ ರಾಮನಾಮದಂತೆ ನಮ್ಮ ಮನಸ್ಸಿನಲ್ಲಿ ಒಂದು ಚೇತನಶಕ್ತಿಯಾಗಿ ನಿಂತಿತು. ಏಕೆಂದರೆ, ಅದರ ಹಿಂದೆ ಅದನ್ನು ನಮಗಿತ್ತವರ ತಪಶ್ಚರ್ಯೆಯಿತ್ತು. ಆದುದರಿಂದ ಖಾದೀ ಚಳವಳಿಯೊಡನೆ ಅದು ಸೇರಿದೆ. ಅದಕ್ಕೆ ಅದರ ಹಿಂದಿರುವವರ (ಬೆಂಬಲಿಗರ) ತಪಶ್ಚರ್ಯೆ ಬೇಕೇ ಬೇಕು. ಖಾದಿಗಾಗಿ ತಮ್ಮ ಜೀವಿತವನ್ನು ಅರ್ಪಿಸಿದವರು ಪ್ರತಿಕ್ಷಣವೂ ಜೀವನದಲ್ಲಿ ಪಾವಿತ್ರ್ಯವಿರಬೇಕೆಂಬುದನ್ನು ಹಟಹಿಡಿದು ನಿಲ್ಲದಿದ್ದರೆ, ಖಾದಿಯು ನಮ್ಮ ಜನರ ನಾನಾ ಪ್ಯಾರಗಳಲ್ಲಿ ಕೊಳೆತು ಸಾಯುವುದು ಖಂಡಿತ ಎಂಬುದರ ಬಗ್ಗೆ ನಾನು ನನ್ನ ಜೀವನದ ಪ್ರತಿನಿಮಿಷದಲ್ಲೂ ಅರಿಯುತ್ತಿದ್ದೇನೆ. ಅವುಗಳ ಮಟ್ಟದಲ್ಲಿ, ಅವುಗಳ ದರಗಳ ಪ್ರಕಾರ ವ್ಯಾಪಾರದ ಇತರ ಸಾಮಗ್ರಿಗಳೊಡನೆ ಖಾದಿಯು ಸ್ಪರ್ಧಿಸಲಾರದೆಂಬುದು ನನಗೆ ಚೆನ್ನಾಗಿ ತಿಳಿದಿದೆ. ಸತ್ಯಾಗ್ರಹವೆಂಬುದು ಹೇಗೆ ಜನರು ಬಳಸುವ ಸಾಮಾನ್ಯ ಆಯುಧಗಳಲ್ಲಿ ಒಂದಾಗಿರದೆ ತನ್ನದೇ ಆದ ಜಾತೀಯದೆನಿಸಿರುವುದೋ ಹಾಗೇ ಖಾದಿಯು ಮಿಕ್ಕ ಪದಾರ್ಥಗಳಿಗೆ ಸಾಧಾರಣವೆನಿಸುವ ದರಗಳನ್ನು ಹಿಡಿದರೆ ಎಂದೂ ಜಯಶಾಲಿಯಾಗಲಾರದ, ಆಗದ ಒಂದು ಅದ್ವಿತೀಯ ವ್ಯಾಪಾರದ ಸಾಮಗ್ರಿಯಾಗಿದೆ ಖಾದಿಯೆಂಬುದು ಅಸದೃಶವಾದುದು, ಅದು ಇಂದು ಭಾರತದಲ್ಲಿರುವ ಪ್ರತಿಯೊಂದು ಪದಾರ್ಥಕ್ಕಿಂತಲೂ ಹೆಚ್ಚು ತುಟ್ಟಿಯಾಗುವುದು ಎಂಬುದರ ಬಗ್ಗೆ ನಾನು ಇಲ್ಲಿ ಕುಳಿತಿದ್ದೇನೆ ಎಂಬುದರ ಬಗ್ಗೆ ನನಗೆ ಎಷ್ಟು ಖಾತ್ರಿಯಿದೆಯೋ ಅಷ್ಟೇ ಖಾತ್ರಿಯಿದೆ. ಆದುದರಿಂದಲೇ ನನಗೆ ನೀವಿತ್ತಿರುವ ಖಾದಿಯ ಹಣದ ಚೀಲಗಳ (ಪಾಕೀಟುಗಳ) ಬಗ್ಗೆ ನಾನು ಅತ್ಯುಲ್ಲಾಸವನ್ನು ತೋರಲಿಲ್ಲ ಎಂಬುದನ್ನು ನೀವು ತಿಳಿದುಕೊಳ್ಳಬಹುದಾಗಿದೆ. ಖಾದಿಯಲ್ಲಿ ನನಗಿರುವ ಶ್ರದ್ಧೆಯ ಹತ್ತನೆಯ ಒಂದಂಶ ನಿಮ್ಮಲ್ಲಿದ್ದಿದ್ದರೆ ನೀವು ಈಗ ನಿಮ್ಮ ಬೊಕ್ಕಸದಿಂದ ಇನ್ನೂರು, ಎರಡು ಸಾವಿರಗಳನ್ನು ತೆಗೆದುಕೊಟ್ಟಂತೆ ಕೊಡದೆ, ಖಾದಿಗೆ ಇನ್ನು ಹಣ ಅಗತ್ಯವಿಲ್ಲ ಎಂದು ನನಗೆ ತೃಪ್ತಿಯಾಗುವಷ್ಟನ್ನು ಕೊಟ್ಟುಬಿಡುತ್ತಿದ್ದಿರಿ.

(ಯಂಗ್ ಇಂಡಿಯಾ, ೨೨-೯-೨೭)

ನಿಯಂತ್ರಣಗಳನ್ನು ತೆಗೆದುಹಾಕಿರಿ

ಪ್ರಾಂತಗಳಲ್ಲಿ ಜನತಾ ಸರಕಾರಗಳು ಮೊತ್ತ ಮೊದಲು ಅಸ್ತಿತ್ವದಲ್ಲಿ ಬಂದಾಗ, ಅವುಗಳು ವಿವಿಧ ಸಮಸ್ಯೆಗಳನ್ನು ತೃಪ್ತಿಕರವಾಗಿ ಬಿಡಿಸಲಾರದೇ ಹೋದರೂ ನಾವು ಚಚ್ಚಿಕೊಳ್ಳಲಿಲ್ಲ. ಇನ್ನೂ ಹೊಸಬರು, ಕಾಲಾಂತರದಲ್ಲಿ ತಪ್ಪುಗಳನ್ನು ಹೋಗಲಾಡಿಸಬಹುದು, ಆ ಮೇಲೆ ಅವರನ್ನು ದೂರಲು ಪರಿಸ್ಥಿತಿಯುಳಿಕ್ಕಿಲ್ಲವೆಂದು ಬಗೆದೆವು. ಆದರೆ ಸುಧಾರಣೆಯಾಗುವ ಲಕ್ಷಣವೆ ಇಲ್ಲ. ಎಂದಿನಂತೆ ಎಲ್ಲೆಲ್ಲಿಯೂ ಅಕ್ಷಮತೆ, ದುಷ್ಟ ಆಡಳಿತ ತಾನೇ ತಾನಾಗಿದೆ. ಸರಕಾರಗಳ ಪಕ್ಷದಲ್ಲಿ ಹಳೆಯ ಸಮಾಧಾನಗಳನ್ನೇ ಮತ್ತೂ ಮತ್ತೂ ಕೊಡುವುದು ನಡೆದಿದೆ. ಆದರೆ ಅವು ಜನರನ್ನು ತೃಪ್ತಿಗೊಳಿಸುವ ಬದಲು ಜನರಲ್ಲಿ ಸರಕಾರಗಳ ಬಗೆಗಿರುವ ವಿಶ್ವಾಸವನ್ನೇ ಹಾರಿಸಿಬಿಟ್ಟಿವೆ. ಈಚೆಗಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಕೆಲವೆಡೆ ಸೋಲಲು ಪ್ರಾಂತಗಳಲ್ಲಿನ ಈಗಿನ ಸರಕಾರಗಳ ಬಗೆಗೆ ಜನರಲ್ಲುಂಟಾದ ತೀವ್ರ ಅಸಂತೋಷವೂ ಒಂದು ಮುಖ್ಯ ಕಾರಣ. ನಿಯಂತ್ರಣಗಳು, ನಿಷೇಧಗಳು, ಕಾಯಿದೆಗಳು, ಸುಗ್ರೀವಾಜ್ಞೆಗಳು ಮೊದಲಾದುವಕ್ಕೆ ಲೆಕ್ಕವೇ ಇಲ್ಲ. ಅಲ್ಲದೆ ಎರಡು ಮೂರು ದಿನಗಳಿಗೊಮ್ಮೆ ಅವುಗಳಿಗೆ ತಿದ್ದುಪಡಿಗಳು ಇಲ್ಲವೆ ಹೆಚ್ಚುವರಿಸೇರಿಕೆಗಳು ಬರುತ್ತಲೇ ಇರುವವು. ಯಾವುದಾದರೊಂದು ದಿನ ಕಾಯಿದೆ ಯಾವ ಸ್ವರೂಪದಲ್ಲಿತ್ತೆಂದು ತಿಳಿದುಕೊಳ್ಳುವುದೇ ಜನರಿಗೆ ಅಸಾಧ್ಯವಾಗಿ ಹೋಗಿದೆ. ಕಾನೂನಿನ ಅಜ್ಞಾನ ರಕ್ಷಣೆಯನ್ನು ಪಡೆಯುವುದು ಶಕ್ಯವಲ್ಲವೆಂದ ಮೇಲೆ ಕಾನೂನುಪಾಲನೆಯ ಕಾರಣದಿಂದ ಇಂಥ ಸ್ಥಿತಿಯಲ್ಲಿ ಸಾಮಾನ್ಯ ಜನರು ಕಾಯಿದೆಯನ್ನು ಪರಿಪೂರ್ಣವಾಗಿ ಪಾಲಿಸಬೇಕೆಂದು ಹೇಗೆ ನಿರೀಕ್ಷಿಸಬಹುದು? ಪರಿಣಾಮವಾಗಿ ಸರಳ ಮುಗ್ಧರು ಜನರು ಶಿಕ್ಷೆಗೊಳಗಾಗುತ್ತಾರೆ.

ದೇಶದ ಆಹಾರ ಪರಿಸ್ಥಿತಿ ಗಂಭೀರವಾಗಿಯೂ ಚಿಂತಾಜನಕವಾಗಿಯೂ ಇದೆಯೆನ್ನುತ್ತಾರೆ. ಅದರ ಭಯಾನಕತೆಯನ್ನು ಕಡಿಮೆಮಾಡಲೆಂದು ವಿವಿಧ ಸರಕಾರಗಳು ಬೇರೆ ಬೇರೆ ಹೊಸ ಶಾಖೆಗಳನ್ನು ಉಂಟುಮಾಡುತ್ತಿವೆ. ಇವು ತುಂಬ ವೆಚ್ಚದವು. ಆ ಭಾರವೂ ಸಾಮಾನ್ಯ ಜನರ ಮೇಲೆಯೆ ಬೀಳುತ್ತದೆ. ಆದರೂ ಅಕ್ಷಮತೆಯಲ್ಲಿಯೂ ಲಂಚಗುಳಿತನದಲ್ಲಿಯೂ ಈ ಶಾಖೆಗಳಿಗೆ ಸರಿದೂಗಬಲ್ಲ ಶಾಖೆಯೇ ಬೇರೊಂದಿರದು.

ಮುಂಬಯಿಯ ದೃಷ್ಟಾಂತವನ್ನೇ ತೆಗೆದುಕೊಳ್ಳೋಣ. ಇಲ್ಲಿಯ ಸೀದಾ ಕಚೇರಿಗಳಲ್ಲಿ ನೂರುಗಟ್ಟಲೆ ಗಂಡಸರು ಹೆಂಗಸರು ನಿಯುಕ್ತರಾಗಿದ್ದಾರೆ. ಅವರಿಗಾಗಿ ವಿಪುಲವಾದ ಸಾರ್ವಜನಿಕ ಹಣ ವ್ಯಯವಾಗುತ್ತಿದೆ. ಆದರೆ ಅವುಗಳ ಪ್ರಯೋಜನವನ್ನು ಬಗೆದರೆ, ಈಗಿಂದೀಗ ಅವುಗಳನ್ನು ಮುಚ್ಚಿಬಿಡಬೇಕೆನಿಸುತ್ತದೆ. ಈ ಶಾಖೆ ಆಹಾರ ಸಂಗ್ರಹವೆಷ್ಟೋ ಹಾಳಾಗುವುದಕ್ಕೆ ಸಾಧನವಾಗಿದೆಯೆಂಬುದಂತೂ ನಿಶ್ಚಿತ. ಅದರ ಮೇಲೆ ಅದು ಹುಚ್ಚು ಲಂಚಗುಳಿ, ಕಳ್ಳಪೇಟೆಗೆ ಮೂಲ. ಮಂತ್ರಿಗಳಿಗೋ ಅಧಿಕಾರಿಗಳಿಗೋ ದೂರಿತ್ತರೆ, ಜನರೆಲ್ಲರ ನೈತಿಕ ಮಟ್ಟವೇ ಇಳಿದುಹೋಗಿದೆ, ಉಪಾಯವಿಲ್ಲ, ಎಂದು ಉತ್ತರ ಬರುತ್ತದೆ. ಹೊಣೆಗಾರ ಅಧಿಕಾರಿಗೆ ಈ ಅರ್ಥರಹಿತ ಉತ್ತರ ಶೋಭಿಸುವುದಿಲ್ಲ. ಜನರ ನೈತಿಕ ಮಟ್ಟ ಹೀನವಾಗಿ ಉತ್ತಮವಾಗಿಲ್ಲವಾದುದರಿಂದ ಅವರು ಸರ್ವಹಿತಕ್ಕಾಗಿ ಕಾರ್ಯಮಾಡಬಲ್ಲರು ಮತ್ತು ಲಾಭಕ್ಕಾಗಿ, ಸ್ವಾರ್ಥಪರರಾಗಿ ಸರಕುಗಳನ್ನು ಉಪಯೋಗಿಸುವುದಕ್ಕೂ ಒಂದು ಮಿತಿ ಹಾಕಿಕೊಳ್ಳಲೊಲ್ಲರು ಎಂದೇ ನಿಯಂತ್ರಣಗಳು ಬೇಕಾಗಿವೆಯೆನ್ನಲಾಗಿದೆ. ಆದುದರಿಂದ ಈ ಶಾಖೆಯಲ್ಲಿ ಆ [illegible] ಮುಕ್ತಾಯಕ್ಕೆ ಮುಟ್ಟಿಸುವುದು ಆದ್ಯ ಕರ್ತವ್ಯ. ಆದರೆ ಇಲ್ಲಿ ಈ ದೌರ್ಜನ್ಯಗಳನ್ನೇ ಸಮರ್ಥಿಸಿ ಅವು ಬೆಳೆಯಲು ಅವಕಾಶವೀಯಲಾಗುತ್ತದೆ.

ಕಳೆದ ವರ್ಷ ಮುಂಬಯಿ ಸರಕಾರ ತೊಗರಿ ಬೇಳೆಯನ್ನು ತನ್ನ ಸೀದಾ ಅಂಗಡಿಗಳ ಮೂಲಕ ಹಂಚಿತು. ಕೆಲ ಸಮಯದ ನಂತರ ಅದನ್ನು ರೈತರಿಂದ ವಸೂಲು ಮಾಡುವುದು ಕಠಿನ ಹೋಗತೊಡಗಿತು. ಕಾರಣವಿಷ್ಟೆ: ತೊಗರಿ ಬೇಳೆಗೆ ಸರಕಾರ ಗೊತ್ತುಪಡಿಸಿದ ಬೆಲೆ ಬೇಳೆನುಚ್ಚಿಗೆಗೊತ್ತುಪಡಿಸಿದ್ದಕ್ಕಿಂತಲೂ ಕಡಿಮೆಯಾಗಿತ್ತು. ಪರಿಣಾಮವಾಗಿ ನುಚ್ಚಿಗಿಂತ ಬೇಳೆಯನ್ನೇ ದನಗಳಿಗೆ ಹಾಕುವುದು ಲಾಭವೆಂದುಕೊಂಡು ರೈತರು ಹಾಗೆಯೆ ಮಾಡಿದರು. ಇತ್ತ ಸರಕಾರದ ಗಮನವನ್ನು ಸೆಳೆದರೂ ಫಲವೇನೂ ಆಗಲಿಲ್ಲ. ತೊಗರೀ ಬೇಳೆಯನ್ನು ಸೀದಾ ಪದಾರ್ಥವಾಗಿ ಎಷ್ಟೋ ತಿಂಗಳ ವರೆಗೆ ಸರಕಾರ ಇರಿಸಿಕೊಂಡಿತಾದರೂ ಅದನ್ನು ಜನರಿಗೆ ಒದಗಿಸಲಾಗಲಿಲ್ಲ.

ಮುಂಬಯಿಯಲ್ಲಿ ಕಳೆದ ಮೂರು ವರ್ಷಗಳಿಂದ ಸೆಜ್ಜೆಯೊಂದು ಸೀದಾ ಪದಾರ್ಥವಾಗಿದೆ. ಆದರೆ ಅದು ಸೀದಾ ಅಂಗಡಿಗಳಲ್ಲಿ ಎಂದೂ ಮಾರಲ್ಪಡಲಿಲ್ಲ. ವರ್ಷಗಟ್ಟಲೆ ಯಾವುದನ್ನು ಒದಗಿಸಲು ಸರಕಾರದ ಕೈಲಾಗಲಿಲ್ಲವೋ ಅದನ್ನು ಸೀದಾ ಪದಾರ್ಥವೆನ್ನುವುದೇನು ಹುರುಳು? ಅಂಥ ಪದಾರ್ಥಗಳ ಮೇಲೆ ನಿಯಂತ್ರಣಗಳನ್ನು ಇಡುವುದರ ಸಾರ್ಥಕ್ಯವೇನು? ಈ ನಿಯಂತ್ರಣಗಳು ವ್ಯಾಪಾರದಲ್ಲಿ ಉಂಟುಮಾಡುವ ಪರಿಣಾಮಗಳನ್ನು ನೋಡಿರಿ. ಕಾಯಿದೆಯನ್ನು ಮುರಿಯುವವರು ಕಳ್ಳಪೇಟೆಯಲ್ಲಿ ಧಾರಾಳವಾಗಿ ದೊರೆಯುವ ಸೆಜ್ಜೆಯನ್ನು ಬೇಕಾದಾಗ ತಿನ್ನಬಹುದು. ಕಾಯಿದೆಗೆ ವಿಧೇಯರಾಗಿರುವವರಿಗಷ್ಟೇ ಅದು ಅಲಭ್ಯವಾಗಿದೆ. ಯಾವನಾದರು ರೋಗಿಗೆ ಸೆಜ್ಜೆಯ ಪಥ್ಯವನ್ನು ಹೇಳಿದರೆ ಅವನಿಗೆ ಕಳ್ಳಪೇಟೆಯೇ ಗತಿ. ಆರೋಗ್ಯ ಹೊಂದಬೇಕೆಂಬ ಸಹಜ ಆಶೆಯನ್ನು ತಡೆಯಲಾರದೆ ಅವನು ಕಾಯಿದೆಯನ್ನು ಮುರಿಯುತ್ತಾನೆ. ಅವನನ್ನು ಶುದ್ಧ ದೋಷಿಯೆಂದು ಅನ್ನಬಹುದೆ?

ಆಹಾರದ ಬೆಳೆ ಹೆಚ್ಚಿಸುವ ಸಲುವಾಗಿ ಧಾರಾಳ ಹಣ ಸುರಿಯಲಾಗುತ್ತದೆ. ಆದರೆ ಇದರಿಂದ ಏನೂ ಫಲವೇಕೆ ಆಗಿಲ್ಲವೆಂದು ಒಳಹೊಕ್ಕು ನೋಡುವ ಗೋಜಿಗೆ ಹೋಗುವವರಾರೂ ಇಲ್ಲ. ಒಳ್ಳೆಯ ಬೆಲೆ ಸಿಗುವುದೊಂದು, ಸರಕಾರಿ ಅಧಿಕಾರಿಗಳ ಕಾಟದಿಂದ ಪಾರಾಗುವುದೊಂದು, ಹೀಗೆ ಹೆಚ್ಚು ಯತಃ ಲಾಭದಾಯಕವಾಗಿರುವ ಅನಿಯಂತ್ರಿತ ಬೆಳೆಗಳನ್ನೆ ರೈತರು ಬೆಳೆಸಬಯಸುತ್ತಾರೆಂಬುದೇ ಇದರ ಮೂಲ ಕಾರಣ. ನಿಯಂತ್ರಣಗಳನ್ನು ತೆಗೆದು ಹಾಕಿದರೆ ರೈತರು ಸಹಜ ಪ್ರವೃತ್ತಿಗೇ ಮರಳುವರು. ನಿಯಂತ್ರಣಪೂರ್ವದಲ್ಲಿ ಮುಂಬಯಿಯಲ್ಲಿ ಪಾಯಲಿಗೆ ಎರಡಾಣೆಯಂತೆ "ನಾಗಲಿ" ದೊರೆಯುತ್ತಿತ್ತು. ಆದರೂ ಅದರ ವ್ಯಾಪಾರ ತುಂಬ ಕಡಿಮೆಯಿತ್ತು. ಆದರೆ ಇಂದು ಅದು ಪಾಯಲಿಗೆ ಎರಡು ರೂಪಾಯಿಯಂತೆ ಮಾರುತ್ತದೆ. ಆದರೂ ಸಾವಿರಾರು ಚೀಲ ಮಾರಾಟವಾಗುತ್ತದೆ. ಇದರಿಂದ ರೈತರ ಮನೋವೃತ್ತಿ ಹೇಗೆ ಪರಿವರ್ತನೆ ಹೊಂದಿದೆಯೆಂದು ತಿಳಿಯುತ್ತದೆ.

ನಿರ್ದಾಕ್ಷಿಣ್ಯವಾಗಿ ಹೇಳಬೇಕಾದರೆ ಆಹಾರ ಮೊದಲಾದವುಗಳ ಕೊರತೆಗೆ ನಿಯಂತ್ರಣಗಳೇ ಮೂಲ. ಸೀದಾದಿಂದ ತಂದ ಸರಕು ಕೆಲದಿನಗಳ ನಂತರ ಕೆಟ್ಟು ಹೋಗುತ್ತಿದ್ದರೂ ಪ್ರತಿಯೊಬ್ಬ ನಾಗರಿಕನೂ ಸಾಧ್ಯವಿದ್ದಷ್ಟು ಸಂಗ್ರಹಿಸಿಡಲು ಹೆಣಗುತ್ತಾನೆ. ಸೀದಾ ಪ್ರಮಾಣದ ಅಸ್ಥಿರತೆಯನ್ನು ನೋಡಿ ಇದೇ ಕ್ಷೇಮವೆಂದು ಅವನಿಗೆನಿಸುತ್ತದೆ. ಸರಕಾರಿ ಪಬಾರಗಳಲ್ಲಿ ಧಾನ್ಯ ಹಾಳಾಗುವುದಾದರೂ ಹೀಗೆಯೆ. ಅಧಿಕಾರಿಗಳ ಅರ್ಹತೆಗಳನ್ನು ವಿಶ್ವವಿದ್ಯಾಲಯದ ಪದವಿಗಳ ಮೇಲೆಯೆ ಅಳೆಯುವದರಿಂದ ಆಹಾರ ಮತ್ತು ಅದರ ರಕ್ಷಣೆಯನ್ನು ಕುರಿತ ಅವರ ಅಜ್ಞಾನದ ಫಲವಾಗಿ ಆಹಾರವೆಷ್ಟೋ ನಷ್ಟವಾಗಿಬಿಡುತ್ತದೆ. ಕೆಟ್ಟ ಸರಕುಗಳನ್ನು ಲಿಲಾವು ಮಾಡುವುದೂ ಸಮುದ್ರದ ಪಾಲುಮಾಡುವದೂ ಇದಕ್ಕೆ ಪ್ರಮಾಣ. ವಿಶ್ವವಿದ್ಯಾಲಯ ಶಿಕ್ಷಣವೇ ಮನುಷ್ಯನ ಯೋಗ್ಯತೆಯ ಒರೆಗಲ್ಲಾಗಿರುವಲ್ಲಿ ಇದು ವಿಚಿತ್ರವಲ್ಲ.

ಆಹಾರನಿಯಂತ್ರಣಗಳ ಮಟ್ಟಿಗೆ ಮಾತ್ರ ಹೀಗಾಗಿದೆ ಎನ್ನುವಂತಿಲ್ಲ. ಎಲ್ಲ ನಿಯಂತ್ರಣಗಳ ಹಣೆಯ ಬರಹವೂ ಇದೇ ರೀತಿಯದಾಗಿದೆ. ನಾವೀಗ ಹಾಲನ್ನು ತೆಗೆದುಕೊಳ್ಳೋಣ. ಅದಕ್ಕೆ ಸಂಬಂಧಿಸಿದ ಕಾರ್ಯಗಳಿಗಾಗಿ ಸರಕಾರ ಎಷ್ಟು ಖರ್ಚು ಮಾಡುತ್ತಿದೆ? ಆದರೆ ಒಂದು ಪಾವು ಹಾಲಿಗಾಗಿ ಸುಮಾರು ಅರ್ಧ ಗಂಟೆಯ ವರೆಗೆ ಜನರು ಒಬ್ಬರಹಿಂದೊಬ್ಬರು ಕಾದುಕೊಂಡು ನಿಲ್ಲಬೇಕಾಗುತ್ತದೆ.

ಚಿಮಣಿಯಣ್ಣೆಯ ಕತೆಯೂ ಹೀಗೆಯೇ. ಈಗ ಮುಂಬಯಿಯಲ್ಲಿ ಬೇಕಾದ್ದಕ್ಕಿಂತ ಹೆಚ್ಚು ಚಿಮಣಿಯಣ್ಣೆಯನ್ನು ಹಂಚಲಾಗುತ್ತಿದೆ. ಇದೇ ವೇಳೆಗೆ ಹತ್ತಿರದ ಹಳ್ಳಿಗಳಲ್ಲಿ ರಾತ್ರಿಯಲ್ಲಿ ದೀಪ ಹಚ್ಚಲು ಚಿಮಣಿಯಣ್ಣೆಯನ್ನು ಕಳ್ಳಪೇಟೆಯಿಂದ ತರಬೇಕಾಗುತ್ತದೆ. ಸ್ವತಃ ಮುಂಬಯಿಯಿಂದಲೇ ಬೇರೆ ಬೇರೆ ಹೆಸರುಗಳಿಂದ ರೈಲು ಅಥವಾ ಲಾರಿಗಳ ಮೂಲಕ ಬೇಕಾದಷ್ಟು ಡಬ್ಬಿಗಳನ್ನು ಹೊರಗೆ ಕಳಿಸಲಾಗುತ್ತಿದೆ. ತಮ್ಮ ಲಾಭಕ್ಕಾಗಿಯೇ ಅಧಿಕಾರಿಗಳು ನೋಡಿಯೂ ನೋಡದಂತಿದ್ದು ಕಾಯಿದೆಗೆ ವಿರುದ್ಧವಾದ ಅಂಥ ಕಾರ್ಯಗಳಿಗೆ ಪ್ರೋತ್ಸಾಹ ಕೊಡುತ್ತಾರೆ. ಮಂತ್ರಿಪದಾರೂಢನಾದ ವ್ಯಕ್ತಿಯು ಸ್ವತಃ ಹೋಗಿ ಈ ವಿವರಗಳನ್ನೆಲ್ಲ ನೋಡುವುದು ಸಾಧ್ಯವಿಲ್ಲ; ಆದರೆ ಅಂಥ ಅಸಮಂಜಸ ವಿತರಣವು ತನ್ನ ಆಡಳಿತೆಯಲ್ಲಿ ತಪ್ಪದೆ ನಡೆಯುತ್ತಿದ್ದರೂ ಅದು ಅವನ ಲಕ್ಷ್ಯಕ್ಕೆ ಏಕೆ ಬರಲಿಲ್ಲವೋ ದೇವರಿಗೇ ಗೊತ್ತು.

ತಮಗೆ ಯಾವಾಗಲೂ ಕೆಲಸದ ಒತ್ತರ ಬಹಳ ಎಂದು ಇಂದಿನ ಮಂತ್ರಿಗಳು ಎಲ್ಲ ಕಾಲದಲ್ಲೂ ಹೇಳುತ್ತಿರುವುದು ಕೇಳಬರುತ್ತದೆ; ಆದರೆ ನಾವು ಅವರನ್ನು ಸಾಧಾರಣವಾಗಿ ಸಭೆಗಳಲ್ಲಿ, ಉದ್ಘಾಟನ ಸಮಾರಂಭಗಳಲ್ಲಿ, ಉಪದೇಶೋಪನ್ಯಾಸಗಳಲ್ಲಿ, ಸ್ವಾಗತ ಸಂದರ್ಭಗಳಲ್ಲಿ, ಭೋಜನೋಪಾಹಾರ ಮುಂತಾದವುಗಳಲ್ಲಿ ಕಾಣುತ್ತೇವೆ. ಸಾಮಾನ್ಯವಾಗಿ ಇಂಥ ಒಂದಲ್ಲ ಒಂದು ಸಮಾರಂಭಗಳಲ್ಲಿ ಅವರು ಇದ್ದೇ ಇರುವರು. ಜನರು ಇದನ್ನು ಕಣ್ಣೆದುರಲ್ಲೇ ಕಾಣುತ್ತಿರುವಾಗ, ಮಂತ್ರಿಗಳು ತಮಗೆ ದುಡಿದು ದಣಿವಾಯಿತು.

(೧೭ ನೆಯ ಪುಟಕ್ಕೆ)

ಮಹಾತ್ಮಾ ಗಾಂಧಿ

(ಪಂಡಿತ ಜವಾಹರಲಾಲ ನೆಹರು)

ಭಾರತದ ೩೦ ಕೋಟಿ ಜನತೆಯ ಅಂತಃಕರಣದ ಮೇಲೆ ಪ್ರಭಾವ ಬೀರಿದ ಅದ್ಭುತ ಮತ್ತು ವಿಲಕ್ಷಣವಾದ ಗಾಂಧೀಜಿಯ ವ್ಯಕ್ತಿತ್ವವನ್ನು ಈ ನಾಲ್ಕು ಮಾತುಗಳಿಂದ ಬಣ್ಣಿಸುವುದು ಹೇಗೆ ಸಾಧ್ಯ? ಅವರ ಸಹಕಾರ್ಯಕರ್ತರಿಗಿಂತಲೂ ಉನ್ನತವಾಗಿ ಹಾರಿದಂತಹ ಮತ್ತು ಭವಿಷ್ಯತ್ಕಾಲದ ಬಾಳಿನ ಮೇಲೆ ಅಚ್ಚು ಹಾಕಿದಂತಹ ಕಂಡುನಿಲುಕದಂತಹ ಅದ್ವಿತೀಯವಾದ ಅವರ ಗುಣಗಳನ್ನು ಇಲ್ಲಿ ಹೇಳಿದ ಮಾತುಗಳಿಂದ ತಿಳಿಯುವುದು ಹೇಗೆ ಸಾಧ್ಯ? ಕಾಣಲು ಕಿರಿದಾದ ಮೂರ್ತಿ. ಆದರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಹಾ ವ್ಯಕ್ತಿಗಳೆನ್ನಿಸಿಕೊಂಡವರೊಂದಿಗೆ ಕೂಗಿದರೂ ಆಜಾನುಬಾಹುವಾಗಿ ಕಾಣುತ್ತಿದ್ದರು. ಹಲವಾರು ವರುಷಗಳ ವರೆಗೆ ನಾವು ಅವರನ್ನು ಅವರ ಭಿನ್ನ ಭಿನ್ನ ಮನೋವೃತ್ತಿಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ತಿಳಿಯಲು ಪ್ರಯತ್ನಿಸಿದ್ದೇವೆ. ಆದರೆ ಅವರ ಕಾರ್ಯದ ಹಿಂದೆ ಅಡಗಿದ ಶಕ್ತಿಯ ವ್ಯಾಪ್ತಿಯ ಅಳವು ನಮ್ಮ ತಿಳುವಳಿಕೆಯ ಹಂತವನ್ನು ದಾಟಿ ನಿಂತಿದೆ. ನೋಡಲಿಕ್ಕೆ ಎಲ್ಲವೂ ಸರಳ-ಸುಲಭವೆಂದು ಕಂಡರೂ ಅವರ ಮಾತಿನ ಮರ್ಮವು ನಮ್ಮ ಬುದ್ಧಿಗೆ ನಿಲುಕದು.

ಗಾಂಧೀಜಿಯವರೊಡನೆ ಕೆಲಸ ಮಾಡುತ್ತ ನಾವು ಮುದುಕರಾದೆವು. ನಮ್ಮ ಅನಂತರ ಮತ್ತೊಂದು ಪೀಳಿಗೆಯು ಮೇಲೆದ್ದು ಬಂದಿದೆ. ಆ ಹೊಸ ಪೀಳಿಗೆಯ ಮೇಲೆ ಪ್ರಭಾವವಾಗಿದ್ದರೂ ಅದರ ರೀತಿಯೇ ಬೇರೆ. ಅದರಲ್ಲಿಯ ಬಹು ಜನರಿಗೆ ಗಾಂಧೀಜಿ ದಂತಕಥೆಯಂತಾಗಿದ್ದಾರೆ, ಒಂದು ರಹಸ್ಯಮಯ ವ್ಯಕ್ತಿಯಾಗಿದ್ದಾರೆ. ಅವರು ಗಾಂಧೀಜಿಯನ್ನು ಪ್ರತ್ಯಕ್ಷ ಕಂಡಿಲ್ಲ. ಅವರ ಮಾತು ಕಿವಿಯಾರೆ ಕೇಳಿಲ್ಲ ಗಾಂಧೀಜಿಯ ಆ ಸ್ನೇಹಮಯ ನಿಕಟಸಂಬಂಧದಲ್ಲಿ ಬಂದಿಲ್ಲ. ಕಾಲು ಶತಮಾನದ ಹಿಂದೆ ಭಾರತದ ಮಾನವ ಕೋಟಿಯಲ್ಲಿ ಅಲೌಕಿಕವಾದ ಚಮತ್ಕೃತಿ ಮಾಡಿದುದನ್ನು ನೋಡಿಲ್ಲ. ಒದಗಿ ಬಂದ ಬದಲಾವಣೆಗಳನ್ನು ಅವರು ಗೃಹೀತವಾಗಿಟ್ಟುಕೊಳ್ಳುತ್ತಾರೆ; ಅದರಂತೆಯೇ ಗಾಂಧೀಜಿಯವರ ದೊಡ್ಡಸ್ತಿಕೆಯನ್ನು ಸಿದ್ಧಾಂತದ ಮಾತೆಂದು ನಂಬುವರು.

ಇನ್ನೂ ಮುಂದಿನ ಪೀಳಿಗೆಯವರು ಏನು ತಿಳಿದುಕೊಳ್ಳುವರೊ ನಾನು ಹೇಳಲಾರೆ. ಆದರೆ ಒಂದು ಮಾತು ಹೇಳುತ್ತೇನೆ. ಗಾಂಧೀಜಿಯ ಹೆಸರು ಅದರ ಸುತ್ತಲಿನ ಕತೆಗಳು ಭವಿಷ್ಯತ್ಕಾಲದ ಜನತೆಗೆ ಸ್ಫೂರ್ತಿದಾಯಕವಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ.

ಗಾಂಧೀಜಿ ಮತ್ತು ಟಾಗೋರ

ಇಪ್ಪತ್ತನೆಯ ಶತಕದ ಮೊದಲರ್ಧದಲ್ಲಿ ಗಾಂಧೀಜಿ ಮತ್ತು ಟಾಗೋರ ಇವರಿಬ್ಬರು ನಿಸ್ಸಂದೇಹವಾಗಿ ಭಾರತದ ಅಸಾಮಾನ್ಯ ಪ್ರಭಾವೀ ಪುರುಷರೆಂದು ಹೇಳಬಹುದು. ಅವರನ್ನು ಒಬ್ಬರೊಬ್ಬರಿಗೆ ಹೋಲಿಸಿ ನೋಡುವುದು ಮನೋರಂಜನೆಯನ್ನೀಸುವುದು. ಸ್ವಭಾವದಲ್ಲಿ, ಸ್ವರೂಪದಲ್ಲಿ ಇವರಿಬ್ಬರಷ್ಟು ಭಿನ್ನತೆಯುಳ್ಳ ಬೇರೆ ವ್ಯಕ್ತಿಗಳು ಇಲ್ಲ. ಟಾಗೋರರು ಸಿರಿವಂತ ಕಲಾವಿದರು ಆಗಿದ್ದರೂ ಸಾಮಾನ್ಯರ ಸಲುವಾಗಿ ಸಹಾನುಭೂತಿ ತೋರುತ್ತಿದ್ದರು. ತುಂಬು ಜೀವನ ನಡೆಸಿ ನೃತ್ಯಗೀತಗಳಿಂದ ಬಾಳು ಸೌಂದರ್ಯಮಯವಾಗುವಂತೆ ಮಾಡಹೇಳುವ ಭಾರತದ ಸಾಂಸ್ಕೃತಿಕ ಸಾಂಪ್ರದಾಯದ ಪ್ರತಿನಿಧಿಗಳಾಗಿದ್ದರು ಅವರು. ಗಾಂಧೀಜಿ ಸಾಮಾನ್ಯನಾಗಿಯೇ ಹುಟ್ಟಿ ಬೆಳೆದವರು ಭಾರತದ ರೈತರ ಪ್ರತೀಕ ಭಾರತದ ಇನ್ನೊಂದು ಬಗೆಯ ಪ್ರಾಚೀನ ಸಂಪ್ರದಾಯದ ತ್ಯಾಗ ತಪಸ್ಸುಗಳ ಪ್ರತಿನಿಧಿಯಾಗಿದ್ದರು. ಟಾಗೋರರು ಮೂಲತಃ ವಿಚಾರಜೀವಿ. ಗಾಂಧೀಜಿ ಪ್ರಾಮುಖ್ಯತಃ ಕರ್ಮಜೀವಿ. ಇಬ್ಬರಲ್ಲಿಯೂ ಒಂದೊಂದು ಬಗೆಯ ವಿಶ್ವದೃಷ್ಟಿ. ಆದರೂ ಇಬ್ಬರೂ ಸಂಪೂರ್ಣ ಭಾರತೀಯ ಜನ್ಮದವರು. ಅವರಿಬ್ಬರು ಎರಡು ವಿಭಿನ್ನವಾದ ಭಾರತೀಯ ಶಿಲು... [illegible] ...ಯೊಬ್ಬರಿಗೆ ಪೋಷಕರಾಗಿದ್ದರು.

[illegible] ... ಕಾಲದಲ್ಲಿ. ಅವರು ದಕ್ಷಿಣ ಆಫ್ರಿಕೆಯಲ್ಲಿ ... ಸದಿಂದ ಸಾಗಿಸಿದ ಹೋರಾಟಕ್ಕಾಗಿ ಭಾರತೀಯರು ಅವರನ್ನು ಹೊಗಳುತ್ತಿದ್ದರು. ಆದರೆ ನಮ್ಮಂತಹ ತರುಣರಿಗೆ ಅವರು ರಾಜಕೀಯ ವಿಚಿತ್ರ ಕನಸುಗಾರರೆಂದು ಭಾಸವಾಗುತ್ತಿತ್ತು.

ಮೊದಲನೆ ಜಾಗತಿಕ ಮಹಾಯುದ್ಧ ಆಗ ಮುಗಿದಿತ್ತು. ಯುದ್ಧಕಾಲದಲ್ಲಿ ಕೊಡಲ್ಪಟ್ಟ ಅಭಿವಚನಗಳು ಸರಕಾರದವರಿಂದ ಪಾಲಿಸಲ್ಪಡದೆ ಜನತೆಗೆ ಸ್ವಾತಂತ್ರ್ಯ ಕೊಡುವ ಬದಲು ಜನತೆಯನ್ನು ಹತ್ತಿಕ್ಕುವ ಹವ್ಯಾಸ ಕಂಡುಬರತೊಡಗಿತು. ಗಾಂಧೀಜಿ ಭಾರತಕ್ಕೆ ಬಂದು ಒಂದೆರಡು ವರುಷಗಳಾಗಿದ್ದವು. ಸಾಬರಮತಿ ಆಶ್ರಮ ಸ್ಥಾಪಿಸಿ ಅಲ್ಲಿ ತಮ್ಮ ಕಾರ್ಯಕ್ರಮ ನಡೆಸಿದ್ದರು. ಅವರು ರಾಜಕೀಯದಿಂದ ದೂರವಾಗಿಯೇ ಇದ್ದರು. ಸೈನ್ಯಭರತಿಯ ಕಾರ್ಯದಲ್ಲಿ ಸರಕಾರಕ್ಕೆ ನೆರವನ್ನು ಕೊಟ್ಟಿದ್ದರು. ದಕ್ಷಿಣ ಆಫ್ರಿಕೆಯಲ್ಲಿಯ ಸತ್ಯಾಗ್ರಹದ ಮೂಲಕ ಭಾರತದಲ್ಲಿಯೂ ಪ್ರಸಿದ್ಧರಾಗಿದ್ದರು. ೧೯೧೭ ರಲ್ಲಿ ಬಿಹಾರದಲ್ಲಿಯ ಚಂಪಾರಣ್ಯದ ರೈತರ ಪಕ್ಷ ವಹಿಸಿ ಯಶಸ್ವಿ ಚಳವಳಿ ಮಾಡಿದ್ದರು ಅನಂತರ ಗುಜರಾತದ ಖೇಡ ಜಿಲ್ಲೆಯ ರೈತರ ಬೆಂಬಲಿಗರಾಗಿ ನಿಂತಿದ್ದರು. ರೌಲೆಟ್ ಬಿಲ್ಲಿನ ಚಳವಳವು ದೇಶದಲ್ಲೆಲ್ಲ ಹಬ್ಬಿತ್ತು. ಅವರು ತಮ್ಮ ಶಕ್ತಿಯನ್ನು ಈ ಚಳವಳದಲ್ಲಿ ಹಾಕಿದರು. ಒಂದು ಹೊಸ ದನಿ ಕೇಳಿಸಿತು.

ಹೊಸ ದನಿ

ಹೊಸ ದನಿಯು ಉಳಿದವರಿಗಿಂತ ಬೇರೆಯೆ ಆಗಿತ್ತು. ಅದು ಶಾಂತವಾಗಿದ್ದಿತು. ಬಹಳ ಸಪ್ಪಳವಿಲ್ಲದಾಗಿತ್ತು. ಆದರೂ ಜನಸಮೂಹದ ಹುಯಿಲನ್ನು ದಾಟಿ ಕೇಳಿಸುವ ಸಾಮರ್ಥ್ಯವುಳ್ಳದ್ದಾಗಿದ್ದಿತು. ಅದು ಮೃದುವಾಗಿದ್ದಿತು. ಸೌಜನ್ಯಯುಕ್ತವಾಗಿದ್ದಿತು. ಆದರೂ ಆ ದನಿಯ ಅಂತರಾಳದಲ್ಲಿ ಉಕ್ಕಿನ ಕಾಠಿಣ್ಯ ಕೂಡಿತ್ತು. ಅದರಲ್ಲಿ ವಿನಮ್ರ ನಿವೇದನೆ ಕಂಡರೂ ಒಂದು ಬಗೆಯ ಭಯಂಕರ ಉಗ್ರತೆ ಇರುತ್ತಿತ್ತು. ಬಳಸಿದ ಪ್ರತಿಯೊಂದು ಶಬ್ದವು ಅರ್ಥಪೂರ್ಣವಾಗಿದ್ದು ಅತೀವ ಉತ್ಕಟತೆಯನ್ನು ಸೂಚಿಸುತ್ತಿತ್ತು; ಶಾಂತಿ-ಸ್ನೇಹಪೂರ್ಣವಾಗಿದ್ದ ಭಾಷೆಯಲ್ಲಿ ತೀವ್ರವಾದ ಕಾರ್ಯಶಕ್ತಿಯು ನೆಳಲು ಕಾಣುತ್ತಿತ್ತು. ಯಾವದೆ ತರದ ಅನ್ಯಾಯಕ್ಕೆ ಬಗ್ಗದ ದೃಢ ನಿರ್ಧಾರವಿತ್ತು.

ಅಮೃತಸರದಲ್ಲಿಯ ಕಾಂಗ್ರೆಸ್ಸು ಮೊಟ್ಟಮೊದಲನೆಯ ಗಾಂಧಿ ಕಾಂಗ್ರೆಸ್ಸು. ಪ್ರತಿನಿಧಿಗಳಲ್ಲಿ ಬಹುಜನರು ಗಾಂಧೀಜಿಯ ಮುಂದಾಳುತನಕ್ಕಾಗಿ ಹಾತೊರೆಯುತ್ತಿದ್ದರು. ಭಾರತದ ರಾಜಕೀಯ ದಿಗಂತದಲ್ಲಿ "ಮಹಾತ್ಮಾ ಗಾಂಧೀಜೀಕಿ ಜೈ" ಇದು ನಿನದಿಸತೊಡಗಿತು. "ಕಾರ್ಯರೂಪದಲ್ಲಿ ತರಲು ಆಗದಂತಹ ಉತ್ಪ್ರೇಕ್ಷೆಯಿಂದ ಕೂಡಿದ ಬೇಡಿಕೆಗಳನ್ನು ಮುಂದಿಡದೆ, ಕೆಳಮಿತಿಯ ಬೇಡಿಕೆಗಳನ್ನು ಸ್ಪಷ್ಟವಾಗಿ ಮುಂದಿಡಿ ನಾವು ಬಂದರೂ ಹಿಂದೆ ಸರಿಯಲಾರೆವು ಎಂಬ ದೃಢ ನಿರ್ಧಾರ ತೋರುವಂತಿರಬೇಕು" ಎಂದು ಅಂದರು ಗಾಂಧೀಜಿ. ಈ ವಿಚಾರಸರಣಿಯೇ ಹೊಸದು, ನಮ್ಮ ಜಗತ್ತಿಗೆ ಆಶೆ.

ಸತ್ಯ ಸ್ವರೂಪ

ಗಾಂಧೀಜಿ ಸತ್ಯಕ್ಕೆ ಅಂಟಿಕೊಂಡವರು. ಆದರೆ ಸತ್ಯವೆಂದರೇನು? ನನಗೆ ನಿಜವಾಗಿಯೂ ಅದರ ನೈಜ ಸ್ವರೂಪ ಗೊತ್ತಿಲ್ಲ. ನಾನು ತಿಳಿದ ಸತ್ಯವೆಲ್ಲ ವ್ಯಕ್ತಿನಿಷ್ಠವಾದುದು. ವಸ್ತುನಿಷ್ಠ ಕೇವಲ ಸತ್ಯವೆಂಬುದು ನಮಗೆ ನಿಲುಕದ ವಿಷಯ. ಬೇರೆಯವರು ಬೇರೆ ಬೇರೆಯಾಗಿ ಸತ್ಯದ ದೃಷ್ಟಿಯಿಟ್ಟುಕೊಂಡವರು ಇರುವರು. ಪ್ರತಿಯೊಬ್ಬರೂ ತಮ್ಮ ಶಿಕ್ಷಣ ಹಿನ್ನೆಲೆಯಿಂದ, ಅಭ್ಯಾಸದಿಂದ, ಸ್ವಭಾವದಿಂದ, [illegible] ಗಾಂಧೀಜಿ. ಆದರೆ ಸತ್ಯವು ಆಯಾ ವ್ಯಕ್ತಿಗೆ ಸತ್ಯವೆನಿಸಿದ್ದು, ಸತ್ಯವು ತಿಳಿಸಿದಷ್ಟು [illegible] ಗಾಂಧೀಜಿ [illegible] ಇತರರು ಹೊಂದಿದ್ದನ್ನು [illegible] ಇದು ರಾಜಕಾರಣಿಯಲ್ಲಿ ಒಂದು ಭಯಂಕರ [illegible] ಬಳ್ಳಿ, ಇದುವರೆಗು ನಾತ್ತು. ಆದರೆ [illegible]

[illegible] ... ಗಾಂಧೀಜಿ

ಹಳ್ಳಿಗಳಲ್ಲಿ ಕಾರ್ಯ

[illegible]

ಗಾಂಧೀಜಿ [illegible] ನೈತಿಕ ತಳಹದಿಯ ಮೇಲೆ [illegible] ಧರ್ಮ. ಅವರು ಅದಕ್ಕೆ ನಿಕ್ಕರ ಕಟ್ಟುಪಾಡಿದ್ದರು ಸತ್ಯ, ಅಹಿಂಸೆ ಒಂದೇ ನಾಣ್ಯದ ಎರಡು ಮುಖಗಳು. ಈ ಎರಡು ತತ್ವಗಳನ್ನು ಸಹಜವಾಗಿ ಅವರು ಅದಲು ಬದಲು ಮಾಡುತ್ತಿದ್ದರು.

ತಮ್ಮ ಆಶೆ ಆದರ್ಶಗಳ [illegible] ರೂಪಿಸಬೇಕೆಂಬ ಅವರ [illegible] ಎಂತಹದು? "[illegible] ಕೂಡ, ಈ ದೇಶವನ್ನು [illegible] [illegible]

[illegible]

ನೆಗಳೂರ ರಂಗನಾಥ

ಭಾರತದಲ್ಲಿ ಮೇಲಿನ ವರ್ಗ, ಕೆಳಗಿನ ವರ್ಗವೆಂಬುದು ಇರಲಾರದು. [illegible] ಎಲ್ಲ ಸಮಾಜದವರು [illegible] ವರು. ಇಂತಹ ಭಾರತದಲ್ಲಿ [illegible] ಕುಡಿತ ಮುಂತಾದ ಮಾದಕ [illegible] ಎಡೆ ಇರಲಾರದು [illegible] ಗಳು ಹೆಂಗಸಿಗೆ ಇರುವವು."

[illegible]

ಧರ್ಮ ಮತ್ತು ರಾಜಕಾರಣ

[illegible]

ಮಹಾತ್ಮಾ ಗಾಂಧಿ

[illegible]

[illegible] ಕಾರ್ಯ [illegible]. ಅವರು [illegible] ಭಾಷೆ [illegible] ಅವರದು. [illegible] ಯಾವ [illegible] ಇಲ್ಲ. ಈ ಶಾಂತ ವಾತಾವರಣದ ಹಿಂದೆ [illegible] ತೀವ್ರತೆ, ಆರ್ಭಟಗಟ್ಟಿದ ಆವೇಶ ಇರುತ್ತಿತ್ತು. [illegible] ಅವರು [illegible] ಆದರೂ ಅದು ಎದೆಗಾರಿಕೆಯದು. [illegible] ಸಾಧನೆಯನ್ನು ಮುಟ್ಟಿಸುವಂತಹದು. [illegible] ನಾವು ನಮ್ಮ ವಿಶ್ವಾಸವನ್ನು ಅವರಲ್ಲಿಟ್ಟು ಮುಂದುವರೆವೆವು.

"ಹೇಡಿತನ ಹಿಂಸೆ ಇವುಗಳಲ್ಲಿ ಒಂದನ್ನು ಆರಿಸಲು ಹೇಳುವದಾದರೆ ಹಿಂಸೆಯನ್ನು ಆರಿಸಲು ಹೇಳುವೆ. ಭಾರತದ ಮಾನವನು [illegible] ದದಕ್ಕಿಂತ ಸಾಹಸದ ಎದೆಗಾರಿಕೆ ತೋರಿ-ಹಿಂಸಾ ಮಾರ್ಗವನ್ನನುಸರಿಸಿದರೂ ಅಡ್ಡಿ ಇಲ್ಲ. ಭಾರತದ ಮಾನ ಕಾಯಬೇಕೆಂದು ಹೇಳುವೆನು ನಾನು. ಆದರೆ ಹಿಂಸೆಗಿಂತ ಅಹಿಂಸೆಯು ಸಾವಿರ ಪಾಲು ಮೇಲ್ಪಟ್ಟದ್ದು. ದಂಡನೆ [illegible] ಸೌಂದರ್ಯ ಉಳ್ಳದ್ದು."

ಮಾನವನಿರ್ಮಿತ ವಸ್ತುಗಳಲ್ಲಿ ಸೌಂದರ್ಯ [illegible] ಅವರ [illegible] ದುಡಿತದ ಪ್ರತೀಕ.

"ಕೇಡು ಆಡದಿರು, ನೋಡದಿರು, ಕೇಳದಿರು" ಎಂಬುದು ಅವರಿಗೆ ಮಾರ್ಗದರ್ಶಕ [illegible] ಮಂಗಗಳು ಅವರಿಗೆ ಗುರು.

[illegible] ರ ಸುಮಾರು ಗಾಂಧೀಜಿಯವರು ಖಾದೀ ಸಂಚಾರ ಕಾರ್ಯವನ್ನು ಕೈಕೊಂಡಿದ್ದರು. ಆಗ ಖಾದೀ ಕಾರ್ಯಕ್ಕಾಗಿ ಧನ ಸಂಚಯ ಮಾಡುತ್ತಿದ್ದರು. ಆಗ ಅವರು ಈ ಹಣವು ದರಿದ್ರನಾರಾಯಣನಿಗಾಗಿ ಬೇಕೆಂದು ಹೇಳುತ್ತಿದ್ದರು. ಭಗವಂತನ [illegible] ಅವರಿಗೆ ನೇರವಾಗ [illegible].

ಈ [illegible] ಹಿಂದೆ ಬಡತನದ ಹೊಗಳಿಕೆ ಇತ್ತೆಂದು ಕಾಣುತ್ತದೆ. ಬಡವರು ಭಗವಂತನ ಕೃಪಾಪಾತ್ರರು. ಇದು ಧಾರ್ಮಿಕವೃತ್ತಿಯ ದ್ಯೋತಕವೆಂದು ತೋರುತ್ತದೆ. ಈ ವಿಚಾರವನ್ನು ನಾನು ಒಪ್ಪಲಾರದೆ ಹೋದೆ. ನನ್ನ ದೃಷ್ಟಿಯಿಂದ ಬಡತನವು ತಿರಸ್ಕೃತವಾದದು. ಹೋರಾಡಿ ಅದನ್ನು ನಿರ್ಮೂಲಗೊಳಿಸಲು ಯತ್ನಿಸಬೇಕಲ್ಲದೆ ಅದಕ್ಕೆ ಉತ್ತೇಜನ ಕೊಡಬಾರದು. [illegible] ಗೊಡುವ ಸಾಮಾಜಿಕ ವ್ಯವಸ್ಥೆಯ ಬಗ್ಗೆ ನನಗೆ ಅಸಹನೆಯುಂಟಾಯಿತು. ಈ ತರದ ಅಸಹನೆ [illegible] ಇದ್ದ ಪರಿಸ್ಥಿತಿಯನ್ನು ಸಮರ್ಥಿಸಬೇಕಾಗಿ ಬಂತು. ಅವರು ಜಗತ್ತಿನಲ್ಲಿಯ [illegible] ಕೊಂಡಂತಹದು ಜೀವನಾವಶ್ಯಕ ಸಲಕರಣೆಗಳ [illegible] ದೃಷ್ಟಿಯು ಬಾರದು, ಅವರ ದೃಷ್ಟಿಯಿಂದ ಧನಿಕ ದರಿದ್ರರು [illegible] ಉಳಿದಂದೇ ಅವರ ಅಭಿಪ್ರಾಯ. [illegible] ಭಿನ್ನವಾದ ಅಭಿಪ್ರಾಯ [illegible] ಸಂದರ್ಭದಲ್ಲಿ ಗಾಂಧೀಜಿಯವರು ತ್ಯಾಗ [illegible].

ಈ ಕಾಲದಲ್ಲಿ ನಾನು ಗಾಂಧೀಜಿಯವರ ಬಳಿಗೆ [illegible] ಹೋಗುತ್ತಿದ್ದೆ. [illegible] ಗಾಂಧೀಜಿಯವರೊಡನೆ [illegible] ಕಾಲದಲ್ಲಿ ಒಂದಿಲ್ಲೊಂದು [illegible] ಕೊಳ್ಳುತ್ತಿದ್ದೆ [illegible] ಹೋಗುತ್ತಿದ್ದೆವು [illegible]

ದಿಂದ ಒಮ್ಮೆ [illegible]ಕ್ಕಾಗಿ ಮಾಡಿ [illegible]. ಸ್ವಾತಂತ್ರ್ಯ ದೊರೆತ ಮೇಲೆ ಕಾಂಗ್ರೆಸು ತಂತಾನೆ ನಿವೃತ್ತಿಯಾಗುವದೆಂದು ಕಲ್ಪಿಸಿದ್ದೆ. ಇಂದು ಕರಾರಿನ ಮೇಲೆ ಕಾಂಗ್ರೆಸು ಮುಂದುವರಿಯಬೇಕೆಂದು ಗಾಂಧೀಜಿಯ ವಿಚಾರ. ಕಾಂಗ್ರೆಸಿನ ಸದಸ್ಯರು ಸಂಬಳದ ಮೇಲೆ ಸರ್ಕಾರಿ ಕೆಲಸವನ್ನು ಹಿಡಿಯಬಾರದು. ಯಾರಿಗಾದರೂ ಅಂತಹ ಸ್ಥಾನದ ಆಸೆಯಿದ್ದರೆ ಅವರು ಕಾಂಗ್ರೆಸನ್ನು ಬಿಟ್ಟು ಹೋಗಬೇಕು.

ಗಾಂಧೀಜಿಯ ಪ್ರಜಾಸತ್ತೆ

ಗಾಂಧೀಜಿಯವರು ವಿಚಾರಿಸಿದ ಪ್ರಜಾಸತ್ತೆಯು ಮಾದರಿಯ ಸಂಖ್ಯೆ, ಬಲ-ಸಂಖ್ಯೆ, ಪ್ರಾತಿನಿಧ್ಯ ಇವುಗಳ ಮೇಲೆ ಅವಲಂಬಿಸಿದ್ದಿಲ್ಲ. ಅದು ಸೇವೆ. ಸೇವೆ-ಸ್ವಾರ್ಥತ್ಯಾಗದ ಮೇಲೆ ನಿಂತುದಾಗಿತ್ತು. ಅದರ ಬಲ ನೈತಿಕ ಬಲ. ತಾವು "ಹುಟ್ಟಾ ಪ್ರಜಾಸತ್ತಾವಾದಿ" ಎಂದು ಹೇಳಿಕೊಳ್ಳುತ್ತಿದ್ದರು. ಮಾನವಕೋಟಿಯಲ್ಲಿ ತೀರಬಡವನೊಡನೆ ಸಮರಸವಾಗಿ ನಿಲ್ಲಲು ಸಾಧ್ಯವಾದರೆ ನಿಜವಾದ ಪ್ರಜಾಸತ್ತಾವಾದಿಯಾಗಲು ಸಾಧ್ಯ ಎಂದೆನ್ನುತ್ತಿದ್ದರು. ಪಶ್ಚಿಮದ ಪ್ರಜಾಸತ್ತೆಯು ಪರೀಕ್ಷಾವಸ್ಥೆಯಲ್ಲಿದೆ. ಅದು ಇದುವರೆಗೂ ಕುಸಿದು ಬಿದ್ದಿಲ್ಲವೆಂದು ತಿಳಿದರೆ ನಿಜವಾದ ಪ್ರಜಾಸತ್ತೆಯ ಶಾಸ್ತ್ರವನ್ನು ರೂಪುಗೊಳಿಸಿ ಯಶಸ್ವಿಯಾಗಿ ನಡಿಸಿ ತೋರುವ ಭಾಗ್ಯ ಭಾರತಕ್ಕೆ ಮೀಸಲಾಗಿರಲಿ.

ಬಹುಮತವು ಪ್ರಜಾಸತ್ತೆಯ ದ್ಯೋತಕವಾಗಬಾರದು. ಯಾರ ಪ್ರತಿನಿಧಿಗಳೆಂದು ತಾವು ಹೇಳಿಕೊಳ್ಳುವರೋ ಅಂತಹರ ಆಸೆ—ಆಕಾಂಕ್ಷೆಗಳ ತತ್ವಗಳ ನಿಜವಾದ ಪ್ರತಿನಿಧಿಗಳೆಂದು ಕೆಲವೆ ಜನರು ಇರುವುದು ಕೂಡ ನಿಜವಾದ ಪ್ರಜಾಸತ್ತೆಯ ತತ್ವದ ವಿರೋಧವಲ್ಲ. [illegible] ಪದ್ಧತಿಗಳಿಂದ ಪ್ರಜಾಸತ್ತೆಯು ವಿಕಾಸವಾಗುವದಿಲ್ಲವೆಂದು ನನ್ನ ಮತ. ಪ್ರಜಾಸತ್ತೆಯ ತತ್ವವು ಹೊರಗಿನಿಂದ ಬರುವುದಿಲ್ಲ. ಅದು ಒಳಗಿನಿಂದ ಅಂಕುರಿಸಬೇಕು.

ನನ್ನ ಬಗ್ಗೆ ವೈಯಕ್ತಿಕವಾಗಿ ಗಾಂಧೀಜಿ ಬಹಳಮಟ್ಟಿಗೆ ಯಾವಾಗಲೂ ಅಂತಃಕರಣ ತೋರಿಸುತ್ತಿದ್ದರು. ನನ್ನ ತಂದೆಯ ಮರಣದ ನಂತರ ಅವರು ಇನ್ನಿಷ್ಟು ಸಮೀಪದವರಾದರು. ನನಗೆ ಹೇಳಬೇಕಾದುದನ್ನು ಯಾವಾಗಲೂ ತಾಳ್ಮೆಯಿಂದ ಕೇಳಿಕೊಳ್ಳುತ್ತಿದ್ದರು. ಈ ಪರಿಸ್ಥಿತಿಯ ಕಾರಣದಿಂದ ನಾನು ಮತ್ತು ನನ್ನ ಸಹಕಾರ್ಯಕರ್ತರು ಕೂಡಿ ಸಮಾಜವಾದೀ ವಿಚಾರದ ಕಡೆಗೆ ಗಾಂಧೀಜಿಯವರನ್ನು ಎಳೆದು ಅವರ ಮೇಲೆ ಪ್ರಭಾವ ಬೀರಬಹುದೆಂದು ತಿಳಿದಿದ್ದೆವು. ಅವರಾದರೂ ಕ್ರಮಶಃ ದಾರಿಕಂಡಂತೆಲ್ಲ ಒಂದೊಂದು ಹೆಜ್ಜೆ ನಡೆಯಲು ಸಿದ್ಧನಿದ್ದೇನೆಂದು ಹೇಳುತ್ತಿದ್ದರು. ನಾವು ಅನುಸರಿಸುವ ಮಾರ್ಗವನ್ನು ಅವರು ಒಪ್ಪಲಿಕ್ಕಿಲ್ಲವಾದರೂ ಗುರಿಯನ್ನು ಒಪ್ಪಿಕೊಳ್ಳಬಹುದಾಗಿತ್ತು ಎಂದು ಆಗಾಗ ತಿಳಿದುಕೊಂಡಿದ್ದೆ. ಆದರೆ ನಂತರ ನನಗೆ ತಿಳಿದು ಬಂದಿದೆ: ಗಾಂಧೀಜಿಯ ಆದರ್ಶಕ್ಕೂ ಸಮಾಜವಾದಿಯ ಆದರ್ಶಕ್ಕೂ ಮೂಲತಃ ಭೇದವಿದೆ-ಎಂದು.

[illegible] ರ ಸುಮಾರು ಗಾಂಧೀಜಿ ಆಮರಣಾಂತ ಉಪವಾಸ ಪ್ರಾರಂಭಿಸಿದ್ದಾರೆಂಬ ಸುದ್ದಿಯು ನಮಗೆ ಜೇಲಿನಲ್ಲಿ ಬಂದು ಮುಟ್ಟಿತು. Communal Award ದ ವಿರುದ್ಧ ಸಾರಿದ ಉಪವಾಸ. ನನ್ನ ಮನಸ್ಸು ಕಳವಳಗೊಳ್ಳತೊಡಗಿತು. ನಾನು ಇನ್ನೊಮ್ಮೆ ಗಾಂಧೀಜಿಯನ್ನು ಕಾಣಲಾರೆ ಎಂದು ತಳಮಳಿಸುತ್ತಿದ್ದೆ. ಆಗಲೇ ಅವರನ್ನು ಕಂಡು ಒಂದು ವರ್ಷದ ಮೇಲಾಗಿತ್ತು. ರಾಜಕೀಯ ಪ್ರಶ್ನೆಗಳ ಪರಿಹಾರಕ್ಕಾಗಿ ಹೀಗೆ ಧಾರ್ಮಿಕ ಭಾವುಕ ಪದ್ಧತಿಯನ್ನು ಅನುಸರಿಸಿದ್ದಕ್ಕಾಗಿ ನನಗೆ ಗಾಂಧೀಜಿಯ ಮೇಲೆ ಸಿಟ್ಟು ಬಂದಿತು. ಈ ಉಪವಾಸದ ದಿನಾಂಕವನು [illegible] ಆವರ [illegible] ನನಗೆ [illegible].

ಈ ಉಪವಾಸದಿಂದ ಒಂದು ವೇಳೆ ಬಾಪು [illegible] ರಾಜಕಾರಣ ನಡೆಯುವುದು ಹೇಗೆ? ನಿರಾಶಾಜನಕವಾದ ವಾತಾವರಣವು ಕಾಣತೊಡಗಿತು. ವಿಚಾರ ಮಾಡಿದಂತೆಲ್ಲ ಹೃದಯ [illegible] ಕೊಳ್ಳತೊಡಗಿತು.

ಸಂಧಿಕಾಲದಲ್ಲಿ ಸರಿಯಾದ ಕಾರ್ಯವನ್ನು [illegible] ಮಾಡುವ ಶಕ್ತಿ ನಮ್ಮ ದೃಷ್ಟಿಯಿಂದ [illegible] ಮನಾಗುತ್ತಿತ್ತು. ಬಾಪು ತೀರಿದರೂ ನಮ್ಮ ಹೋರಾಟವು ನಡೆಯಬೇಕಾಗಿದ್ದಿತು. ಏನೆ ಆದರೂ ಪರಿಸ್ಥಿತಿಯನ್ನೆದುರಿಸುವ ಸ್ಥಿತಿಯಲ್ಲಿರಬೇಕಾಗಿತ್ತು. ಬಂದುದನ್ನೆಲ್ಲ ಬಾಪುವಿನ ಮರಣಕೂಡ ಎದುರಿಸುವ ನಿರ್ಧಾರ ಮಾಡಿದ ಕೂಡಲೆ, ಒಂದು ಬಗೆಯ ಮನದ ಉದ್ವಿಗ್ನತೆ ಕಡಿಮೆಯಾಗಿ ಬಂದುದು ಬರಲಿ ಎಂದುಕೊಂಡೆ.

ಮುಂದೆ ಒಂದೆರಡು ದಿನಗಳ ನಂತರ ಗಾಂಧೀಜಿಯ ಕಡೆಯಿಂದ ತಂತಿ ಬಂದಿತು: "ಸಂಕಟಮಯವಾದ ಈ ಎಲ್ಲ ದಿನಗಳಲ್ಲಿ ನೀನು ನನ್ನ ಮುಂದೆಯೇ ಇರುತ್ತಿದ್ದಿ. ನಿನ್ನ ಅಭಿಪ್ರಾಯವನ್ನು ತಿಳಿಯಲು ಆತುರನಾಗಿರುವೆ. ನಿನ್ನ ಅಭಿಪ್ರಾಯಕ್ಕೆ ನಾನು ಎಷ್ಟು ಬೆಲೆ ಕೊಡುವೆನೆಂಬುದು ನಿನಗೆ ಗೊತ್ತಿದೆ-ಬಾಪು" ಅದಕ್ಕೆ ಉತ್ತರವಾಗಿ ನಾನು ತಂತಿಯನ್ನು ಕಳಿಸಿದೆ: "ಉಪವಾಸದ ನಿರ್ಧಾರದ ಸುದ್ದಿ ಕೇಳಿ ದುಃಖಪ್ರದವಾದ ಮನೋವೇದನೆಯಾಯಿತು. ಕೊನೆಗೆ ಸಮಾಧಾನ ಮಾಡಿಕೊಂಡೆ. ಹತ್ತಿಕ್ಕಲ್ಪಟ್ಟ ವರ್ಗದವರಿಗಾಗಿ ಎಂತಹ ತ್ಯಾಗವೂ ಬಹಳ ದೊಡ್ಡದಲ್ಲ... ಧಾರ್ಮಿಕ ದೃಷ್ಟಿಕೋನದಿಂದ ಅಳೆಯಲು ಅಸಮರ್ಥನಾಗಿದ್ದೇನೆ. ಮಾಂತ್ರಿಕನಿಗೆ ಮಂತ್ರ ಹೇಳಲು ನನಗೆ ಸಾಧ್ಯವೆ..."

ಅದ್ಭುತ ಮನುಷ್ಯ

ಗಾಂಧೀಜಿ ಎಂತಹ ಅದ್ಭುತ ಮನುಷ್ಯ. ಅವರ ಮಾತು, ಬರೆಹ ಅವುಗಳ ಹಿಂದೆ ಹುದುಗಿದ ಅದ್ಭುತವ್ಯಕ್ತಿಯನ್ನು ಅರುಹದಿರಲಾರವು ಅವುಗಳಿಂದ ಉತ್ಪನ್ನವಾಗುವ ಅವರ ವ್ಯಕ್ತಿತ್ವದ ಚಿತ್ರಕ್ಕಿಂತಲೂ ಅವರ ವ್ಯಕ್ತಿತ್ವ ಘನತೆಯುಳ್ಳದ್ದು. ಇಷ್ಟು ದಿನಗಳ ವರೆಗೆ ನಾನು ಗಾಂಧೀಜಿಯವರ ಸಮೀಪದ ಸಹವಾಸದಲ್ಲಿದ್ದಾಗ್ಯೂ ಗಾಂಧೀಜಿಯವರ ಗುರಿಯಾವುದೆಂಬುದು ನನಗೆ ಸ್ಪಷ್ಟವಾಗಿಲ್ಲ. ಅವರ ಸ್ವಂತಕ್ಕಾದರೂ ಸ್ಪಷ್ಟವಾಗಿದೆಯೋ ತಿಳಿಯೆ. "ಒಂದು ಹೆಜ್ಜೆ ಸಾಕು" ಎಂದು ಯಾವಾಗಲೂ ಹೇಳುತ್ತಿದ್ದರು ನನಗೆ. ಭವಿಷ್ಯದ ಒಡಲಿನಲ್ಲಿ ಏನಿದೆ ಎಂದು ಇಣಿಕಿ ನೋಡುವ ಕುತೂಹಲ ಅವರದಲ್ಲ. ಸಾಧ್ಯದ ಬಗ್ಗೆ ಸ್ಪಷ್ಟವಿದ್ದರಾಯಿತು. ಸಾಧ್ಯವು ತನ್ನ ದಾರಿ ತಾನೇ ಕಂಡುಕೊಳ್ಳುವುದು, ಎಂದು ಹೇಳುತ್ತಿದ್ದರು. ಇದೇನು ರಾಜಕಾರಣ ಮಾರ್ಗವಲ್ಲ. ಶಾಸ್ತ್ರೀಯ ಮಾರ್ಗವೂ ಅಲ್ಲ. ಚಾರಿತ್ರ್ಯದ ಬಗ್ಗೆ ಬಹು ಮಹತ್ವಕೊಡುತ್ತಿದ್ದರು. ಬೌದ್ಧಿಕ ಶಿಕ್ಷಣ ಸಿದ್ಧತೆಯ ಬಗ್ಗೆ ಅಷ್ಟು ಮಹತ್ವಕೊಡುತ್ತಿದ್ದಿಲ್ಲ. ಬುದ್ಧಿ ಇಲ್ಲದೆ ಹೋದರೆ ಬರಿಯ ಚಾರಿತ್ರ್ಯದಿಂದೇನಾಗುವುದು? ಚಾರಿತ್ರ್ಯದ ಬೆಳೆಗೆ ಆಗುವದು ಹೇಗೆ?

ಆಗಾಗ ನಾನು ಕಲ್ಪಿಸಿದ ಹಾಗೆ, ಕಣ್ಣಿಗೆ ಕಂಡಹಾಗೆ ಗಾಂಧೀಜಿ ತಮ್ಮ ಗುರಿಯ ಬಗ್ಗೆ ಅಸ್ಪಷ್ಟವಿರುತ್ತಿದ್ದಿಲ್ಲ. ಆಧುನಿಕ ವಿಚಾರಗಳಿಗೆ ಹೊಂದಿಕೆಯಾಗಿರುತ್ತಿದ್ದಿಲ್ಲ ಆದುದರಿಂದ ನಮಗೆ ಅವರ ಗುರಿಯ ಬಗ್ಗೆ ಅಸ್ಪಷ್ಟತೆಯ ಆಭಾಸವಾಗುತ್ತಿತ್ತು. "ಈಗ ೫೦ ವರುಷಗಳಿಂದ ಕಲಿತುದನ್ನುಮರೆಯುವದರಲ್ಲಿ ಭಾರತದ ಮುಕ್ತಿಯಿದೆ" ಎಂದು ಅನ್ನುತ್ತಿದ್ದರು.

ಗಾಂಧೀಜಿ ಯಾವಾಗಲೂ ವೈಯಕ್ತಿಕ ಮುಕ್ತಿ-ವ್ಯಕ್ತಿಗತ ಪಾಪಗಳ ಬಗ್ಗೆ ವಿಚಾರಿಸುತ್ತಿದ್ದರು. ನಾವಾದರೆ ಸಾಮಾಜಿಕ ಕಲ್ಯಾಣವನ್ನು ಕಣ್ಮುಂದಿಟ್ಟುಕೊಂಡವರು. ಈ ಪಾಪದ ಕಲ್ಪನೆಯು ನನಗೆ ಅರ್ಥವಾಗದು. ಇದಕ್ಕಾಗಿಯೇ ಇರಬಹುದು, ಗಾಂಧೀಜಿಯ ಸಾಮಾನ್ಯ ದೃಷ್ಟಿ ಅರ್ಥವಾಗದೆ ಅವರು ಸಾಮಾಜಿಕ-ಬದಲಾವಣೆ, ಸಾಮಾಜಿಕ ರಚನೆಯನ್ನು ಬದಲಿಸುವ ಗೋಜಿಗೆ ಹೋಗುವದಿಲ್ಲ ವ್ಯಕ್ತಿಗಳಲ್ಲಿಯ ಪಾಪದ ನಿರ್ಮೂಲನ ಮಾಡುವದರಲ್ಲಿ ಅವರಿಗೆ ಆಸಕ್ತಿ.

ಅರಾಜಕವಾದಿ

ಗಾಂಧೀಜಿಯವರನ್ನು ಪ್ರತ್ಯಕ್ಷ ನೋಡದವರು ಬರಿಯ ಅವರ, ಬರೆಹಗಳನ್ನು ಓದಿದವರು ಅವರನ್ನು ಧಾರ್ಮಿಕ ಆಚಾರ್ಯರ ಮಾದರಿಯಲ್ಲಿ ಗಣಿಸಬಹುದು. ಹಾಗಾದರೆ ಅವರ ಬರೆಹಗಳು ಅವರಿಗೆ ಅನ್ಯಾಯ ಮಾಡುವವು. [illegible]ರಿಗಿಂತಲೂ ಅವರು ಹೆಚ್ಚು ದೊಡ್ಡವರಾಗಿದ್ದರು. ಅವರೊಂದು ಗೂಢ, ಸಮಸ್ಯೆ. ಬಡತನದ ನಿಕೃಷ್ಟಸ್ಥಿತಿಯಲ್ಲಿದ್ದವರಿಗಾಗಿ ಅಂತಃಕರಣ ಪ್ರೀತಿ ತೋರುವ ಇವರು ಬಡವರನ್ನು ಬಡತನದಲ್ಲಿಯೇ ಇಡುವಂತಹ ಸಮಾಜ ವ್ಯವಸ್ಥೆಯನ್ನು ಅದೇಕೆ ಎತ್ತಿಹಿಡಿ[illegible], ಇದು ತಿಳಿಯದು. ಈ ವ್ಯವಸ್ಥೆಯನ್ನು ಎತ್ತಿಹಿಡಿಯುವರೆಂದು ಹೇಳುವುದು [illegible]. ಅವರು ತಾತ್ವಿಕ ಅರಾಜಕವಾದಿ, ಅವರ ಅಂತಹ [illegible] ಉತ್ಪನ್ನವಾಗಬೇಕಾದರೆ ಇನ್ನೂ ಬಹುಕಾಲ ಬೇಕು. ಅದಕ್ಕಾಗಿ ಇದ್ದುದು ಇರಲೆಂದು ಅನ್ನುತ್ತಿರಬಹುದು. ಸಮಾಜವಾದ, ಸಂಘವಾದ ಇವುಗಳನ್ನು ಹಿಂಸಾ ಪ್ರವೃತ್ತಿಯ ಮೂಲಕ ಅವರು ಒಪ್ಪಲಿಲ್ಲ. ಜನತೆಯ ಜೀವನ ಮಟ್ಟವನ್ನು ಒಂದು ಕಾರ್ಯದಕ್ಷತೆಯ [illegible] ಏರಿಸಲು ಎಂದೂ ಬಯಸುವದಿಲ್ಲ. ಏಕೆಂದರೆ ಉಚ್ಚ ಜೀವನ ಮಟ್ಟ ಮತ್ತು ಹೆಚ್ಚು ವಿರಾಮಕಾಲ ಇವು ಭೋಗ ಪಾಪಗಳನ್ನು ಹೆಚ್ಚಿಸಬಹುದೆಂದು. ಈಗಿದ್ದ ಕೆಲ ಸಿರಿವಂತರು ಭೋಗಾಸಕ್ತರಾಗುವದು ಸಾಕಾಗಿದೆ. ಅಂತಹರ ಸಂಖ್ಯೆ ಬೆಳೆದರೆ ಹಾನಿಯೆ ಆದೀತು.

ಹೀಗೆ ಗಾಂಧೀಜಿಯ ವಿಚಾರಗಳು ಇರಬಹುದೆಂದ. ಹೇಳುವದು ಒಂದು ಬಗೆಯಿಂದ ತಪ್ಪಾಗಬಹುದು. ಆದರೆ ಅವರು ಹೀಗೆ ವಿಚಾರ ಮಾಡುತ್ತಿರಬಹುದೆಂದು ನನಗೆ ಅನ್ನಿಸುತ್ತದೆ. ದಿನ ದಿನಕ್ಕೆ ಹೆಚ್ಚಾಗುವ ವಿರಾಮ, ಸುಖ ಇವುಗಳನ್ನು ಆದರ್ಶಮಾಡಿಕೊಳ್ಳಬಾರದೆಂದು ಅವರಿಗೆ ಅನ್ನಿಸುತ್ತಿತ್ತು. ಜನತೆಯ ಸೇವೆ ಮಾಡಬೇಕೆನ್ನುವವರು ಜನತೆಯ ಭೌತಿಕ ಮಟ್ಟವನ್ನೇರಿಸಲು ಪ್ರಯತ್ನಿಸದೆ ತಾವು ಜನತೆಯ ಮಟ್ಟಕ್ಕಿಳಿದು ಸಮಭಾವದಿಂದ ನಡೆದುಕೊಂಡರೆ ಜನತೆಯ ಜೀವನ ಮಟ್ಟ ತಾನಾಗಿಯೇ ತುಸು ಏರುವದು. ಇದು ಅವರ ದೃಷ್ಟಿಯಿಂದ ನಿಜವಾದ ಪ್ರಜಾಸತ್ತೆ.

ಯುದ್ಧವು ಭಾರತದ ಬಾಗಿಲಿಗೆ ಬಂದುದು ಗಾಂಧೀಜಿಯವರನ್ನು ಉದ್ವಿಗ್ನ ಮಾಡಿತು! ಈ ಹೊಸ ವಾತಾವರಣದಲ್ಲಿ ಅವರ ಅಹಿಂಸೆಯ ಧೋರಣ ಕಾರ್ಯಕ್ರಮಗಳನ್ನು ಹೊಂದಿಸುವದು ಸುಲಭವಾಗಲಿಲ್ಲ. ಅವರ ಸಹಕಾರ್ಯಕರ್ತರು ಸಾಧಾರಣವಾಗಿ ಕಾಂಗ್ರೆಸಂ ಅಹಿಂಸೆಯನ್ನು ಇಂತಹ ಸಂದರ್ಭಗಳಿಗಾಗಿ ಮೂರೀಕರಿಸಿದ್ದರು. ಕೊನೆಗೆ ಆಕ್ರಮಣಶೀಲ ಪ್ರವೃತ್ತಿಯನ್ನು ತಡೆಯುವುದಕ್ಕಾಗಿ ಅಹಿಂಸೆಯನ್ನು ಬಿಡಬಹುದೆಂಬುದಕ್ಕೆ ಒಪ್ಪಿದರು. ಆದರೂ ಅವರ ಉದ್ವಿಗ್ನತೆಯು ಕಡಿಮೆಯಾಗಲಿಲ್ಲ. ಮತ್ತು ವೈಯಕ್ತಿಕವಾಗಿ ತಾವು ಹಿಂಸಾ ಕಾರ್ಯಕ್ರಮದಲ್ಲಿ ಭಾಗಿಯಾಗಿರಲಿಲ್ಲ:

"ಗಾಂಧೀಜಿ ಅನೇಕ ತಪ್ಪುಗಳನ್ನು ಮಾಡಿದರೂ ಅವರ ವ್ಯವಹಾರರಚನೆ ಸರಿಯಾಗಿಯೆ ಇರುತ್ತಿತ್ತು. ಬಹು ಜನರು ನಾಳಿನ ವಿಚಾರ ಮಾಡಿದರೆ ಸದ್ಯದ ತೊಡಕನ್ನು ಬಗೆಹರಿಸಿದರೆ ಸಾಕೆಂದು ಅದಕ್ಕಾಗಿ ಯಾವುದೆ ಮಾರ್ಗ ಅನುಸರಿಸಿದರೂ ಅಡ್ಡಿಯಿಲ್ಲ ಎಂಬವರಾಗಿದ್ದಾರೆ" ಎಂದು ಬರ್ನಾರ್ಡ ಶಾ ಅಂದಿದ್ದಾರೆ.

ಭಾರತದ ಮನಸ್ಸಿನಲ್ಲಿ ಈ ಬಗೆಯ ಹೋರಾಟ ನಡೆದಾಗ, ನಿರಾಶೆಯು ಹೆಚ್ಚುತ್ತಿರುವಾಗ, ಗಾಧೀಜಿ ಕೆಲ ಲೇಖನಗಳನ್ನು ಬರೆದರು. ಅವುಗಳಲ್ಲಿ ಜನತೆಯ ಮನದಲ್ಲಿ ಮೂಡಿದ ಅಸ್ಪಷ್ಟ ಭಾವನೆಗಳಿಗೆ ಮೂರ್ತಸ್ವರೂಪ ಕೊಟ್ಟರು. ಅವರ ಬರೆಹಗಳಲ್ಲೆಲ್ಲ ಹೊಸ ಆವೇಶ, ಹೊಸ ಭಾವ, ಹೊಸ ಉತ್ಸುಕತೆ ಇರುತ್ತಿದ್ದವು. ಭಾರತದ ಸ್ವಾತಂತ್ರ್ಯದ ಬಗ್ಗೆ ಅವರಿಗೆ ಅತೀವ ತೀವ್ರವಾದ ಬಯಕೆ ಇದ್ದರೂ ಭಾರತವೆಂದರೆ ಅದು ಮಾತೃಭೂಮಿಗಿಂತ ತುಸು ಹೆಚ್ಚಾದುದೆಂಬ ಭಾವನೆಯಿತ್ತು. ಅದು ಜಗತ್ತಿನಲ್ಲಿಯ ಹತ್ತಿಕ್ಕಲ್ಪಟ್ಟ ಜನತೆಯ ಪ್ರತೀಕವಾಗಿತ್ತು.

ಭಾರತದಲ್ಲಿಯ ಔದಾಸೀನ್ಯದ ಬದಲು ವಿರೋಧ ಭಾವ ವ್ಯಕ್ತ ಮಾಡುವ ತತ್ವ ಹುಟ್ಟಿಸುವದು ಎಷ್ಟೋ ಪಾಲು ಮೇಲು. ಯಾವುದೇ ಕ್ಷೇತ್ರದಲ್ಲಿ ಗುಲಾಮ ಪ್ರವೃತ್ತಿ ಕಾಲಿಡಲಾಗದು. ಅದು ಒಂದರಿಂದ ಮತ್ತೊಂದರಲ್ಲಿ ಕಂಡು ಬಂದು ಒಟ್ಟಾರೆ ಅವನತಿ ತರುವುದು.

ಗಾಂಧೀಜಿಗೆ ವಯಸ್ಸಾಗುತ್ತ ನಡೆಯಿತು. ೭೦ ವರ್ಷಗಳು ಮೀರಿದವು. ಅವ್ಯಾಹತವಾಗಿ ಕಾರ್ಯ ಮಾಡಿದುದರ ಪರಿಣಾಮವಾಗಿ ದೇಹವು ದುರ್ಬಲವಾಗತೊಡಗಿತು. ಆದರೂ ಮಾನಸಿಕ, ಆತ್ಮಿಕ ಬಲವು ಅತ್ಯಧಿಕವಾಗಿತ್ತು.

೧೯೪೨ ರಲ್ಲಿ

೧೯೪೨ ರಲ್ಲಿ ನಾವಿನ್ನೂ ಹಿಂದು ಮುಂದೆ ನೋಡುತ್ತ ಇರುವಾಗ ದೇಶದ ಮಾನಸಿಕ ಸ್ಥಿತಿಯಲ್ಲಿ ಬದಲು ಬಂದಿತು. ಔದಾಸೀನ್ಯವನ್ನು ಕೊಡುವಿ ಎದ್ದಿತು. ಒಂದು ಬಗೆಯ ಉನ್ಮಾದವೇ ಆದಂತಾಯಿತು. ತಾಳ ತರ್ಕಗಳು ಹಾರಿ ಹೋದುವು. ಪರಿಣಾಮದ ಪರಿವೆಯಿಲ್ಲದೆ ಭಾವಾವೇಶದಿಂದ ಕಾರ್ಯ ಮಾಡತೊಡಗಿತು, ಜನತೆ. ಹೀಗಾಗಿ ಗಾಂಧೀಜಿಯವರಾಗಲೀ, ಕಾಂಗ್ರೆಸ ಕಾರ್ಯಕಾರಿ ಸಮಿತಿಯಾಗಲೀ ಯಾವುದೇ ಬಗೆಯ

— [illegible]ನೆಯ ಪುಟಕ್ಕೆ

"ಬಾಲಕಿಯರ ಲಾಲ್"

ಈ ಚಿತ್ರವು ಗುರುವಾರದ ದಿವಸ ಮುಂಬಯಿಯಲ್ಲಿ ರಜತಪರದೆಯ ಮೇಲೆ ಬರಬೇಕೆಂದು ಗೊತ್ತಾಗಿತ್ತು. ಇಷ್ಟರಲ್ಲಿ ಜಲಪ್ರಳಯವಾಗಿ ಬಹು ಅನಾನುಕೂಲವಾಯಿತು. ಆದಾಗ್ಯೂ ಅಂದೇ ಚಿತ್ರ ಪ್ರದರ್ಶನವೂ ನಡೆಯಿತು. ಜನರು ಕಷ್ಟದಲ್ಲಿ ಸಿಕ್ಕಿದ್ದರೂ ಪರಿಗಣಿಸದೆ, ನಿಶ್ಚಿಂತಲೂ ಜಿಕ್ಕು ಹೆಚ್ಚಾಗಿ ಗುಂಪಿನಲ್ಲಿ ಬಂದರು.

ಚಿತ್ರ ದಿಗ್ದರ್ಶನ ಶ್ರೀ ಅಮಿಯ ಚಕ್ರವರ್ತಿಯವರದು; ಪ್ರದೀಪರ ಭಾವಗೀತ ಶ್ರೀ ಜೆ. ಎಸ್. ಕಶ್ಯಪರ ಸಂಭಾಷಣ ಶ್ರೀಯುತರಾದ ಸಿ. ರಾಮಚಂದ್ರ ಮತ್ತು ಅನಿಲ್ ವಿಶ್ವಾಸರ ಸಂಗೀತ.

ಗೀತಾಬಲಿ, ಸೋಹನ್ ಮತ್ತು ಶಶಿಕಲ ಇವರು ಜಗನ್ನಾಥ ಮಂಗಲ, ಕೃಷ್ಣ ಮತ್ತು ಇತರರೊಡನೆ ಪಾತ್ರವಹಿಸಿದ್ದಾರೆ.

ಒಟ್ಟಿನಲ್ಲಿ ಕಥೆಯೇನು ಎಂಬುದು ಇನ್ನೂ ತಿಳಿದುಬಂದಿಲ್ಲ.

× × ×

ಪ್ರಕಾಶರ "ಸಾವನ್ ಭಾದೂ"

ಮುಂಬಯಿಯ ಲೈಮಿಂಗ್‌ಟನ್ ಚಿತ್ರ ಮಂದಿರದಲ್ಲಿ ಈ ಚಿತ್ರವು ನಡೆದಿದೆ.

ಮುನ್ವರ್ ಸುಲ್ತಾನಳು ಮುಖ್ಯ ನಾಯಿಕೆಯಾಗಿದ್ದಾಳೆ. ಓಂ ಪ್ರಕಾಶ್, ರಣಧೀರ್, ಮತ್ತು ಇತರರೂ ಇವಳ ಸಂಗಡ ಪಾತ್ರವಹಿಸಿದ್ದಾರೆ.

ಶ್ರೀ ರವೀಂದ್ರದೇವರ ದಿಗ್ದರ್ಶನ ನಿಷ್ಣಾತರಾದ ಶ್ರೀ ಹಸ್ನಲಾಲ್ ಮತ್ತು ಭಗತ್ ರಾಮರ ಸಂಗೀತ ದಿಗ್ದರ್ಶನ.

ಈ ಚಿತ್ರವು ಶ್ರೀ ಮುಲ್ಕ್‌ರಾಜ ಭಕ್ರಿಯವರಿಂದ ಬರೆಯಲ್ಪಟ್ಟ ಕತೆಯ ಮೇಲೆ ತಯಾರಾಗಿದೆ. ಹೆಂಗಸಿನ ಕಷ್ಟಕಾರ್ಪಣ್ಯದ ಜೀವನ ಚಿತ್ರಣವೇ ಕಥೆಯ ತಿರುಳಾಗಿದೆ. ಇದೇ ಇದೀ ಚಿತ್ರದ ಕತೆ.

× × ×

ವಾಡಿಯಾರವರ ಸಂಗೀತಮಯ ಚಿತ್ರ "ಬಾಲಮ್"

ಮಿನರ್ವ ಮತ್ತು ಎಕ್ಸೆಲ್ಸಿಯರ್‌ಗಳಲ್ಲಿ ನಡೆಯುತ್ತಿರುವ ಚಿತ್ರವಿದು "ಕೈ ಕೆಸರಾಗದೆ ಬಾಯಿ ಮೊಸರಾಗುವುದಿಲ್ಲ" ವೆಂಬುದೇ ಒಟ್ಟು ಕಥೆಯ ನೀತಿ.

ಜನಪ್ರಿಯಳಾಗಿರುವ ಸುರೈಯ್ಯಾ ಪ್ರಧಾನ ಪಾತ್ರವನ್ನು ವಹಿಸಿದ್ದಾಳೆ. ವಸ್ತಿ, ಜಯಂತರು ಮುಖ್ಯ ಪಾತ್ರವನ್ನು ತಳೆದಿದ್ದಾರೆ.

× × ×

"ಸ್ನೇಕ್ ಪಿಟ್"

ಈ ಚಿತ್ರವು ಟ್ವೆಂಟಿಯೆತ್ ಸೆಂಚುರಿ ಫಾಕ್ಸ್ ಪಿಕ್ಚರ್ಸ್‌ರವರ ತಯಾರಿಕೆ. ಬಹುಸುಂದರವಾದ ಚಿತ್ರ ಒಂದು ಸಾರಿ ನೋಡಿದರೆ ಸಾಕು, ಮನಸ್ಸಿನಲ್ಲಿ ಅಚ್ಚೊತ್ತಿಯದಂತೆ ನಿಲ್ಲುವಂತಹ ಶಕ್ತಿ ಇದೆ ಈ ಚಿತ್ರವು ಅಪೂರ್ವ ತಯಾರಿಕೆ.

ಹುಚ್ಚಾಸ್ಪತ್ರೆಯಲ್ಲಿಯ ಜೀವನವನ್ನು ಚಿತ್ರಿಸುವಾಗ, ತೋರಿಸಿರುವ ಕಲಾನೈಪುಣ್ಯವನ್ನು ಎಷ್ಟು ಹೊಗಳಿದರೂ ಸಾಲದು. ಇಲ್ಲಿ ದಿಗ್ದರ್ಶನವು ಬಹು ಯಶಸ್ವಿಯಾಗಿದೆ. ಚಿತ್ರಣ ರೀತಿ ಬಹು ಸಹಜ ಸುಂದರವಿದೆ. ಅಂತೇ ವಾಸ್ತವವಿದೆ.

ಒಲಿವಿಯಾ-ಡಿ-ಹಾವಿಲ್ಲಾಂಡ್, ಹೆಂಡತಿಯ ಮತ್ತು ಲಿಯೋಗೆನ್ಸ್, ಗಂಡನ ಪಾತ್ರವನ್ನು ವಹಿಸಿದ್ದಾರೆ.

ಒಲಿವಿಯಳ ಒಳತೋಟಿಯನ್ನು, ಮನಸ್ಸನ್ನು ಸೆಳೆಯುವಷ್ಟು ಅಗಾಧ ರೀತಿಯಲ್ಲಿ ಚಿತ್ರಿಸಿರುವುದನ್ನು, ಯೋಚಿಸಿ ನೋಡಿದರೆ, [illegible] ಚಿತ್ರವು ಇನ್ನೆಷ್ಟು ಕಾಲಕ್ಕೋ [illegible]

— [illegible]

"ಗುಟ್ಟು ರಟ್ಟಾಯಿತು"

[illegible] "ಅಲ್ಲಿಗೆ ಹೋಗಲು, ಬಿಡು ಅವರ [illegible] ಜೀವನದಲ್ಲಿ [illegible] ಯಲ್ಲಿ ಸಂಬಂಧಪಟ್ಟು ಬೆಳಸಿದ್ದ [illegible] ಜೀವನ [illegible] ಸಂಬಂಧವನ್ನು ಈಗ [illegible] "ಶ್ರೀಮತಿ ರ್ಯಾಡ್ ಬ್ಲಾಕ್‌ನನ್ನು ಮದುವೆಯಾಗಿದ್ದೇನೆ" ಎಂದು ಘಂಟಾಘೋಷವಾಗಿ ಪ್ರಕಟಿಸಿದಳು. ಅಂತು ಗುಟ್ಟು ರಟ್ಟಾಯಿತು.

^ ^ ^

ಭಾರತೀಯ ಚಿತ್ರರಂಗದಲ್ಲಿ ಅತ್ಯಂತ ಜನಪ್ರಿಯನೆನಿಸಿರುವ ಸುಂದರ ತಾರೆ ದಿಲೀಪ್ ಕುಮಾರ್! ಫಿಲ್ಮಿಸ್ತಾನದ "ಶಬ್ನಮ್" ನಲ್ಲಿ ಇವನ ಸುಕುಮಾರ ನಟನೆ ಮುಂಬಯಿಯ "ರಾಕ್ಸಿ" ಯಲ್ಲಿ ಪ್ರದರ್ಶಿಸಲ್ಪಟ್ಟಿದೆ.

ಪ್ರಸಿದ್ಧ ಹಾಲಿವುಡ್ಡಿನ ತಾರೆ ಜೀನ್ ಆರ್ಥರ್, ೧೭ ವರುಷ, ಸರ್ ಚಿತ್ರನಿರ್ಮಾಪಕ ಫ್ರಾಂಕ್ ರಾಸ್‌ನೊಡನೆ, ದಾಂಪತ್ಯಜೀವನ ನಡೆಸಿ, ಈಗ ವಿವಾಹ ವಿಚ್ಛೇದನಕ್ಕೆ ಇಟ್ಟಿ ಪಟ್ಟು, ಗಂಡನನ್ನು ಬಿಟ್ಟಿದ್ದಾಳೆ. ಇಷ್ಟು ಕಾಲ ಬಾಳನ್ನು ನಡೆಸಿ ಈಗ ಬೇರೆಯಾದರೆ? ಅಯ್ಯೋ ಪಾಪ ಅಂತೂ ಆಯಿತು.

× × ×

"ಅಪ್ನದೇಶ್" ರಾಜಕಮಲ್ ಕಲಾಮಂದಿರದ ತಯಾರಿಕೆ. ಈ ಚಿತ್ರವನ್ನು ಕೆಲವರು ಮನಃಪೂರ್ವಕವಾಗಿ ಹೊಗಳಿದರು; ಕೆಲವರು ಉಗುಳಿದರು; ಮತ್ತೆ ಕೆಲವರು ಅಹಾ! ಅಹಾ!! ಭೇಷ್! ಎಂದರು. ಅಂತೂ ಚಿತ್ರವನ್ನು ಕುರಿತ ಹೊಗಳಿಕೆ ನವರಸೋಪೇತವಾಗಿದ್ದಿತು.

ಸ್ವಲ್ಪ ಕಾಲದ ನಂತರ ಎದ್ದಿತು ಸುಂಟರಗಾಳಿ; ಎಲ್ಲೆಡೆಯಿಂದಲೂ ಖಂಡನೆಯ ಪ್ರಚಂಡ ಮಳೆ ಬಂದಿತು. ಅದರಲ್ಲೂ ಪಂಜಾಬ ಪ್ರಾಂತದವರಿಂದ ಹೆಚ್ಚಾಗಿ ಕಟು ಮಾತುಗಳು ಬಂದವು.

ಆರು ಲಕ್ಷ ಮಂದಿ ನಿರಾಶ್ರಿತರಂತೂ ಇದನ್ನು ಅನಾಚ್ಯ, ಅಪದಗಳಿಂದ ಶ್ರಾವ್ಯವಾಗಿ ಶಪಿಸಿದರು.

ಭಾರತದಲ್ಲಿ ಚಿತ್ರಗಳ ವಿಷಯವನ್ನು ಸರಿಯಾಗಿ ತಿಳಿಸುವ ಮಾಸಪತ್ರಿಕೆಯೊಂದೆಂದರೆ ಅದು "ಫಿಲ್ಮ್ ಇಂಡಿಯಾ" ಎಂಬ ಜನ್ಮನ ಜನಗಳಲ್ಲಿ ಮೂಡಿದೆ. ಅದೇನಾದರೂ ಇರಲಿ, ಸದ್ಯಕ್ಕೆ ಈ "ಫಿಲ್ಮ್ ಇಂಡಿಯಾ"ವು "ಅಪ್ನದೇಶ್" ದ ಬಗ್ಗೆ, "ಭಾರತದ ಮಹಿಳಾ ಲೋಕವನ್ನೇ ಅಪವಾದಕ್ಕೀಡು ಮಾಡಿರುವ ಚಿತ್ರ" ಎಂದು ಕಟುತರ ಟೀಕೆ ಮಾಡಿದೆ.

× × ×

ಸಿನಿಮ ಗೀತಗಳಿಗೆ ಮುಟ್ಟುಗೋಲು

[illegible] ಎಂದಿಗೂ [illegible] [illegible]

ಮೂಲೆ ಮೂಲೆಗಳಿಂದ

ನೆದರ್‌ಲೆಂಡ್ಸ್-ಇಂಡೊನೇಷಿಯಾ

[illegible]

ಸಯಾಂ ಅಥವಾ ಥೈಲೆಂಡಿನ

ಸರಕಾರವು [illegible] [illegible] ಪ್ರವೃತ್ತಿಯು ಕಮ್ಯುನಿಷ್ಟರ ಅತ್ಯಂತ ಭಯವೇ ಕಾರಣವಾಯಿತೆಂದು [illegible] ಹೇಳಿದ್ದಾರೆ.

ಸಂ. ರಾ. ಸಂಘದ ಸಾಲ್ಯ ಸಿಯ ಅಧಿವೇಶನದ ಕಾರ್ಯಕ್ರಮದ ಪಟ್ಟಿಯಲ್ಲಿ ದ. ಆಫ್ರಿಕದ ಹಿಂದೀಯರನ್ನು ಭೇದಬುದ್ಧಿಯಿಂದ ನಡೆಸಿಕೊಂಬ ಧೋರಣೆಯನ್ನು ತಳೆದ ಅಲ್ಲಿಯ ಸರಕಾರದ ವಿರುದ್ಧವಾಗಿ ಭಾರತ ಕೊಟ್ಟ ದೂರು ಉಕ್ತವಾಗಿದೆ. ಸಂಘದ ಸದಸ್ಯ ಎನಿಸಿದ ದ. ಆಫ್ರಿಕವು ಕುಲಭೇದ ನೀತಿಯನ್ನು ಹಿಡಿದದ್ದು ಅದರ ಶಾಸ್ತ್ರಬದ್ಧ ತತ್ವಗಳಿಗೆ ವ್ಯತಿರಿಕ್ತವಾಗಿದೆಯೆಂದು [illegible] ರ ಮೊದಲಿನ ಅಧಿವೇಶನದಿಂದ ಹಿಡಿದು ಇಂದಿನ ತನಕ ಸಾಧಿಸುತ್ತ ಬರಲಾಗಿದೆ.

ಇತ್ತೀಚೆಗೆ ರಶಿಯದಲ್ಲಿ ಅಣುಬಾಂಬಿನ ಸ್ಫೋಟವಾಯಿತೆಂಬ ಸುದ್ದಿಯನ್ನು ಅಧ್ಯಕ್ಷ ಟ್ರೂಮನ್ನರು ಹೊರಪಡಿಸಿದರು. ಲಂಡನ್ನಿನಲ್ಲಿಯೂ ಇದೇ ಸುದ್ದಿಯನ್ನು ಸಾರಲಾಯಿತು ಆದರೆ ಯಾವ ನಿಶ್ಚಿತ ಸ್ಥಳದಲ್ಲಿ ಮತ್ತು ಯಾವಾಗ ಅದು ಸ್ಫೋಟವಾಯಿತೆಂಬುದರ ಬಗ್ಗೆ ವಿವರವಿಲ್ಲ. ಅಧ್ಯಕ್ಷ ಟ್ರೂಮನ್ನರು. ಹೀಗೆ ಸುದ್ದಿಯನ್ನು ಬಹಿರಂಗ ಪಡಿಸಿದ್ದರಿಂದ ಅಮೇರಿಕದ ಸಂರಕ್ಷಣ ವ್ಯವಸ್ಥೆ ಮತ್ತು ಸೈನ್ಯಸಿದ್ಧತೆಗಳ ಬಗ್ಗೆ ಶೀಘ್ರಕ್ರಮವನ್ನು ಕೈಕೊಳ್ಳಲಾದೀತೆಂದು ವಾಷಿಂಗ್‌ಟನ್ನಿನ ಸಮರನೀತಿಜ್ಞರು ಅಭಿಪ್ರಾಯ ಪಡುತ್ತಾರೆ.

ಚೀನೀ ಕಮ್ಯುನಿಸ್ಟರು ಕ್ಯಾಂಗ್‌ಟುಂಗ್ ಗಡಿಯಲ್ಲಿ ನಾನ್ಸಿಯಂಗ್ ಮತ್ತು ಚಿಹಾಂಗ್ ಎಂಬೆರಡು ಪ್ರಮುಖ ನಗರಗಳನ್ನು ವಶಪಡಿಸಿಕೊಂಡರೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆ ಈ ಎರಡೂ ನಗರಗಳು ಕ್ಯಾಂಟನ್ ಹ್ಯಾಂಕೋ ರೇಲ್ವೆಯ ಮೇಲೆಯೂ ದಾಳಿಯನ್ನು ಸುರುಮಾಡಿದ್ದರಿಂದ ಹಾರಿಗೆ ಹಿಡಿತು ಹೋಗಿದೆ.

ಚೀನೀ ಪ್ರಜಾಪ್ರಭುತ್ವದ ಸಂಸ್ಥಾಪಕ ಡಾ. ಸನ್‌ಯತ್ ಸೇನರ ಪತ್ನಿಯೂ ಚಿಯಾಂಗ್ ಕೈಶೇಕರ ಭಗಿನಿಯೂ ಆದ ಸತೀ ಸನ್‌ಯತ್ ಸೇನರು ನೂತನ ಚೀನೀ [illegible] ಸರಕಾರದ ನಾಲ್ವರು ಉಪಾಧ್ಯಕ್ಷರಲ್ಲಿ [illegible] [illegible] ಮಯೋಕ್ಸೇತಂಗರ ಜೊತೆ [illegible] ಬಹುದೆಂದೂ ಹೀಗೆಂದಿನ್ನಿ ಸುದ್ದಿಯಿದೆ.

ಫ್ಲಶಿಂಗ್ ಮೆಡೋಸಿನಲ್ಲಿ ನಡೆಯುತ್ತಿರುವ ಸಂ. ರಾ. ಸಂಘದ [illegible] ರಶಿಯದ ಪ್ರತಿನಿಧಿ [illegible] [illegible]

ಬ್ರಿಟನ್ ಮತ್ತು ಅಮೇರಿಕಗಳು

[illegible]

[illegible] ಸಿಂಗಪುರದಲ್ಲಿ [illegible]

[illegible] ಥಾಯಿಲೆಂಡ್ [illegible]

[illegible] ಆರ್ಮೆಂಟೈನ್ [illegible]

ಸ್ಟರ್ಲಿಂಗ್ ಪ್ರದೇಶಗಳಿಂದ [illegible]

ಸರಕಾರವನ್ನು [illegible] ಹಂಗೇರಿಯ [illegible]

[illegible] ದಿಂಗ್ [illegible]

ಅಮೇರಿಕದ [illegible] ಸೋವಿಯಟ್ ರಶಿಯದ [illegible]

[illegible] ಕೆನೇಡಿಯನ್ [illegible]

ಗ್ರಹಗಳ ಮುನ್ನೋಟ

[ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ,]

[illegible] ಖಡೇಬಜಾರ ಬೆಳಗಾವಿ

ಅಕ್ಟೋಬರ ೩ ರಿಂದ ೯ ರ ವರೆಗೆ

ಮೇಷ

ನಿಮ್ಮ ಮತ್ತು ಮಕ್ಕಳ ಆರೋಗ್ಯ ಸ್ವಲ್ಪ [illegible] ಉತ್ತಮ [illegible] ಯಶಸ್ಸು ಉತ್ತಮ ಆದರೆ [illegible] ಅನುಕೂಲ.

ವೃಷಭ

ನಿಮ್ಮ ಆರೋಗ್ಯದಲ್ಲಿ ಬಹಳ [illegible] ಮಕ್ಕಳಲ್ಲಿ ಒಬ್ಬರ ಉನ್ನತಿಯಾದರೆ [illegible] ಹೆಚ್ಚು [illegible] ಅನುಕೂಲ.

ಮಿಥುನ

[illegible] ಆರೋಗ್ಯ ಉತ್ತಮ. ಆದರೆ ನಿಮ್ಮಲ್ಲಿ ವಾಗ್ವಾದವಾಗಿ ಜನರಲ್ಲಿ [illegible] ಅನುಕೂಲ. ಆದರೆ ಲಾಭ ವಾಗದೇ ಹಾದರೆ ಸಾಕು ಬೇಗಾಗಿ ಹೋಗು ವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ [illegible] ಪ್ರವಾಸಾದಿ ಕೆಲಸ [illegible] ತೊಂದರೆ ಕಡಮೆ. ತಾ. ೩, ೪, ೯ ಅನುಕೂಲ.

ಕರ್ಕ

[illegible]

ಸಿಂಹ

[illegible]

ಸಂಗತಿಗಳು ಸಂಭವಿಸುವುದುಂಟು. ಮಕ್ಕಳ ಉನ್ನತಿ ಬಂಧು ವರ್ಗದವರ ಪ್ರೇಮ ಬಹಳ. ಉದ್ಯೋಗದಲ್ಲಿ ಪ್ರಗತಿ ಬಹಳ ಎನಿಸಿದರೂ ಪ್ರತಿಷ್ಠೆ ಮತ್ತು ಲಾಭ ಕಡಿಮೆ. ಮಿತ್ರ ಸುಖ ಉತ್ತಮ. ವಾದದಲ್ಲಿ ವಿಜಯ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ ಮಖದ ಕೊನೆಯ ೩ ಮತ್ತು ಪೂರ್ವದ ಮೊದಲ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೩, ೪, ೮, ೯ ಅನುಕೂಲ.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಬಹಳ ಅನುಕೂಲ ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಪ್ರಿಯ ಜನರ ಸಹವಾಸ ಅಸ್ತು ಇಲ್ಲವೆ ಮಿತ್ರರಲ್ಲಿ ನಡೆಯುವ ಸಮಾರಂಭಗಳಲ್ಲಿ ನಿಮಗೆ ತಿಳಿಯದೆ ಇಲ್ಲವೆ ಬುದ್ಧಿ ಪೂರ್ವಕವಾಗಿ ನಿಮ್ಮ ಅಪ್ರತಿಷ್ಠೆಯಾಗುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ ಆದರೆ ಲಾಭಕ್ಕಿಂತ ವೆಚ್ಚ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನೀವು ಶತ್ರುಗಳನ್ನು ಆದರೆ ಅವರು ನಿಮ್ಮನ್ನು ಜರ್ಜರಿತ ಮಾಡುವ ಪ್ರತಿಜ್ಞೆ ತೊಡುವರು. ಪ್ರವಾಸಾದಿ ಕೆಲಸ ಉತ್ತಮ. ಉತ್ತರೆಯ ಕೊನೆಯ ಮತ್ತು ಹಸ್ತದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೫, ೬, ೭, ಅನುಕೂಲ.

ತುಲಾ

ಹೆಂಡತಿಗಿಂತ ನಿಮ್ಮ ಮತ್ತು ಮಕ್ಕಳ ಪ್ರಕೃತಿ ಹೆಚ್ಚು ಅನುಕೂಲ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಆದರೆ ವೆಚ್ಚ ವಿಪರೀತ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅತ್ಯಂತ ಕಡಮೆ. ಆದರೆ ಪ್ರತಿಷ್ಠೆ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಬಹಳ. ಆದರೆ ಯಶಸ್ಸು ಸಿಕ್ಕುವ ಖಾತ್ರಿಯೆನಿಸುವದು. ಮಿತ್ರತ್ವದಲ್ಲಿ ವಿರೋಧ. ಸ್ವಾರ್ಥದಲ್ಲಿ ಸಹಾ ನಿಮ್ಮ ಉತ್ಪನ್ನಕ್ಕೆ ಧಕ್ಕೆ ತರುವಂತೆ ಪ್ರಯತ್ನಿಸುವರು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಉತ್ತಮ ಸ್ವಾತಿಯ ಕೊನೆಯ ೩ ಮತ್ತು ವಿಶಾಖದ ಮೊದಲ ೨ ಚರಣಗಳಿಗೆ ತೊಂದರೆ ಹೆಚ್ಚು. ತಾ. ೩, ೪, ೫, ೮ ಅನುಕೂಲ

ವೃಶ್ಚಿಕ

ನಿಮ್ಮ ಪ್ರಕೃತಿ ಉತ್ತಮ. ಹೆಂಡತಿಯದೂ ಅನುಕೂಲ. ಆದರೆ ಪ್ರತಿಯೊಂದರಲ್ಲಿಯೂ ಅವಳು ತೊಂದರೆಯಾಗುವಂತೆ ವರ್ತಿಸುವಳು. ಮಕ್ಕಳಲ್ಲಿ ಕೆಲ ಜನರ ಉನ್ನತಿ ಆದರೆ ಎಲ್ಲರ ವರ್ತನೆ ಮನಸ್ಸಿಗೆ ಬೇಸರವುಂಟುಮಾಡುವಂ ತಹದು. ನೀವು ಸ್ವತಃ ಸಹ ಪ್ರತಿಯೊಬ್ಬರೊ ವಿಪರೀತ ವೆಚ್ಚ ಮಾಡುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಮತ್ತು ಬಹಳ ದಕ್ಷೋಕ್ತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಹಿತಕರ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೫, ೬, ೭ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಅನುಕೂಲ. ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಮನೆಯಲ್ಲಿಯ ಪ್ರತಿಯೊಬ್ಬರು ತಮ್ಮ ಮನಸ್ಸಿಗೆ ಬಂದಂತೆ ವರ್ತಿಸುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಕೆಲವೊಂದು ಧರ್ಮ ಕಾರ್ಯ ಮಾಡುವಲ್ಲಿ ವೆಚ್ಚ. ಆಪ್ತರು ಬೇಕೆಂತಲೆ ಕೆಲ ಅಡಚಣೆಗಳನ್ನು ಉಪಸ್ಥಿತ ಮಾಡುವ ಹೊಂಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸಾದಿ ಕೆಲಸ ಹಿತದ್ದು. ಮೂಲದ ಕೊನೆಯ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೩, ೪, ೮, ೯ ಅನುಕೂಲ.

ಮಕರ

ನಿಮ್ಮ ಮತ್ತು ಹೆಂಡತಿಯ ಆರೋಗ್ಯದಲ್ಲಿ ಸ್ವಲ್ಪ ಕುರಕುರಿ. ಮಕ್ಕಳಿಗೆ ಉನ್ನತಿ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಆದರೆ ವೆಚ್ಚ ವಿಪರೀತ. ಬಂಧು ವರ್ಗದವರೊಡನೆ ಸ್ವಲ್ಪ ತಿಕ್ಕಾಟ. ಕೇವಲ ಈರ್ಷೆಯಿಂದ ಹೆಚ್ಚು ಬೆಲೆ ಕೊಟ್ಟು ಕಡಮೆ ಬೆಲೆಯ ವಸ್ತುವನ್ನು ಕೊಂಡುಕೊಳ್ಳುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ, ದೊಡ್ಡವರ ಭೆಟ್ಟಿ ಸಹವಾಸದ ಯೋಗ ಮೇಲಿಂದ ಮೇಲೆ. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾಷಾಢದ ಕೊನೆಯ ೩ ಮತ್ತು ಶ್ರವಣದ ಮೊದಲನೆ ೩ ಚರಣಕ್ಕೆ ತೊಂದರೆ ಕಡಮೆ. ತಾ. ೩, ೪, ೫, ೬ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿ ಮತ್ತು ಮಕ್ಕಳ ಆರೋಗ್ಯ ಸ್ವಲ್ಪ ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಆದರೆ ನೆರೆಯವರಿಂದ ವಿಪರೀತ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭವೂ ಉತ್ತಮ. ಆದರೆ ಪ್ರತಿಷ್ಠೆಯಲ್ಲಿಯ ಕೆಲವುಟ್ಟಿಗೆ ಕೊರತೆ. ಅಕಸ್ಮಾತ್ ಲಾಭದ ಸಂಭವವೂ ಉಂಟು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಮಿತ್ರ ಸುಖ ಉತ್ತಮ. ಭೆಟ್ಟಿ ಮತ್ತು ಪತ್ರವ್ಯವಹಾರಕ್ಕಿಂತ ಪ್ರವಾಸ ಅನುಕೂಲ. ಶತತಾರಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೩, ೪, ೫, ೬ ಅನುಕೂಲ.

ಮೀನ

ಎಲ್ಲರ ಪ್ರಕೃತಿ ಅನುಕೂಲ. ಆದರೆ ಮಕ್ಕಳು ಉದ್ವೇಗ ಹುಟ್ಟುವಂಥ ಕೆಲ ಕೃತ್ಯಗಳನ್ನು ಮಾಡುವರು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಉತ್ತಮ. ಆದರೆ ಅಪಮಾನದಿಂದ ಲಾಭ ಕಡಮೆ ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಅನಪೇಕ್ಷಿತ ಲಾಭದ ಸಂಭವ ಹೆಚ್ಚು ಶುಭ ಮತ್ತು ಭಾವೀ ಸೂಚಕ ಸ್ವಪ್ನಗಳು. ಪ್ರವಾಸಾದಿ ಕೆಲಸ ಉತ್ತಮ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೬, ೭, ೮, ೯ ಅನುಕೂಲ.

ಪಾಶ್ಚಾತ್ಯ ದೇಶಗಳಲ್ಲಿ ಹಳೆಯದೆಲ್ಲವೂ ಹಾಳೆಂದು ಮನಸ್ವಿ ವರ್ತನೆಗೆ ಬೆಂಬಲ ಕೊಡುವ ಅಭಿಪ್ರಾಯಗಳನ್ನು ಸಿದ್ಧಾಂತಗಳೆಂದು ವಿಜ್ಞಾನಿಬಳ್ಳವರು ಹೇಳಿದ್ದರ ಪರಿಣಾಮವಾಗಿ ಅವರು ಅನುಭವಿಸುತ್ತಿರುವ ಹಾನಿಯನ್ನು ಕಂಡು ಭಾರತೀಯರಾದ ನಾವು ಪಾಠ ಕಲಿಯದಿದ್ದರೆ ನಮ್ಮ ಕುಶಿತನಕ್ಕೆ ಎಣೆಯೇ ಇಲ್ಲವಾದೀತಲ್ಲವೆ?

ನಾನು ಊಟ ಮಾಡಿದೆ !

ಕಳೆದವಾರದ 'ಕರ್ಮವೀರ'ದಲ್ಲಿ ಶ್ರೀ 'ಕುಕ್ಷಿಂಭರ'ರು ಬರೆದ ಲೇಖನವನ್ನೋದಿ ನನಗೆ ಬಹಳ ಸಂಕಟವಾಯಿತು. "ಅಯ್ಯೋ ಪ್ರಾಣಿ, ಓದಿ ಓದಿ ಕೂಸು ಹುಟ್ಟಿ ಮರುಳನಾದ" ಎಂಬ ಗಾದೆಯಂತಾಯಿತಲ್ಲ!, ಎಂದು ಕೊಂಡೆ. ಅದರಲ್ಲಿ ಬೇರೆ, ಊಟವನ್ನೇ ಬಿಟ್ಟು ನಿರ್ಜಲೋಪವಾಸದಿಂದ ಪ್ರಾಣ ಹಾನಿಗೆ ಒಳಿದುಬಿದ್ದಿರುವ ನೆಂಬುದನ್ನು ಕೇಳಿ ಬಹಳ ಗಡಿಬಿಡಿಯಿಂದ ಸಂಪಾದಕರಿಗೆ ತರಣೋಪಾಯವನ್ನು ಬರೆದು ಕಳಿಸಬೇಕೆಂದು ಲೇಖನಿಯನ್ನೆತ್ತಿದೆ.

ನಾನು ಸ್ವತಃ ಬಡವ. "ಕುಕ್ಷಿಂಭರ" ರಷ್ಟು ಓದಿದವನೂ ಅಲ್ಲ. ಆದರೂ ನನ್ನನ್ನು ನೋಡಿದವರೆಲ್ಲರೂ "ಒಂದು ಕಡಿತಕ್ಕೆ ಮೂರು ತುಂಡಾಗುವ ಹಾಗೆ ಬೆಳೆದಿದ್ದಾನೆ ಆಸಾಮಿ ಎನ್ನುತ್ತಾರೆ! ಆದೇ ಭರ್ತೃಹರಿ ಹೇಳಿದ್ದಾನೆ. "ವಿವೇಕಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖಃ" ಎಂದು. ಸಕ್ಕರೆ ತಿಂದರೆ ಆಗುವ ಅನಾಹುತಗಳನ್ನು ಓದಿ ಸಿಹಿ ಪದಾರ್ಥಗಳನ್ನು ಎಂದೆಂದೂ ತಿನ್ನುವುದಿಲ್ಲವೆಂಬ ಪ್ರತಿಜ್ಞೆ ಮಾಡುವವನಿಗೆ "ಜಗತ್ತಿನ ಎಲ್ಲ ನಿಯಮಗಳೂ ಅಸಂಪೂರ್ಣ; ಯಾವುದೂ ಸಾರ್ವಕಾಲಿಕ, ಸಾರ್ವದೇಶಿಕ, ಸಾರ್ವವ್ಯಕ್ತಿಕ" ವೆನಿಸದು, ಎಂಬ ಅರಿವಿಲ್ಲವೆನ್ನಬೇಕಾಗುತ್ತದೆ. ಹಳೆಯ ಕಾಲದ ಗ್ರಂಥಗಳನ್ನಲ್ಲದೆ ಹೊಸ ಕಾಲದ ಗ್ರಂಥಗಳನ್ನೂ ಓದಿದ ಮನುಷ್ಯನಿಗೆ ಅವುಗಳಲ್ಲಿ ಎಲ್ಲೆಲ್ಲೂ "ಅತಿಸರ್ವತ್ರ ವರ್ಜಯೇತ್" ಎಂಬ ನೀತಿಯ ಮಾತು ಸಿಗಲಿಲ್ಲವೆ? ಆರೋಗ್ಯವಂತನ ನಾಲಿಗೆಯೆಂಬುದು ದೈವದತ್ತವಾದ ಒಂದು ಆರೋಗ್ಯಮಾಪಕ ಯಂತ್ರ. ಅದರ ಸ್ಥಿತಿಗಳನ್ನು ಅವಲೋಕಿಸದೆ ಯಾವ ವೈದ್ಯನೂ ಔಷಧ ಕೊಡುವದಿಲ್ಲ. ಅದು ಹೇಳಿದ್ದು ದೇಹಕ್ಕೆ ಅಗತ್ಯ, ಹಿತ, ಪಥ್ಯ ಎಂದು ತಿಳಿಯಬೇಕು. ಆದರೆ ಅದು ಹೇಳಿದ ಯಾವ ತಿನಿಸು, ತೀರ್ಥವನ್ನಾಗಲಿ ಹೊಟ್ಟೆಯ ಅಳತೆಗೆ ಮೀರುವಂತೆ ತಿನ್ನಬಾರದು. ಅದಕ್ಕೆ ಇದು ಬೇಕು ಎಂದು ಹೇಳುವ ಅಧಿಕಾರವಿದೆಯಲ್ಲದೆ, ಇಷ್ಟು ಬೇಕು ಎಂದು ಹೇಳುವ ಅಧಿಕಾರವಿಲ್ಲ. ಪರಿಮಾಣವನ್ನು ಹಿತ ಮಿತವಾಗಿ ಇರುವಂತೆ ನೋಡಿಕೊಳ್ಳುವುದು ಹೊಟ್ಟೆಯ ಸ್ಥಿತಿಗತಿಗಳನ್ನರಿತ ಮನುಷ್ಯನ ಬುದ್ಧಿಯ ಅಧೀನ.

ಪರಿಮಾಣಮಿತಿ ಮತ್ತು ಪರಿಷ್ಕಾರ

ಸಿಹಿಪದಾರ್ಥಗಳು (ಹೆಚ್ಚಿನ ಪರಿಮಾಣದಲ್ಲಿ) ನಿತ್ಯಾಹಾರವೆನಿಸವು; ಅವು ನೈಮಿತ್ತಿಕಗಳಾಗಿ ಉಳಿದರೆ ಅವುಗಳ ಪಥ್ಯತೆ, ರಸ್ಯಮಾನತೆಗಳು ಹಿತಕರವೆನಿಸುವುವು. ಅದರಿಂದಲೇ ನಮ್ಮಲ್ಲಿ ಅವನ್ನು ಕೇವಲ ಹಬ್ಬ ಹುಣ್ಣಿಮೆಗಳಲ್ಲಿ ಮಾತ್ರ ವಿಶೇಷವಾಗಿ ಮಾಡುವರು. ಗುಣ ದೋಷಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದಿಲ್ಲ. ಪ್ರಕೃತಿ, ಋತು ಹವೆಗಳನ್ನು ನೋಡಿಕೊಂಡು ಪದಾರ್ಥಗಳಲ್ಲಿಯ ದೋಷವನ್ನು ದಕ್ಕಿಸಿಕೊಂಡು ಗುಣ ಲಾಭಹೊಂದುವ ರೀತಿಯಿಂದ ಊಟ ಮಾಡುವುದು ಬುದ್ಧಿವಂತರ ಕೆಲಸ. ಬದುಕುವ ಆಸೆಯಿಲ್ಲದವನು ಊಟವನ್ನು ಬಿಡಬಹುದು! ಹಾಗಿಲ್ಲದವನು ಊಟ ಮಾಡಲೇಬೇಕಾಗುವುದು. ಸುಖವನ್ನು ಅರಸುವವನು ದುಃಖವನ್ನು ಜೀರ್ಣಿಸಿಕೊಳ್ಳದಿದ್ದರೆ ಹೇಗೆ? ಆದರೆ ಈ ಯಾವ ಮಿಶ್ರಣದಲ್ಲಿಯ ದೋಷ ಅಥವಾ ದುಃಖಾಂಶ ಅಲ್ಪ ಪ್ರಭಾವಿ ಎಂಬುದನ್ನರಿತು ದೇಶ ಕಾಲ ಪರಿಸ್ಥಿತಿಗೆ ತಕ್ಕಂತೆ ಅದನ್ನು ಆರಿಸಿಕೊಂಡು ಮನುಷ್ಯನು ಬಳಸುವುದು ಅಗತ್ಯ. ಅದರಿಂದ ಪಾಯಸ ಪ್ರಿಯರಾದ ಕುಕ್ಷಿಂಭರರು ಔಷಧವನ್ನೋದಿ ಭಯಪಡಬೇಕಾಗಿಲ್ಲ. ಯಾವ ಪದಾರ್ಥವನ್ನೇ ಆಗಲಿ ಮಿತವಾಗಿ ತಿನ್ನಬೇಕೆಂಬ ಸರ್ವಸಾಧಾರಣ ನಿಯಮವನ್ನು ಒಪ್ಪಿಕೊಂಡ ಬಳಿಕ ಆಯಾ ಪದಾರ್ಥಗಳಲ್ಲಿಯ ದೋಷ ನಿವಾರಣೆಗೆ ಅವನ್ನು ಪಾಕಭೇದ ಅಥವಾ ಅನ್ಯ ಪದಾರ್ಥ ಮಿಶ್ರಣ ಇದರಿಂದ ಪರಿಷ್ಕರಿಸಿ ತಿನ್ನಬೇಕೆಂಬುದನ್ನು ಅರಿತುಕೊಳ್ಳಬೇಕು. ಪಾಯಸಕ್ಕೆ ಶುಂಠಿ ಹಾಕಿಕೊಂಡು ತಿಂದರೆ ಅದರಲ್ಲಿರುವ ಕಫ ದೋಷ ಪರಿಹಾರವಾಗಿ ಬೇಗ ಜೀರ್ಣವಾಗುವುದು. [illegible]

ಸೀರುಳ್ಳಿಯಿಂದಲೂ ಹಾಗೆಯೇ. ಶ್ರೀ "ಕುಕ್ಷಿಂಭರ"ರು ಅದರ ಗುಣದೋಷಗಳೆರಡನ್ನೂ ಬಲ್ಲವರಾಗಿದ್ದಾರೆ. ಹಸವಾದ ದಾಳಿಂದ ಬೆಂದ ಸೀರುಳ್ಳಿಯು ರುಚಿ ನಾಲಿಗೆಗೆಷ್ಟು ರುಚಿಕರವೋ ದೇಹಕ್ಕೂ ಹಾಗೇ ಪಥ್ಯ. ಚಳಿಯ ಕಾಲದಲ್ಲಿ ಮಾತ್ರ ಕೆಲವೊಮ್ಮೆ ಅದರಲ್ಲಿಯ ಮಸಾಲೆ, ಖಾರ, ಮಾಂಸ್ಯಗುಣ ಇವು ಅಪಕಾರಿಯಾದಾವು. ಮಿಕ್ಕ ಕಾಲಗಳಲ್ಲಿ ಅದೊಂದು ಉತ್ತಮ ಆಹಾರ. ಅದರಲ್ಲಿಯ ಬೇಳೆ ಪ್ರೋಟೀನನ್ನೂ, ಸೀರುಳ್ಳಿ ರಂಜಕ ಕಬ್ಬಿಣ, ಮುಂತಾದ ಲೋಹಾಂಶವನ್ನೂ ದೇಹಕ್ಕೆ ಒದಗಿಸಿಕೊಟ್ಟು ಉಪಕರಿಸುತ್ತವೆ. ಶಾಸ್ತ್ರ ಗ್ರಂಥವನ್ನು ಅವಲೋಕಿಸುವ ಮನುಷ್ಯರು ಅದರಲ್ಲಿಯ ಉಕ್ತಿಗಳ ಸಂದರ್ಭ, ಔಚಿತ್ಯ, ಶೈಲಿಚಮತ್ಕಾರ, ಅನುಭವಸಂಬಂಧ ಮುಂತಾದವನ್ನು ಗಮನಿಸದಿದ್ದರೆ ಕುಕ್ಷಿಂಭರರಂತೆಯೇ ಊಟಬಿಡಬೇಕಾದೀತು; ಆಕಾಶ ತನ್ನ ತಲೆಯ ಮೇಲೆ ಹರಿದು ಬಿದ್ದರೆ ಏನು ಮಾಡಬೇಕು? ಎಂದು ಚಿಂತಿಸಿ ನರಳುವ ಸಂಶಯಾತ್ಮನಂತಾಗಬೇಕಾದೀತು!

ಅಭ್ಯಾಸವಿಲ್ಲದ್ದು ನಿತ್ಯಾಹಾರವಾಗದು

ಅತಿಯಾಗಿ ಪಾಲಿಶ್ ಮಾಡಿದ ಧಾನ್ಯದಿಂದ ಮಾಡಿದ ಯಾವ ಪದಾರ್ಥವೂ ಪುಷ್ಟಿಕರವಲ್ಲ. ಹಾಗೆಂದು ಕೌದನ್ನೇ ತಿನ್ನಲು ಹೋದರೆ ಕಾಹಿಲೆ ಹಿಡಿದೀತು. ತಕ್ಕ ಮಟ್ಟಿಗೆ ಕುಟ್ಟಿ ಚೊಕ್ಕ ಮಾಡಿದ ಗೋದಿ ಅಥವಾ ಅಕ್ಕಿಯ ಚಪಾತಿ ರೊಟ್ಟಿ ಮುಂತಾದವು ನಾಲಿಗೆಗೂ ಹೊಟ್ಟೆಗೂ ಬಹಳ ಪಥ್ಯ. ಹಿಂದಿನ ಕಾಲದಿಂದಲೂ ನಮ್ಮ ಊಟದ ಪದ್ಧತಿಯಲ್ಲಿ ಅನ್ನಕ್ಕೆ ಪ್ರಥಮ ಸ್ಥಾನವನ್ನು (ಕೆಲವೆಡೆ ಚಪಾತಿ ರೊಟ್ಟಿಗಳಿಗೆ) ಕೊಡಲಾಗಿದೆ. ಮಿಕ್ಕವುಗಳಿಗೆ ಎರಡನೆಯ ಸ್ಥಾನವನ್ನು ಕೊಟ್ಟದ್ದು ನಮ್ಮ ಪ್ರಕೃತಿಯ ಅಳವನ್ನರಿತೇ. ಅಲ್ಲದೆ, ಪದಾರ್ಥಗಳ ಬಗೆಯಲ್ಲಿ ಬಾಹುಲ್ಯವಿರುವುದೂ ಶಾಸ್ತ್ರೋಕ್ತವಾದ ನಮ್ಮ ವೈಶಿಷ್ಟ್ಯ. ಅದುದರಿಂದ ಚಪಾತಿಗಳನ್ನು ಮಿತ ಸಂಖ್ಯೆಯಲ್ಲಿ ತಿಂದರೆ ಎಂದೂ ಅಪಥ್ಯವಾಗುವದಿಲ್ಲವಷ್ಟೇ ಅಲ್ಲ; ಆರೋಗ್ಯ ವೃದ್ಧಿಯೇ ಆಗುವುದು. ಏಕೆಂದರೆ ಗೋದಿ ಗುರು ಪದಾರ್ಥ, ಪ್ರೋಟೀನ್ ಅದರಲ್ಲಿ ಹೆಚ್ಚಾಗಿದೆ. ನಿತ್ಯವೂ ಅಲ್ಪ ಪ್ರಮಾಣದಲ್ಲಿ ನಾವು ಅದನ್ನು ತಿನ್ನುವುದು ಅನಿವಾರ್ಯ. ಜೊತೆಗೆ ಪಲ್ಯವಿದ್ದರೆ ರುಚಿಯೂ ಹೆಚ್ಚುವುದು, ಅದರಲ್ಲಿಯ ಜೀವನಸತ್ವಗಳೂ ನಮಗೆ ಲಭ್ಯವಾಗುವುವು.

ಅತಿ ಶುದ್ಧ ಮಾಡಿದರೆ ನೀರೇ ಏಕೆ, ಪ್ರತಿಯೊಂದು ಪದಾರ್ಥವೂ ಗುಣದೋಷ ರಹಿತವಾಗುವುದು. ಪದಾರ್ಥದ ದೋಷನಿರ್ಮೂಲನದ ಜೊತೆಗೇ ಗುಣನಿರ್ಮೂಲನವೂ ಆಗಿಬಿಡುವುದು. ಅದುದರಿಂದ ಅತ್ಯಲಂಕಾರ ಮಾಡಿಕೊಂಬ ಹೆಣ್ಣು ಅಸಭ್ಯತೆಗೆ ಎಡೆಗೊಡುವಂತೆ ಅತಿ ಶುದ್ಧವಾದ ನೀರು ಅನಾರೋಗ್ಯಕ್ಕೆ ಎಡೆಗೊಟ್ಟೀತು. ಶುದ್ಧತೆ ಹೆಚ್ಚಾದುದರಿಂದಲೇ ಸಕ್ಕರೆಯಲ್ಲಿ ಬೆಲ್ಲದಲ್ಲಿರುವಂತೆ ಉಪಯುಕ್ತ ಲವಣಾಂಶ ಮತ್ತು ಜೀವನಸತ್ವಗಳಿಲ್ಲ. ಆದರೆ ಶುದ್ಧ ಮಾಡದ ಪದಾರ್ಥಗಳನ್ನು ಬಳಸುವದರಿಂದ ಅವುಗಳಲ್ಲಿಯ ಗುಣಾಂಶದ ಪ್ರಭಾವಕ್ಕಿಂತ ದೋಷಾಂಶದ ಪ್ರಭಾವ ಹೆಚ್ಚಾಗಿ ನಮ್ಮ ಹೊಟ್ಟೆ ನಾಲಿಗೆಗಳಿಗೆ ಅಹಿತವುಂಟಾಗುವುದು; ಅರುಚಿ, ಅಗ್ನಿಮಾಂದ್ಯ ಅನಾರೋಗ್ಯಗಳುಂಟಾಗುವವು. ಕಾಫಿ ಕೇವಲ ರುಚಿಗಾಗಿ; ಅದು ಮಿತವಾಗಿದ್ದರೆ ಬಾಧಕ ಮಾತ್ರವಿಲ್ಲ; ಸಾಧಕ ಸದಾ ಶೂನ್ಯವೇ. ಅದರಿಂದಲೇ ಅದು ದುಷ್ಪರಿಣಾಮಗಳ ಬಳಗಕ್ಕೆ ಸೇರಿದ್ದೆನ್ನುತ್ತಾರೆ.

ಶ್ರೀ ಕುಕ್ಷಿಂಭರರು ಇನ್ನೂ ಬದುಕಿದ್ದರೆ (ದೇವರ ದಯೆಯಿಂದ ಬದುಕಿರಲಿ ಎಂದು ಹಾರೈಸುತ್ತೇನೆ.) ಮೇಲಿನ ಮಾತನ್ನು ಮನನ ಮಾಡಿ, ನಾನು ಉಂಡು ಸುಖಿಯಾಗಿರುವಂತೆ ಅವರು ಆರೋಗ್ಯವೃದ್ಧಿಯಾಯಿತೆಂದು [illegible]

ಆರೋಗ್ಯದ ಒಂದು ಮುಖ್ಯ [illegible]

ಹೊಸ ಜಾಗತಿಕ ಪಂಚಾಂಗ

ಶೃಂಗಾರಕ್ಕೆ [illegible]

[illegible] "ವರ್ಲ್ಡ ಕ್ಯಾಲೆಂಡರ್" [illegible]

ಈಗಿರುವ ಕ್ರಿಸ್ತ ಪಂಚಾಂಗದಲ್ಲಿ [illegible] ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ ಗಳಿಗೆ ೩೧ ದಿನಗಳು ಮತ್ತು ಉಳಿದ ತಿಂಗಳುಗಳಿಗೆ ೩೦-೩೦ ದಿನಗಳಂತೆ [illegible]

ನಾಲ್ಕು ವರ್ಷಗಳಿಗೊಮ್ಮೆ ಬರುವ [illegible] ವರ್ಷದ ಒಂದು ಅಧಿಕ ದಿನವನ್ನು [illegible] ೩೦ ಮತ್ತು ಜುಲೈ ೧ ರ ನಡುವೆ [illegible] ಯಿಲ್ಲದೆ "ಪಾಲಿ" [illegible] ವರು.

ಈ ವ್ಯವಸ್ಥೆ [illegible] ಆದಿತ್ಯವಾರದಿಂದಲೇ [illegible] ಡಿಸೆಂಬರ [illegible]

[illegible]

[illegible]

[illegible] "India, Pakistan and the West" [illegible]

ರಶಿಯದ ಕೈಯಲ್ಲಿ ಅಣುಬಾಂಬು!

ರಶಿಯದ ಕೈಯಲ್ಲಿ ಅಣುಬಾಂಬುಗಳಿವೆಯೆಂದರೆ ಪಾಶ್ಚಾತ್ಯ ಮಿತ್ರರು ನಂಬುತ್ತಿರ[illegible] ಅವರ [illegible] ಪರೀಕ್ಷಿಸಲು ಮಿತ್ರಲಿನ ದೇಶಗಳಲ್ಲಿ ಅಮೇರಿಕವು [illegible] ಎಲ್ಲೆಡೆಯಲ್ಲೂ [illegible] ಯಂತ್ರಗಳನ್ನು ಇಟ್ಟಿತು. ಆ ಯಂತ್ರದ [illegible] ರಶಿಯದಲ್ಲಿ ಅಣು[illegible]ವಾದದ್ದು ಸ್ಪಷ್ಟವಾಗಿ ತಿಳಿದುಬಂದಿದೆ. ತನ್ನ ಪ್ರತಿ [illegible] ಕೈಯಲ್ಲಿಯೂ ಅಣುಬಾಂಬಿದೆಯೆಂ[illegible] ಅಧಿಕೃತವಾಗಿ ಅಮೇರಿಕದ [illegible] ತಿಳಿದು[illegible]ದರಿಂದ ಅಂತಾರಾಷ್ಟ್ರೀಯ ರಾಜತಂತ್ರವಿನ್ನು ಹೊಸ [illegible] ಅನೇಕರ [illegible]. ಎರಡೂ ವಿರೋಧಿಪಕ್ಷಗಳಲ್ಲಿ [illegible] ಈ ಶಸ್ತ್ರ[illegible]ದಿಂದ ಅದರ ಬಳಕೆ ಸಾರ್ವತ್ರಿಕವಾಗಿ ಬಹಿಷ್ಕೃತವಾಗ[illegible] ವಿಶ್ವ [illegible]. ಅದು ಸಿದ್ಧಿಸಿ ಜಾಗತಿಕ ಶಾಂತಿಯು ತಳಹದಿ [illegible] ಅಂತಾರಾಷ್ಟ್ರೀಯ ಧುರೀಣರ ಕರ್ತವ್ಯವಲ್ಲವೆ?

[illegible] ಜಗಿಗೆ ಅಣುಬಾಂಬುಗಳನ್ನು ತಯಾರಿಸುತ್ತಿರುವ ದೇಶವೆಂದರೆ ಅಮೇರಿಕ [illegible]. ಅದರೆ ಈಗ [illegible] ಅಧಿಕೃತ [illegible] ಮುಂದ ಸೋವಿಯಟ್ ರಶಿಯ ಕೂಡ ಅಣು[illegible] ಎಂಬುದು [illegible]ತಾಯಿತು.

[illegible]

[illegible] ಬಂದಿರುವನೆಂದು ಹೇಳಲಾಗಿದೆ. ಅವನು [illegible] ಬಗ್ಗೆ ಕೆಲ [illegible] ಹೇಳಿದ್ದಾನೆ.

ದಿದ್ದರೂ ತನ್ನ ಸಾಂಗ್ರಾಮಿಕ ಶಕ್ತಿಯನ್ನು ಬೆದರಿಕೆ ಹಾಕಲು ಬಳಸಿಕೊಂಡು ವಿಶ್ವ ರಾಷ್ಟ್ರಗಳಲ್ಲಿ ತನಗೆ ಅನುಕೂಲವಾದ ರಾಜ ಕೀಯ, ಆರ್ಥಿಕ ಮತ್ತು ಸಾಮಾಜಿಕ ನೀತಿ ಗಳು ಬೆಳೆದು ನಿಲ್ಲುವಂತೆ ಮಾಡುತ್ತಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ರಶಿಯವು ಅಣುಬಾಂಬನ್ನು ತಯಾರಿಸೀತೆಂಬುದು ಪಾಶ್ಚಾತ್ಯ ಮಿತ್ರರಿಗೆ ಗೊತ್ತಿದ್ದರೂ ಇಷ್ಟು ಬೇಗ ಅದು ತಯಾರಿಸೀತೆಂಬುದನ್ನು ಅವರು ನಿರೀಕ್ಷಿಸಿರಲಿಲ್ಲ. ಅದರಿಂದಲೇ ಅವರಲ್ಲೀಗ [illegible]. ಆ ಕಾರಣಕ್ಕಾಗಿಯೇ ಅಮೇರಿಕದಲ್ಲಿ ಅತ್ಯಂತ ರಕ್ಷಣೆಗಾಗಿ ಸಂಗ್ರಾಮ

ರಿಕೆಯನ್ನು ಸಂಖ್ಯೆ ಮತ್ತು ಗುಣಗಳಲ್ಲಿ ಹೆಚ್ಚಿಸಿದೆ ಎಂಬುದೂ ಉಳಿಯದು. ಅಣುಸ್ಫೋಟದ ಗುಟ್ಟನ್ನು ಮೊದಲು ಕಂಡುಹಿಡಿದು ನೊಬೆಲ್ ಪಾರಿತೋಷಕವನ್ನು ಪಡೆದ ಜರ್ಮನ್ ವಿಜ್ಞಾನಿ ಡಾ. ಒಟ್ಟೋ ಹಾನ್ ಎಂಬವನು ಉಭಯ ಪಕ್ಷಗಳಲ್ಲೂ ಅಣುಬಾಂಬಿರುವಂತಾದುದು ಬಹಳ ಕ್ಷೇಮಕರ, ಏಕೆಂದರೆ, ಕಳೆದ ಮಹಾ ಯುದ್ಧದಲ್ಲಿ ಉಭಯ ಪಕ್ಷಗಳಲ್ಲೂ ವಿಷವಾಯುವಿದ್ದುದರಿಂದ ಯಾವುದೂ ಅದನ್ನು ನಾಗರಿಕರ ಮೇಲೆ ಪ್ರಯೋಗಿಸಿ ಮನುಷ್ಯವಧೆ ಮಾಡಲು ಮನಸ್ಸು ಮಾಡಲಿಲ್ಲ; ಹಾಗೇ ಈಗ ಸರ್ವನಾಶಕವಾದ ಅಣುಬಾಂಬು ಉಭಯ ಪಕ್ಷಗಳ ಕೈಯಲ್ಲಿರುವುದರಿಂದ ಯಾವುದೂ ಅದನ್ನು ಬಳಸಲಾರದು- ಎನ್ನುತ್ತಾನೆ.

ಅಮೇರಿಕದ ಯುದ್ಧ ಸನ್ನಾಹ

"ಸೈಂಟಿಫಿಕ್ ಅಮೇರಿಕನ್" ಎಂಬ ಪತ್ರಿಕೆಯ ವರದಿಯ ಮೇರೆಗೆ ಅಮೇರಿಕದಲ್ಲೀಗ ಅಣುಶಕ್ತಿಯ ಉತ್ಪಾದನ ಮತ್ತು ಅದರ ಹೊಸ ಹೊಸ ಬಳಕೆಗಳ ಬಗ್ಗೆ ಸಂಶೋಧನೆ ಇವನ್ನು ನಡೆಸಲು ೧೩೭೦ ಕಾರಖಾನೆಗಳು, ಪ್ರಯೋಗ ಶಾಲೆಗಳು, ಕಚೇರಿಗಳು ಮುಂತಾದವು ಇವೆ. ಅವು ಅಲ್ಲಿಯ ೪೮ ಪ್ರಾಂತಗಳಲ್ಲೂ

ಹೊಸ ಬ್ರಿಟಿಶ ಹೋರಾಟದ ವಿಮಾನ: ಶಬ್ದಕ್ಕಿಂತಲೂ ವೇಗವಾಗಿ ಓಡಬಲ್ಲ ಈ "ಹಾಕರ್ ೧೦೫೨" ವಿಮಾನ ಬ್ರಿಟಿಶ ಆಕಾಶಪಡೆಯನ್ನು ಬಲಗೊಳಿಸಲಿದೆ.

ಜರ್ಮನ್ ವಿಜ್ಞಾನಿಯ ಹೇಳಿಕೆ

ರಶಿಯದಲ್ಲಿ ವಿದ್ಯಾಂಶಿಕತಯಾರಿಕೆಗೆ ಮೀಸಲಾದ ಒಂದು ದೊಡ್ಡ ಸಂಸ್ಥೆಯಿದೆ. ಮೊದಲು ಕುರಿಂಜೆಯ ಎಂಬಲ್ಲಿ ಸ್ಥಾಪಿಸಿ ಜರ್ಮನರು ನಡೆಸುತ್ತಿದ್ದ [illegible] ಎಂಬ [illegible]ವಾಗಿತ್ತು; ಅದನ್ನೀಗ ರಶಿಯನ್ನರು [illegible] ದೇಶಗಳ ಮೇಲೆ ಬಾಂಬು ಬಿಡಲು ಅನುಕೂಲವಾದ [illegible] ಮತ್ತು [illegible]ಗಳನ್ನು ರಶಿಯ [illegible]. [illegible] ರಶಿಯನ್ನರು [illegible]ದಾಗಿದೆ. [illegible] ಬಗ್ಗೆ ಪ್ರಯೋಗ ನಡೆಯುತ್ತಿದೆ. ಅಂಥ [illegible]ಗಳನ್ನು ರೈಲಿನ ಮೇಲೆ ಸಾಗಿಸಬಹುದಾಗಿದೆ. ಕಳೆದ ಮಹಾಯುದ್ಧದಲ್ಲಿ ಜರ್ಮನರು ಹೀಗೆ [illegible]ರು.

[illegible]

ಸನ್ನಾಹವನ್ನು ಅದಷ್ಟು ಬೇಗ ಇನ್ನಷ್ಟು ಪರಿಪೂರ್ಣವಾಗಿ ಮಾಡಬೇಕೆಂದು ಸರಕಾರೀ ವರ್ಗಗಳಲ್ಲಿ ಪ್ರಯತ್ನ ಪ್ರಾರಂಭವಾಗಿದೆ. ಮುಚ್ಚು ಹಾಕ್ಕಾಗುವುದೆಂದು ಇಲ್ಲಿಯ ವರೆಗೆ ಮೀನ-ಮೇಷದಲ್ಲಿದ್ದ ಬ್ರಿಟನ್ನು ಇದೀಗ ಅತಿ ಸ್ವಲ್ಪ ಕಾಲದಲ್ಲಿ ಅಣುಬಾಂಬುಗಳನ್ನು ತಯಾರಿಸಲು ನಿರ್ಧರಿಸಿದೆ ಎಂಬ ಸುದ್ದಿ ಇದೀಗ ಹೊರಬಿದ್ದಿದೆ. ಫ್ರಾನ್ಸ್, [illegible], [illegible]ಗಳು ಆತ್ಮರಕ್ಷಣೆಗಾಗಿ ಅಮೇರಿಕದಿಂದ ಇನ್ನಷ್ಟು ಆಯುಧೋಪಕರಣಗಳನ್ನು ಪಡೆದುಕೊಳ್ಳುವ ಸಂಭವವಿದೆ. ಆದರೆ ರಶಿಯನ್ನವು ಮಾತ್ರ ತನ್ನಲ್ಲಿ ಅಣುಬಾಂಬಿರುವುದೆಂಬ ಕಾರಣದಿಂದ ಜಗತ್ತು ಗಾಬರಿಗೀಡಾಗಬೇಕಿಲ್ಲ; ಈಗಲೂ ಹಿಂದೆ ತನ್ನ ಪ್ರತಿನಿಧಿ ಸಂ. ರಾ. ಸಂಘದೆದುರು ಅಣುಬಾಂಬನ್ನು ಎಲ್ಲ ರಾಷ್ಟ್ರಗಳೂ ಬಹಿಷ್ಕ[illegible] ಇಲ್ಲಿಯ ವರೆಗೆ ಅಮೇರಿಕ ಮಾಡುತ್ತ ಬಂದರೆ ಇನ್ನು ಮೇಲೆ ರಶಿಯವೂ ಅದೇ ಮೇರೆಗೆ ವಿದೇಶಗಳಲ್ಲಿ ತನಗನುಕೂಲವಾದ ರಾಜಕೀಯ ಮತ್ತು ಆರ್ಥಿಕ [illegible]

[illegible]

ಹರಡಿಕೊಂಡಿವೆ. ಅವಕ್ಕೆ ಅಲ್ಲಿಯ ೫೮ ವಿಶ್ವ ವಿದ್ಯಾನಿಲಯಗಳು ಸಹಾಯ ಸಹಕಾರಗಳನ್ನು ನೀಡುತ್ತಿವೆ. ಮುಖ್ಯವಾದ ಮೂರು ದೊಡ್ಡ ಪ್ರಯೋಗಶಾಲೆಗಳು ಓಕ್‌ರಿಜ್, ಅಗೋರ್ನ್ ಮತ್ತು ಬ್ರೂಕ್ ಹೇವನ್ ಎಂಬ ಸ್ಥಳಗಳಲ್ಲಿವೆ. ಸರಿಯಾದ ಸುದ್ದಿಯಿಲ್ಲದಿದ್ದರೂ ಸದ್ಯ: ಅಮೇರಿಕ ತಯಾರಿಸಿಟ್ಟ ಅಣುಬಾಂಬುಗಳು ೨೦೦ ರಿಂದ ೩೦೦ ರ ವರೆಗಿರಬಹುದೆಂದು ಊಹಿಸಲಾಗಿದೆ. ಹಳೆಯ ಮಾದರಿಯ ಅಣುಬಾಂಬುಗಳಿಗಿಂತ ಇತ್ತೀಚಿನ ಹೊಸ ಮಾದರಿಯವುಗಳು ಮತ್ತಷ್ಟು ಉಗ್ರತರವಾಗಿವೆ ಎಂದು ಹೇಳಲಾಗಿದೆ. ಒಂದು ವೇಳೆ ಯುದ್ಧ ಸಂಭವಿಸಿದರೆ ಅಮೇರಿಕವಿಂದ ತನ್ನ ಬಿ ೩೬ ರ ಮಾದರಿಯ ಬಾಂಬರುಗಳನ್ನು ರಶಿಯಕ್ಕೆಸೆದು ಅಲ್ಲಿಯ ಔದ್ಯಮಿಕ ಕೇಂದ್ರಗಳನ್ನು ನಾಶ ಮಾಡಿ ತನ್ಮೂಲಕ ಅದರ ಯುದ್ಧೋದ್ಯಮವನ್ನು ಕಡೆಗಟ್ಟಿ ಶರಣಾಗತವಾಗುವಂತೆ ಮಾಡಬಹುದು ಎಂಬುದು ಅಮೇರಿಕನ್ ಸಮರನೀತಿವಿಶಾರದರ ತರ್ಕವಾಗಿತ್ತು. ಅದರೀಗ ಆ ತರ್ಕವನ್ನವರು ಬದಲಾಯಿಸಬೇಕಾಯಿತು; ಎಷ್ಟೇ ಅಲ್ಪ ಸಂಖ್ಯೆಯಲಿ, [illegible]

[illegible] ಸರ್ವನಾಶಕ್ಕೆ ನಗಿ[illegible]

-ಬಿಡಬಹುದು. ಅದುದರಿಂದ ಪ್ರಬಲ [illegible]ಲಾದ ರಾಷ್ಟ್ರಗಳಿಂದೂ ಅಣುಬಾಂಬ[illegible] ಪ್ರಯೋಗಕ್ಕೆ ಎಲ್ಲಿಯೂ ಪ್ರೋತ್ಸಾಹ[illegible] ಕೊಡಲಾರವು ಅದರೆ ಜಾಗತಿಕ ಆರೋಗ್ಯಸಂಘಟನೆಯ ಅಧ್ಯಕ್ಷ ಡಾ. ಚಿಶೋಲ್ಮರು [illegible] ಪ್ರಯೋಗದಿಂದ ಅರೇ ತಾಸುಗಳಲ್ಲಿ ಒಂದು ಇಡೀ ದೇಶದಲ್ಲಿಯ ಜೀವಕೋಟಿಯನ್ನು ನಾಶ ಮಾಡಬಹುದು ಎಂದ ಮಾತಿನಂತೆ ಅಮೇರಿಕವು ಕೃಮಿಶಸ್ತ್ರಗಳಲ್ಲಿ ಎಲ್ಲ ದೇಶಗಳನ್ನು ಮೀರಿಸಿದೆ ಎಂದು ಹೇಳಲಾಗಿದೆ. ಅದರೆ ವಿಷವಾಯು, ಅಣುಬಾಂಬುಗಳಂತೆ ಇವು ಬರಿ ಪ್ರಾರ್ಥ್ಯಗಳಲ್ಲದೆ ಪ್ರಯೋಜ್ಯಗಳಲ್ಲ. ಕೃಮಿಶಸ್ತ್ರಗಳಿಲ್ಲದ ದೇಶ ಅದು ತನ್ನ ಮೇಲೆ ಪ್ರಯುಕ್ತವಾದರೆ ಯುದ್ಧ ಕಾಲದಲ್ಲಿ ಅಷ್ಟೇ ಮಾರಕವಾದ ಮೇಲೆ ಹೇಳಿದ ಮಿಕ್ಕೆರಡರಲ್ಲಿ ಒಂದು ಶಸ್ತ್ರವನ್ನು ನಿಯಮಭಂಗ ಮಾಡಿಯಾದರೂ ಅದು ದುರ್ವಾರವೆಂದು ಪ್ರಯೋಗಿಸಿಬಿಡುವ ಸಂಭವವಿದೆ. ಕಳೆದ ಮಹಾಯುದ್ಧದಲ್ಲಿ ಅಸ್ಪತ್ರೆಯ ವಾಹನಗಳ ಮೇಲೆ ಬಾಂಬೆಸೆಯಬಾರದೆಂದು ಅಂತಾರಾಷ್ಟ್ರೀಯ ಒಡಂಬಡಿಕೆಯಿದ್ದರೂ ಅವುಗಳಲ್ಲಿ ಮಿತ್ರರಾಷ್ಟ್ರದವರು ಸುದ್ಧ ಯೋಧರನ್ನು ಸಾಗಿಸುತ್ತಿದ್ದರೆಂದು ತಿಳಿದು ನಾಜಿಗಳು ಅವುಗಳಮೇಲೆಯೂ ಬಾಂಬೆಸೆಯಲಾರಂಭಿಸಿದ್ದು ಇದಕ್ಕೊಂದು ಉದಾಹರಣೆ.

ಅಣುಬಾಂಬಿನ ಬಹಿಷ್ಕಾರ

ಮೇಲಿನ ವಿಚಾರ ರಶಿಯಕ್ಕಾಗಲಿ ಅಮೇರಿಕಕ್ಕಾಗಲಿ, ಗೊತ್ತಿಲ್ಲವೆಂದಲ್ಲ. ಅವೆರಡೂ ಈ ಹಿಂದೆ ವಿಷವಾಯು, ಅಣುಬಾಂಬು, ಕೃಮಿಶಸ್ತ್ರ ಮುಂತಾದ ಎಲ್ಲ ಸರ್ವನಾಶಕ ಶಸ್ತ್ರಗಳನ್ನೂ ಬಹಿಷ್ಕರಿಸಲು ತಾವು ಒಪ್ಪಿಗೆಯಿದೆ ಎಂದು ಹೇಳಿವೆ. ಆದರೆ ಹಾಗೆ ನಿಯಂತ್ರಣದಲ್ಲಿಡುವ ಅಥವಾ ಬಹಿಷ್ಕರಿಸುವ ರೀತಿಯ ಬಗ್ಗೆ ಭಿನ್ನಾಭಿಪ್ರಾಯವುಂಟಾಗಿ ಎಲ್ಲ ಪ್ರಯತ್ನವೂ ವ್ಯರ್ಥವಾಗುವಂತಾಯಿತು. ಸಂ. ರಾ. ಸಂಘದ ಅಣುಶಕ್ತಿ ಸಮಿತಿ ಅಮೇರಿಕದ ಕ್ರಮವನ್ನು ಪುರಸ್ಕರಿಸಿದ್ದರಿಂದ ರಶಿಯ ಅದಕ್ಕೆ ಒಪ್ಪದೆ ಅದು ಯಾವ ಕಾರ್ಯವನ್ನೂ ಮಾಡಲಾರದೆ ಹೋಯಿತು. ಅದರಿಂದ ಭದ್ರತಾಮಂಡಲವು ಸಮಿತಿಯನ್ನು ವಿಸರ್ಜಿಸ[illegible] ಸಂಘದ ಸರ್ವ ಸದಸ್ಯರ ಸಭೆಗೆ ಸಲಹೆ[illegible] ನಿರ್ಧರಿಸಿದೆ. ಅದರೆ ಸರ್ವ ಸದಸ್ಯರಸಭೆ ಅದಕ್ಕೆ ಒಪ್ಪುವುದು ತೀರ ಅನ್ಯಾಯವೆನಿಸುತ್ತದೆ. ಉಭಯ ಪಕ್ಷದವರು ಒಂದಲ್ಲ [illegible] ಯೋಜನೆಗೆ ಒಪ್ಪಿಯಾರು.. ಮಾನವ ಜಾತಿಯ ಬುದ್ಧಿಗೆ ಉಭಯ ಪಕ್ಷದವರಿಗೂ ಸಮ್ಮತವಾಗುವ ಒಂದು ಯೋಜನೆಯನ್ನು ಸಿದ್ಧಗೊಳಿಸುವದು ಎಂದೆಂದಿಗೂ ಸಾಧ್ಯವಿಲ್ಲ ಎಂದು ಹೇಳಿದರೆ ಅದಕ್ಕೆ ಅರ್ಥವಿದೆ..? ಜಗತ್ತಿನ ಭವಿಷ್ಯವನ್ನು ದೂರದರ್ಶಿತ್ವದಿಂದ ಕಂಡು ಅಮೇರಿಕ ಮತ್ತು ರಶಿಯಗಳು ತಮ್ಮ ರಾಜಕೀಯ ದೃಷ್ಟಿಗಳನ್ನು ಮಾನವೀಯತೆಯ ಗೌರವದಿಂದ ತಿದ್ದಿಕೊಳ್ಳುವಂತೆ ಯತ್ನಿಸಬೇಕು. ಮೂರನೆಯ ಮಹಾಯುದ್ಧವೊಂದು ನಡೆಯುವುದು ನಿಜವಾದರೆ, ಅದರಲ್ಲಿ ಅಮೇರಿಕ ರಶಿಯಗಳಷ್ಟೇ ಅಲ್ಲ, ಜಗತ್ತಿನ ಇತರ ಅನೇಕ ರಾಷ್ಟ್ರಗಳು ಸಂಪೂರ್ಣವಾಗಿ ನಾಶಹೊಂದುವುವು. ಅದುದರಿಂದ ಸರ್. ಎಸ್. ರಾಧಾಕೃಷ್ಣರು ಸೂಚಿಸಿರುವಂತೆ ಅಂತಾರಾಷ್ಟ್ರೀಯ ಪ್ರತಿಷ್ಠೆಯುಳ್ಳ ಪಂಡಿತ ಜವಾಹರಲಾಲ ನೆಹರು, ಮೇಡಂ ಸನ್‌ಯತ್ ಸೇನ್ ಮುಂತಾದವರ ಮಧ್ಯಸ್ಥಿಕೆಯಲ್ಲಿ ರಶಿಯ ಮತ್ತು ಅಮೇರಿಕಗಳು ಅಣುಬಾಂಬು ಮುಂತಾದ ಸರ್ವನಾಶಕ ಶಸ್ತ್ರಗಳು ತಮ್ಮಲ್ಲಿಯೂ ಇತರ ಯುರೋಪಿಯನ್ ರಾಷ್ಟ್ರಗಳಲ್ಲಿಯೂ ಬಹಿಷ್ಕೃತವಾಗುವಂತೆ ಮಾಡುವುದು ಜಗತ್ತಿನ ಹಿತದ ದೃಷ್ಟಿಯಿಂದ ಅತ್ಯಂತ ಅವಶ್ಯಕ.

— ಅರ್ಜುನ

ಇದೀಗ ಭಾರತವು ರಶಿಯ ಅಮೇರಿಕಗಳಲ್ಲಿಯ ವೈಮನಸ್ಯವನ್ನು ನಿವಾರಿಸಲು ಪ್ರಯತ್ನಿಸುತ್ತಿರುವ ಸುದ್ದಿ ಬಂದಿದೆ. ಭಾರತದ ಪ್ರತಿನಿಧಿ ಮಂಡಲಿಯ ಧುರೀಣರಾದ ಸರ್ [illegible] ಅಣುಶಕ್ತಿ [illegible] ಶಕ್ತಿಯ [illegible] ಒಂದು ಯೋಜನೆಯನ್ನು ತಯಾರಿಸಲಿದ್ದಾರೆ. [illegible] ಯೋಜನೆಯಿಂದ ಈ [illegible] ಸಂಭವ [illegible] ಸಂಘದ ಹಲವು ಸದಸ್ಯ ರಾಷ್ಟ್ರಗಳ ಪ್ರತಿನಿಧಿ ಮಂಡಲಿಗಳು ಅಭಿಪ್ರಾಯಪಡುತ್ತಿವೆ. ಇದು ಒಂದು ಸಂತೋಷದ ಸಂಗತಿ.

ಸಮಸ್ತ ಭಾರತ

ಮುಂಬಯಿ

ದಕ್ಷಿಣ ಸಂಸ್ಥಾನ ಜಾಯಿಂಟ ಸ್ಟಾಕ ಬ್ಯಾಂಕುಗಳಲ್ಲಿಯ ಸರಕಾರೀ ಠೇವುಗಳನ್ನು ಮಾರಬಾರದಾಗಿ ಶಿಷ್ಟಮಂಡಳದವರು ಅರ್ಥ ಸಚಿವರನ್ನು ಕೇಳಿಕೊಂಡದ್ದಕ್ಕೆ ಆ ಬಗ್ಗೆ ವಿಚಾರಮಾಡಲಾಗುವದು. ಹಿಂದಿನ ಸರಕಾರೀ ಠೇವುಗಳನ್ನು ಹಾಗೆ ಇಟ್ಟುಕೊಳ್ಳಬಹುದು. ಆದರೆ ವಂದಾಯ ಅಥವಾ ಕರದ ಹಣದ ಹೊಸ ಠೇವುಗಳನ್ನು ಮಾತ್ರ ಇಟ್ಟುಕೊಳ್ಳಲಾಗುವದಿಲ್ಲೆಂದು ತಿಳಿಸಿದ್ದರಲ್ಲದೆ ಬ್ಯಾಂಕುಗಳನ್ನು ಸಹಕಾರೀ ಸಂಘಗಳಂತೆ ಗಣಿಸುವದು ಸಾಧ್ಯವಿಲ್ಲೆಂದೂ ಹಾಗೆ ಮಾಡಬೇಕಾದರೆ ಋಣ ವಿಮೋಚನೆ ಕಾಯದೆಯನ್ನು ತಿದ್ದಬೇಕಾಗುವದೆಂದೂ ಅವರು ಹೇಳಿದರು.

ಪೂರ್ವ ಮುಂಬಯಿಯಲ್ಲಿ ವಾರ್ಡನ್ ರೋಡಿನಲ್ಲಿದ್ದ ಗ್ಯಾರೇಜದಲ್ಲಿ ಬಿಡಲಾಗಿದ್ದ ಏಳು ಮೋಟರುಗಳ ಮೇಲೆ ಮೊನ್ನಿನ ಮ.ಳೆಯಿಂದ ನೆನೆದು ಹೋಗಿದ್ದ ಮನೆಯೊಂದರ ಗೋಡೆ ಬಿದ್ದದ್ದರಿಂದ ಅವೆಲ್ಲ ಮೋಟರುಗಳು ಪುಡಿ ಪುಡಿಯಾದವು. ಗೋಡೆ ಬೀಳುವಾಗ ಬಿದ್ದ ಕಲ್ಲುಗಳಿಂದ ಒಬ್ಬನಿಗೆ ಮಾತ್ರ ಗಾಯವಾಗಿದೆ.

೨೬ ನೇ ತಾರೀಕು ಇರಾಣ ಅಖಾತದಿಂದ ಮುಂಬೈಗೆ ಬಂದಿಳಿದ ೭೫ ಅರಬರಲ್ಲಿ ೪೦ ಅರಬರ ಬಗ್ಗೆ ಸುಂಕದ ಅಧಿಕಾರಿಗಳಿಗೆ ಸಂಶಯ ಬಂದದ್ದರಿಂದ ಅವರ ಅಂಗ ತಪಾಸ ಮಾಡಲು ಯತ್ನಿಸುವಾಗ ಅವರು ಅವರ ಮೈಮೇಲೆ ಏರಿ ಬಂದರು. ಆದರೂ ಅಧಿಕಾರಿಗಳು ಅವರನ್ನು ತಪಾಸು ಮಾಡಲಾಗಿ ಏನೂ ದೊರೆಯಲಿಲ್ಲ. ಆದರೆ ಕ್ಷ ಕಿರಣದ ಸಹಾಯದಿಂದ ಅವರ ದೇಹ ತಪಾಸುಮಾಡಲು ಅನ್ನವಾಹಕ ನಳ್ಳಿಯ ಕೆಳ ತುದಿಯಲ್ಲಿ ರಬ್ಬರಿನ ಚೀಲದಲ್ಲಿ ಬಂಗಾರ ಬಚ್ಚಿಟ್ಟದ್ದು ಗೊತ್ತಾಯಿತು. ಔಡ ಲೆಣ್ಣೆ ಕೊಡಲು ಆ ಚೀಲ ಹೊರಗೆ ಬಂದಿತು. ಅವರು ಬಚ್ಚಿಟ್ಟ ಬಂಗಾರ ೭೦೦೦ ತೊಲಿ ಅಂದರೆ ಸ.ಮಾ.೯ ೮ ಲಕ್ಷ ರೂಪಾಯಿಗಳದ್ದಾಗುವದು.

ಬಡೋದೆಯ ಸಮೀಪದಲ್ಲಿರುವ ಪಾನಿ ಎಂಬ ಹಳ್ಳಿಯಲ್ಲಿ ಪೋಲೀಸರು ಒಂದು ಮನೆಯನ್ನು ಝಡತಿ ಮಾಡಲು ಅಲ್ಲಿ ೨೫೦ ಗ್ಯಾಲನ್ನು ಭಟ್ಟಿ ಸರಾಯಿ ಸಿಕ್ಕಿತು. ೧೪ ಜನರನ್ನು ಈ ಸಂಬಂಧದಲ್ಲಿ ಸೆರೆಹಿಡಿಯಲಾಗಿದೆ.

ಮುಂಬಯಿಯಲ್ಲಿಯ ಪ್ರಸಿದ್ಧ ರಿಜ್ಜ ಎಂಬ ಭೋಜನಾಲಯದ ಡಾಯರೆಕ್ಟರ ರಾಮನಾಥ ರಾಮನಾರಾಯಣ ಕಪೂರ ಇವರು ಆಹಾರ ನಿಯಂತ್ರಣ ಕಾಯದೆಯನ್ನು ಮುರಿದರೆಂದು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅವರಿಗೆ ೪೦ ಸಾವಿರ ರೂಪಾಯಿ ದಂಡ ಮತ್ತು ದಂಡ ಕೊಡದಿದ್ದರೆ ೧೪ ತಿಂಗಳ ಶಿಕ್ಷೆ ಮತ್ತು ೨ ತಿಂಗಳು ಸಶ್ರಮ ಶಿಕ್ಷೆಯನ್ನು ವಿಧಿಸಿದರು. ಮ್ಯಾನೇಜರರಿಗೆ ೨ ತಿಂಗಳ ಸಶ್ರಮ ಶಿಕ್ಷೆ ಮತ್ತು ೨೦ ಸಾವಿರ ರೂ. ದಂಡ ಇಲ್ಲವೆ ೧೨ ತಿಂಗಳ ಶಿಕ್ಷೆ ಮತ್ತು ಆಹಾರ ಬಡಿಸುವ ಪೇದೆಗಳಿಗೆ ಒಂದು ದಿನ ಸಶ್ರಮಶಿಕ್ಷೆ ಮತ್ತು ೧೦೦ ರೂಪಾಯಿ ದಂಡ ಇಲ್ಲವೆ ಒಂದು ತಿಂಗಳು ಕಠಿಣ ಶಿಕ್ಷೆ ವಿಧಿಸಲಾಯಿತು.

ಹುಬ್ಬಳ್ಳಿಯ ಪ್ರಸಿದ್ಧ ಗಾಯಕರಾದ ಶ್ರೀಮತಿ ಗಂಗೂಬಾಯಿ ಹಾನಗಲ್ಲ ಇವರು ಪುಣೆಯಲ್ಲಿ ಕಳೆದವಾರ ಭಾನುವಿಲಾಸ ಥಿಯೇಟರಿನಲ್ಲಿ ಧಾರವಾಡದ ಕೆ. ಈ. ಬೋರ್ಡ ಕಾಲೇಜಿನ ಸಹಾಯಾರ್ಥವಾಗಿ ಸಂಗೀತ ಕಾರ್ಯಕ್ರಮವನ್ನು ಜರುಗಿಸಿದರು. ಜೊತೆಗೆ ಪುಣೆಯ ಪ್ರಸಿದ್ಧ ಸಂಗೀತಜ್ಞ ಶ್ರೀ ಜ್ಯೋತ್ಸ್ನಾ ಭೋಳೆಯವರ ಸಂಗೀತ ಕಚೇರಿ ನಡೆಯಿತು. ಬಂದ ಉತ್ಪನ್ನವನ್ನೆಲ್ಲ ಕಾಲೇಜಿನ ಸಹಾಯಕ್ಕೆ ಕೊಡಲಾಯಿತು. ಥಿಯೇಟರಿನ ಒಡೆಯರು ಕೂಡ ಏನೂ ಹಣ ತೆಗೆದುಕೊಳ್ಳಲಿಲ್ಲ. ಮುಖ್ಯಮಂತ್ರಿ ಖೇರ ಮೊದಲಾದವರು ಬಂದಿದ್ದರು.

ಬರುವ ಡಿಸೆಂಬರದಲ್ಲಿ ಕಲಕತ್ತೆಯಲ್ಲಿ ಕೂಡಲಿರುವ ಹಿಂದೂ ಮಹಾ ಸಭೆಯ ಅಧ್ಯಕ್ಷಸ್ಥಾನ ಸ್ವೀಕರಿಸಲು ಡಾ. ಸಾವರಕರರಿಗೆ ಆಮಂತ್ರಣ ಕೊಡಲಾಗಿದೆ. ಕಾರ್ಯದರ್ಶಿ ಶ್ರೀ ದೇಶಪಾಂಡೆಯವರು ಮುಂಬಯಿಯಲ್ಲಿ ಅವರನ್ನು ಕಂಡು ಈ ಆಮಂತ್ರಣವನ್ನು ಕೊಟ್ಟದ್ದಲ್ಲದೆ ದೇಶದ ಇಂದಿನ ಪರಿಸ್ಥಿತಿಯ ಬಗ್ಗೆ ಅವರೊಡನೆ ವಿಚಾರ ವಿನಿಮಯ ಮಾಡಿದರು.

ಹೊಸದಿಲ್ಲಿ

ರೂಪಾಯಿಗಳ ಬೆಲೆಯನ್ನು ಇಳಿಸಿದ ಕ್ರಿಕೆಯನ್ನು ಕುರಿತು ಚರ್ಚಿಸಲು ಅಕ್ಟೋಬರ ೪ ಕ್ಕೆ ಸಾಯಂಕಾಲ ೬ ಗಂಟೆಗೆ ಒಂದು ಜೋಡಣೆಯಲ್ಲಿಯ ಕಾಂಗ್ರೆಸ ಪಕ್ಷದ ಸಭೆ ಸೇರುವದೆಂದು ಪ್ರಕಟಿಸಿ ಹೊರಟಿದೆ.

ಕಾಯಂ ಆಗದೆ ಇರುವ ರೇಲ್ವೆ ನೌಕರರಿಗೂ ಪ್ರಾವಿಡೆಂಟ ಫಂಡಿನ ನಿಯಮಗಳನ್ನು ರೇಲ್ವೆ ಖಾತೆಯವರು ಸಡಲಿಸಿದ ಪ್ರಕಟನೆ ಹೊರಟಿದೆ. ನೌಕರರ ಸಂಖ್ಯೆ ಕಡಿಮೆ ಮಾಡುವದಕ್ಕಾಗಿ ಕಾಯಂ ಆಗುವ ಮೊದಲೆ ತೆಗೆದರೆ ಇಲ್ಲವೆ ಕಾಯಿಲೆ ಮೂಲಕ ನೌಕರಿಯನ್ನು ಬಿಟ್ಟರೆ ಯಾವನೊಬ್ಬನು ಹಂಗಾಮಿ ನೌಕರನೆಂದು ಎಷ್ಟು ವರುಷ ಕೆಲಸ ಮಾಡಿರುವನೋ ಅಷ್ಟು ವರುಷಗಳ ಬಗ್ಗೆ ಪ್ರತಿ ವರ್ಷಕ್ಕೆ ಅರ್ಧ ತಿಂಗಳಿನ ಸಂಬಳ ಈ ಪ್ರಮಾಣದಲ್ಲಿ ಗ್ರಾಚ್ಯುಟಿಯನ್ನು ಕೊಡಲಾಗುವದು.

ತಿರುವಾಂಕೂರು ಮಹಾರಾಜರ ಖಾಸಗಿ ವೆಚ್ಚಕ್ಕಾಗಿ ವರ್ಷಕ್ಕೆ ೧೮ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಿರ್ಧಾರವಾಗಿದೆಯೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ತಿರುವಾಂಕೂರು ಕೊಚ್ಚಿ ಒಕ್ಕೂಟದ ರಾಜಪ್ರಮುಖರೆಂದು ಅವರಿಗೆ ಇನ್ನು ಮೂರು ಲಕ್ಷ ರೂಪಾಯಿ ಪ್ರತಿ ವರ್ಷ ದೊರೆಯುವವು. ಕೊಚ್ಚಿ ಮಹಾರಾಜರು ಮತ್ತು ಅವರ ಮನೆತನದವರ ಖಾಸಗಿ ವೆಚ್ಚಕ್ಕಾಗಿ ವರ್ಷಕ್ಕೆ ೧೪ ಲಕ್ಷ ರೂಪಾಯಿ ಕೊಡಬೇಕೆಂದು ಗೊತ್ತಾಗಿದೆ.

ಮದ್ರಾಸ

ಮದರಾಸದಲ್ಲಿ ಸ್ಥಾಪಿತವಾಗುವ ೨ ಸಾಯಕಲ್ ಕಂಪನಿಗಳು ಪ್ರಾರಂಭದಲ್ಲಿ ವಿದೇಶಗಳಿಂದ ಬಿಡಿ ಭಾಗಗಳನ್ನು ಜೋಡಿಸಲಿದ್ದು ಮುಂದೆಲ್ಲ ಭಾಗಗಳನ್ನು ಸ್ವತಃ ತಯಾರಿಸುವರು ಇನ್ನೆರಡು ವರುಷಗಳಲ್ಲಿ . ಸಾಯಕಲ್ ತಯಾರಿಕೆಯನ್ನು ಪ್ರಾರಂಭಿಸಿ ವರ್ಷಕ್ಕೆ ಎರಡು ಲಕ್ಷ ಸಾಯಕಲ್ಲುಗಳನ್ನು ತಯಾರಿಸಲಾಗುವದು. ಕಲಕತ್ತೆಯಲ್ಲಿಯೂ ಒಂದು ಸಾಯಕಲ್ ಕಂಪನಿ ಪ್ರಾರಂಭವಾಗಲಿದೆ.

ಹೈದರಾಬಾದ-ಸಿಕಂದರಾಬಾದಗಳು ಹೊಸ ಆಂಧ್ರ ಪ್ರಾಂತದ ರಾಜಧಾನಿಯಾಗಲಿ ಎಂಬ ಗೊತ್ತುವಳಿಯನ್ನು ಮದರಾಸ ಶಾಸನ ಸಭೆಯ ಆಂಧ್ರದ ಕಾಂಗ್ರೆಸ ಸದಸ್ಯರಾದ ಕೆ. ಬ್ರಹ್ಮಾನಂದ ರೆಡ್ಡಿಯವರು ಮುಂದಿನ ಅಧಿವೇಶನದಲ್ಲಿ ತರುವದಾಗಿ ನೋಟೀಸು ಕೊಟ್ಟಿರುವರು. ಮದರಾಸದಲ್ಲಿನ ೧೧ ಜಿಲ್ಹೆಗಳು ಹೈದರಾಬಾದದಲ್ಲಿನ ತೆಲಂಗಣದ ಪೂರ್ಣ ಪ್ರದೇಶವನ್ನು ಕೂಡಿಸಿ ಹೊಸ ಆಂಧ್ರ ಪ್ರಾಂತ ರಚಿಸಿ ಹೈದರಾಬಾದ ಸಿಕಂದರಾಬಾದುಗಳನ್ನು ಅದರ ರಾಜಧಾನಿ ಮಾಡಬೇಕೆಂದು ಗೊತ್ತುವಳಿಯ ಆಶಯ.

ಮದರಾಸ ಟ್ರಿಪ್ಲಿಕೇನ ಸಮುದ್ರ ದಂಡೆಯ ಮೇಲೆ ೭೯ ಅಡಿಯ ಮತ್ತು ಸ್ನಾನದ ಘಾಟನ್ನು ಮಹಾತ್ಮಾ ಗಾಂಧಿಯವರ ಸ್ಮಾರಕವೆಂದು ಕಟ್ಟಿಸಬೇಕೆಂದು ಗೊತ್ತಾಗಿದ್ದು ಸರಕಾರದವರು ಮತ್ತು ಸಾರ್ವಜನಿಕರು ಕೂಡಿಯೆ ಈ ಯೋಜನೆಯನ್ನು ಕಾರ್ಯಕಾರಿ ಮಾಡುವರು.

(೧೦ ನೇ ಪುಟದಿಂದ ಬಂದುದು)

ತೆಂದು ದೂರಿದುವುದನ್ನು ಕೇಳಿದರೆ ಸ್ವಾಭಾವಿಕವಾಗಿ ಅವರು ಅತ್ತ ಲಕ್ಷ್ಯಹಾಕುವುದೇ ಇಲ್ಲ.

ಇನ್ನು ನಿಯಂತ್ರಣಗಳ ಕಡೆ ತಿರುಗಿದರೆ, ಅವರ ಅನೇಕವರ್ಷಗಳ ಅನುಭವವು-ನಿಯಂತ್ರಣಗಳ ಪರಿಸ್ಥಿತಿಯನ್ನು ಸುಧಾರಿಸಿಲ್ಲ, ಅವು ಸಂಪೂರ್ಣವಾಗಿ ವ್ಯರ್ಥ-ಎಂಬುದನ್ನು ನಮಗೆ ಕಲಿಸಿದೆ. ಅವುಗಳಿಂದ ಅನುಕೂಲವಾಗುವುದಲ್ಲಿರಲಿ, ಆಗಲೇ ಜನರಿಗಿದ್ದ ಕಷ್ಟಪರಂಪರೆಯನ್ನು ಮತ್ತಷ್ಟು ಹೆಚ್ಚಿಸಿ ಅನೇಕ ತೊಂದರೆ ತಾಪತ್ರಯಗಳನ್ನು ಅವು ಅವರಿಗೆ ತಂದೊಡ್ಡಿವೆ.

ಈ ನಿಯಂತ್ರಣಗಳನ್ನು ತೆಗೆದುಹಾಕಬೇಕು. ಸರಕಾರಗಳ ವಿವಿಧ ಖಾತೆಗಳನ್ನು ನಡೆಸಲು ಬೇಕಾಗಿರುವ ಖರ್ಚನ್ನು ಕಡಿಮೆ ಮಾಡಿ ಸಾಮಾನ್ಯನು ಹೊರುತ್ತಿರುವ ಕರಭಾರವನ್ನು ಇಳಿಸುವದು ಅವಶ್ಯಕ. ಹೀಗೆ ಪರಿಸ್ಥಿತಿಯು ನಿಯಂತ್ರಣದಿಂದ ಮುಕ್ತವಾದ ಕೂಡಲೆ ಜನರು ಕಾಯದೆಗೆ ವಿರುದ್ಧವಾದ ರೀತಿಯಲ್ಲಿ ಹಣಗಳಿಸಹೋಗರು, ಮನುಷ್ಯರು ಹೆಚ್ಚು ಸಹಜವಾಗಿ ಬಾಳುವರು.

— ಸಾಮಾನ್ಯ ನಾಗರಿಕ

(ಗುಜರಾತಿಯಿಂದ ಭಾಷಾಂತರಿಸಿದ್ದು)

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

	ತಾ. ೨೯
ಮುಂಬಯಿ ಡಾಯಿಂಗ್	೧೬೩೦-೪-೦
ಕೊಹಿನೂರು	೨೮೯-೮-೦
ಸ್ವದೇಶಿ	೨೬೩-೮-೦
ಗೋಕಾಕ	೨೬೫-೮-೦
ಕಿಂಜಾರ	೨೭೦-೭-೦
ಸಿಂಧ್ಯಾ	೧೯೬-೮-೦
ಕೊಲ್ಲಾಬಾ	೪೦೦೦-೦-೦
ಸೆಂಟ್ರಲ್ ಇಂಡಿಯಾ	೨೦೯-೦-೦
ಟಾಟಾ ಸ್ಟೀಲ ಡೆಫರ್	೧೯೦೫-೦-೦
ಇಂಡಿಯನ್ ಆಯರ್ನ	೩೧-೦-೦
ಅಸೋ. ಸಿಮೆಂಟ್ಸ	೧೯೩-೦-೦
ಸೆಂಟ್ರಲ ಬ್ಯಾಂಕ	೭೯-೪-೦
ಇಂಪೀರಿಯಲ್ (ಪೂರ್ಣ) ಬ್ಯಾಂಕ ಆಫ್ ಇಂಡಿಯಾ	೧೩೩೦-೦-೦ ೧೬೩.೪.
ನ್ಯೂ ಇಂಡಿಯಾ ಇನ್ಸೂರೆನ್ಸ	೩೦.೪.೦
ಸಿಂಧ್ಯಾ ಸ್ಟೀಮ್	೯೫-೦೭-೦

ಚಿನ್ನ ಬೆಳ್ಳಿ

	ತಾ. ೩೦
ತಯಾರಿ ಬೆಳ್ಳಿ	೧೬೫-೮-೦
ತಯಾರಿ ಚಿನ್ನ	೧೦೭-೬-೦
ಸಾವರಿನ್	—

ಅರಳೆ

	ತಾ. ೨೯
ತಯಾರಿ	೬೨೯-೪-೦

ಎಣ್ಣೆಕಾಳು

ಶೇಂಗಾ	೨೨೫-೦-೦

ಶಿವಮೊಗ್ಗೆ ಅಡಿಕೆ ಪೇಟೆ

ತಾ. ೨೭

ಶಿವಮೊಗ್ಗೆ ಪೇಟೆಯಲ್ಲಿ ಅಡಿಕೆ ಧಾರಣೆ ಮಣ ಒಂದರ ಈ ರೀತಿ ಇದೆ:—

ದೇಶಾವರ ನಂ. ೧	೩೨-೩೫
,, ೨	೩೦-೩೨
ನಂ. ೩	೨೮-೩೦
ಕೊರಸಾಲು	೨೬-೩೦
ರಾಜಾ ಅಲವು	೨೮-೩೨
ನುಲಿ	೩೦-೩೩
ಪೆಟಿನ್	೩೨-೩೪
ಬೆಟ್ಟವಂತಿ	೨೦-೨೨
ಬೆಟ್ಟ	೧೮-೨೦

ಬೇಡಿಕೆ ಚನ್ನಾಗಿದೆ.

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ)

ತಾ. ೩೦

“ಮಹಾನವಮಿ” ಹಬ್ಬದ ನಿಮಿತ್ಯವಾಗಿ ಇಂದು ಹತ್ತಿ ಅರಳೆ ಪೇಟೆಯು ಮುಚ್ಚಿದೆ.

ಕುಸುಬಿ (ಬ. ಮಣಕ್ಕೆ)	೧೫-೧೨	೦ ೧೬-೨-೦
ಅಗಸಿ (ಚೀಲಕ್ಕೆ)	೪೪-೦-೦	೪೫-೦-೦
ಔಡಲ ,,	೩೪-೦-೦	೩೬-೦-೦
ಜ. ಹೆಸರು ,,	೪೨-೦-೦	೪೪-೦-೦
ಕರಿ ಎಳ್ಳು ,,	೬೪-೦-೦	೬೮-೦-೦
ಬಿಳಿ ಎಳ್ಳು ,,	೮೮-೦-೦	೯೦-೦-೦
ಕಡಲೆ ,,	೫೪-೦-೦	೫೫-೦-೦
ಉದ್ದು ,,		೪೨-೦-೦
ಜ. ತೊಗರಿ ,,	೩೦-೦-೦	೩೨-೦-೦
ಹುರಳಿ ,,	೩೨-೦-೦	೩೩-೦-೦
ಕೆಂ. ಅಲಸಂದಿ ,,	೫೦-೦-೦	೫೩-೦-೦
ಬಿ. ಅಲಸಂದಿ ,,	೪೪-೦-೦	೪೭-೦-೦
ಬೆಲ್ಲ (ಹೇರಿಗೆ ೮ ಮಣ)	೬೪-೦-೦	೬೬-೦-೦
ಹೊಸ ಶೇಂಗಾ	೩೦-೦-೦	೩೬-೦-೦
ಶೇಂಗಾ ಕಾಳು	೬೮-೦-೦	೭೦-೦-೦
ಹೊಸ ಶೇಂಗಾ ಕಾಳು	೬೦-೦-೦	೬೪-೦-೦

ಕರ್ನಾಟಕದಲ್ಲಿ

ಧಾರವಾಡ

ಘಟನಾಸಮಿತಿಯ ಸದಸ್ಯರಾದ ಶ್ರೀ ಮುನವಳ್ಳಿಯವರು ೨೭ ಕ್ಕೆ ಹುಬ್ಬಳ್ಳಿ ನಾಡಹಬ್ಬದ ಕಾರ್ಯಕ್ರಮದಲ್ಲಿ ಭಾಷಣ ಮಾಡುತ್ತ ಭಾರತದ ಭಾವೀ ರಾಜ್ಯಘಟನೆಯಲ್ಲಿ ಕರ್ನಾಟಕ ಪ್ರಾಂತದ ನಾಮನಿರ್ದೇಶವಾಗಬೇಕೆಂದೂ ಇಲ್ಲದಿದ್ದರೆ ಅಹಿಂಸಾತ್ಮಕ ಸತ್ಯಾಗ್ರಹದ ದಳವಳಿಯನ್ನು ಕನ್ನಡಿಗರು ಹೂಡಬೇಕೆಂದೂ ಅಭಿಪ್ರಾಯಪಟ್ಟರು.

ರಾಜೆಬಿನ್ನೂರಿನ ಅ. ಸ್ಪೇಶನ ಮಾಸ್ತರ ಶ್ರೀ ಪರಾಹಮೂರ್ತಿಯವರ ಮೇಲೆ ಹಾಕಿದ್ದ ಲಂಚದ ಪ್ರಕರಣದಲ್ಲಿ ಹುಬ್ಬಳ್ಳಿಯ ಸ್ಪೇಶಲ್ ಮ್ಯಾಜಿಸ್ಟ್ರೇಟರು ಪುರಾವೆಗಳಿಲ್ಲೆಂದು ಅವರ ಬಿಡುಗಡೆ ಮಾಡಿದರು.

ಗದುಗಿನ ಎಸ್. ಸಿ. ಮಿಲ್ಲು ಮುಚ್ಚಲ್ಪಟ್ಟದ್ದರಿಂದ ೧೩೦೦ ಕೂಲಿಕಾರರು ಹಾಗು ಅವರ ಕುಟುಂಬದವರು ಬಹಳ ಕಷ್ಟನಷ್ಟಗಳಿಗೆ ಒಳಗಾಗಿರುವರು. ಆದುದರಿಂದ ಸರಕಾರದವರು ಈ ಗಿರಣಿಯು ತೀವ್ರವೆ ಪ್ರಾರಂಭವಾಗುವಂತೆ ನೋಡಿಕೊಳ್ಳಬೇಕು ಇಲ್ಲವೆ ಅದನ್ನು ತಾವೇ ವಶಪಡಿಸಿಕೊಂಡು ಸುರು ಮಾಡಬೇಕು ಎಂಬಾಶಯದ ಗೊತ್ತುವಳಿ ಗದಗ ತಾಲೂಕ ಕಾಂಗ್ರೆಸ ಸಮಿತಿಯ ಸಭೆಯಲ್ಲಿ ಸ್ವೀಕೃತವಾಗಿದೆ.

ಗದಗ ನಗರಸಭೆಯ ಗೌರವ ಡಾಕ್ಟರರಾಗಿದ್ದ ಜಿ. ನಾಯಿ ಪಾಟೀಲರವರು ಸರ್ಟಿಫಿಕೇಟು ಕೊಡುವಾಗ ೭೫ ರೂ. ತೆಗೆದುಕೊಂಡರೆಂದು ಲಂಚ ನಿರ್ಮೂಲನ ಶಾಖೆಯವರು ಹಾಕಿದ ಖಟ್ಲೆಯಲ್ಲಿ ಸರಕಾರದವರು ಹಾಯ ಕೋರ್ಟಿಗೆ ಮಾಡಿದ ಅಪೀಲಿನಲ್ಲಿ ಕೆಳ ಕೋರ್ಟಿನ ನಿರ್ಣಯ ಎತ್ತಿ ಹಿಡಿಯಲ್ಪಟ್ಟು ಅವರು ನಿರ್ದೋಷಿಗಳೆಂದು ಸಾರಲಾಯಿತು.

ಹುಬ್ಬಳ್ಳಿಯ ಪ್ರಮುಖ ಜವಳಿ ವ್ಯಾಪಾರಸ್ಥರಾದ ಶ್ರೀ ಫಕೀರಸಾ ಭೋಜಾಸಾ ಹಬೀಬ ಇವರು ೨೧ ನೇ ತಾರೀಕು ರಾತ್ರಿ ಆಕಸ್ಮಿಕವಾಗಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕಳೆದ ನವಂಬರದಲ್ಲಿ ತಡಕೋಡದಲ್ಲಿ ಸಂಭವಿಸಿದ ಶ್ರೀ ಗುಡ್ಡೋ ಲಿಂಗೋ ದೇಶಪಾಂಡೆಯವರ ಕೊಲೆಯ ಆಪಾದನೆಯ ಬಗ್ಗೆ ಶ್ರೀ ರಾಯನಗೌಡ ಲಿಂಗನಗೌಡ ಮೊದಲಾದ ೭ ಜನರ ಮೇಲೆ ನಡೆದ ಖಟ್ಲೆಯಲ್ಲಿ ಸೆಶನ್ಸ ಜಜ್ಜರಾದ ಶ್ರೀ ಶಿಂದೆಯವರು ಎಲ್ಲರನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದರು.

ಉದಗಟ್ಟಿಯಲ್ಲಿ ಕಳೆದ ವಾರ ಶಿವಬಸಯ್ಯಾ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಮೆಣ್ಸೇರಿ ವೀರ ಪುಲಕೇಶಿ ಸಾಮಾಜಿಕ ಶಿಕ್ಷಣ ಸಮಿತಿಯ ಸಂಚಾಲಕರಾದ ಶ್ರೀ. ಎಂ. ಎಂ. ದೇವರಗುಡ್ಡ ಇವರು ಸಾಮಾಜಿಕ ಶಿಕ್ಷಣದ ಬಗ್ಗೆ ಭಾಷಣ ಮಾಡಿದರು. ಸಭೆಯಲ್ಲಿಯ ೩೦ ಜನ ಪ್ರೌಢರು ಶಾಲೆಗೆ ಬರಲು ಹೆಸರು ಕೊಟ್ಟರು. ಶ್ರೀ. ದೇವರಗುಡ್ಡ ಇವರಿಂದ ವರ್ಗದ ಪ್ರಾರಂಭೋತ್ಸವ ಜರುಗಿತು.

ಬಳ್ಳಾರಿ

ಬಳ್ಳಾರಿ ಮುನಸಿಪಲ್ ಹೈಸ್ಕೂಲಿನ ನಿವೃತ್ತ ಮುಖ್ಯಾಧ್ಯಾಪಕ ಶ್ರೀ ಕೆ. ಎಸ್. ಬೇಡಾಂಕರ ಇವರು ಹೃದಯ ಕ್ರಿಯೆ ನಿಂತು ೨೫ ಮಧ್ಯಾಹ್ನ ವಯಸ್ಸಿನ ೫೮ ನೇ ವರುಷದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಬಡವಿದ್ಯಾರ್ಥಿಗಳಿಗೆ ಇವರು ಬಹಳ ಸಹಾಯಮಾಡುತ್ತಿದ್ದರು. ಮಹಾತ್ಮಾಜೀ ಗಾಂಧಿಸ್ಮಾರಕನಿಧಿಗೆ ಒಂದು ಲಕ್ಷರೂಪಾಯಿ ದಾನ ಪಡೆದು ಹಾಸ್ಟೆಲ ನಿರ್ಮಾಣಕಾರ್ಯದಲ್ಲಿ ಇವರು ಉತ್ಸುಕರಾಗಿದ್ದರು.

ಕಳೆದ ೧೯ ರಿಂದ ೨೩ ರ ವರೆಗೆ ಆದವಾನಿ ತಾಲೂಕಿನ ದೊಡ್ಡ ಹರಿಜನ ಗ್ರಾಮದಲ್ಲಿ ಹುಲಿ ಒಂದೆರೆ ಸವನೆ ಬಿದ್ದದ್ದರಿಂದ ಸೂರಕ್ಕೆ ೭೫ ರಷ್ಟು ಗುಡಿಸಲು ಬಿದ್ದಿವೆ. ಗ್ರಾಮದ ಮುಂಗಾರಿ ಬೆಳೆ ಬೇರುಸಹಿತ ನೆಲಕ್ಕೆ ಬಿದ್ದಿದೆ. ಸರಕಾರದವರು ಕೂಡಲೆ ಅವಗಿಸಬೇಕೆಂದು ಸರಕಾರದವರು ಗೊತ್ತುಪಡಿ ಮೂಲಕ ಬಿನ್ನವಿಸಿಕೊಳ್ಳಲಾಗಿದೆ.

ಬೆಳಗಾವಿ

[illegible] ಕೂಲಿಕಾರ ಮುಂದಾಳು ಗಳಾದ ಎಸ್. ... ಶ್ರೀ ಪಾಂಗರೆ, ಇದರಲ್ಲಿ ... ಮುತ್ತು ... ಶ್ರೀ ಶಂಕರ ... ಬೆಳಗಾವಿಯ ... ಕೊಟ್ಟಿದ್ದಾರೆ ... [illegible]

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಆಹಾರ ಸಮಿತಿಯ ಸಭೆ ದಿನಾಂಕ ೨೩ ರಂದು ಕಲೆಕ್ಟರರ ಕಚೇರಿಯಲ್ಲಿ ಜರುಗಿತು. ಆಗ ಜಿಲ್ಲಾ ಸಪ್ಲೈ ಅಧಿಕಾರಿಗಳು ಜಿಲ್ಲೆಯ ಆಹಾರ ಧಾನ್ಯಗಳ ಪರಿಸ್ಥಿತಿಯನ್ನು ವಿವರಿಸಿದರು. ಈಗ ಜಿಲ್ಲೆಯ ಸಂಗ್ರಹದಲ್ಲಿ ೫೫೦೦ ಟನ್ ಅಕ್ಕಿಭತ್ತ, ೫೧೨ ಟನ್ ಗೋದಿ ಮತ್ತು ೧೦೦ ಟನ್ ಇತರ ಧಾನ್ಯಗಳಿವೆ. ಮುಂದಿನ ಫಸಲು ಕೈಸೇರುವ ವರೆಗೆ ಕಡಿಮೆಯುಂದರೆ ೩೦೦೦ ಟನ್ ಆಹಾರ ಬೇಕಾದೀತು. ಅದನ್ನು ಕೂಡಲೆ ಕಳುಹಿಸಬೇಕೆಂದು ಸರಕಾರವನ್ನು ಕೇಳಲಾಯಿತು. ಬಳಿಕ ಜಿಲ್ಲೆಗೆ ಒಂದು ತಿಂಗಳಿಗೆ ಅವಲಕ್ಕಿಗಾಗಿ ಸರಕಾರವು ಕೊಟ್ಟ ೧೦೦ ಟನ್ನು ಭತ್ತವನ್ನು ಬೇರೆ ಬೇರೆ ತಾಲೂಕುಗಳಿಗೆ ಹಂಚಲಾಯಿತು.

ಮಂಗಳೂರು ಪೋಲೀಸ್ ಸರ್ಕಲಿನೊಳಗೆ ದಸರಾಕಾಲದಲ್ಲಿ ದಿನಾಂಕ ೨೩ ರಿಂದ ೩ ರ ವರೆಗೆ ಯಾವ ದೇವಸ್ಥಾನವೇ ಮುಂತಾದ ಸಂಸ್ಥೆಗಳು ವೇಷಹಾಕುವದು, ಮೆರವಣಿಗೆ ತೆಗೆಯುವುದು ಮುಂತಾದ ಕಾರ್ಯಕ್ರಮ ಮಾಡಲಾಗದೆಂದು ಪೋಲೀಸರು ನಿರ್ಬಂಧ ಕಾಜ್ಞೆ ಹೊರಡಿಸಿದ್ದಾರೆ, ಧಾರ್ಮಿಕ ಸಂಸ್ಥೆಗಳಿಗೂ ಸಾರ್ವಜನಿಕರ ನೆಮ್ಮದಿಗೂ ಗಂಡಾಂತರವಿರುವ ಸಂಭವವಿರುವುದರಿಂದ ಹಾಗೆ ಮಾಡಲಾಗಿದೆ.

ಉಳ್ಳಾಲದ ಕೊಕೊಟ್ಟು ಎಂಬಲ್ಲಿ ದಿನಾಂಕ ೧೮ ರಂದು ಜೇಗ್ಗ ಸಮಾಜವಾದಿಗಳ ನೇತೃತ್ವದಲ್ಲಿ ರೈತರ ಸಾರ್ವಜನಿಕ ಸಭೆಯೊಂದು ಜರುಗಿತು. ಶ್ರೀ ಕಾಟಿಂಗ್ಯೆನ ರಾಘವೇಂದ್ರ ರಾಯರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಡಿಮೆಲ್ಲೋ, ದಿನಕರ ದೇಸಾಯಿ ಮುಂತಾದವರ ಭಾಷಣಗಳಾದುವು.

ಉಡುಪಿಗೆ ದಿನಾಂಕ ೧೭ ರಂದು ಮದ್ರಾಸು ಮಂತ್ರಿ ಮಾನ್ಯ ಭಕ್ತವತ್ಸಲಂ ಅವರು ಬಂದಾಗ ಅಧಿಕಾರಿಗಳೂ ನಾಗರಿಕರೂ ಅವರನ್ನು ಸ್ವಾಗತಿಸಿದರು. ಉಡುಪಿ ಸರ್ಕಲ್ ಕಾಂಗ್ರೆಸ್ಸಿನ ಪರವಾಗಿ ಅವರಿಗೊಂದು ಬಿನ್ನವತ್ತಳೆ ಸಮರ್ಪಿಸಲಾಯಿತು. ಅದರಲ್ಲಿ ಆಗುಂಬೆ ಘಾಟರಸ್ತೆಯ ದುರಸ್ತಿ, ಮತ್ತಿಗೆ ಹೊಳೆಗೆ ಸೇತುವೆ, ಮಲ್ಪೆ ಪ್ರಬುದ್ಧ ಬಂದರಾಗಲು ಪ್ರೋತ್ಸಾಹ ಇತ್ಯಾದಿ ಕೇಳಿಕೆಗಳಿದ್ದುವು. ಮಂತ್ರಿಗಳು ಉತ್ತರದಲ್ಲಿಯೂ ಮಲ್ಪೆಗಾಗಲಿ ಮಂಗಳೂರಿಗಾಗಲಿ ಪ್ರಬುದ್ಧ ಬಂದರು ಬರುವುದು ನನಗೆ ಸಂಶಯದ ವೆಂದರು.

ದಿನಾಂಕ ೨೧ ರಂದು ಆರ್. ಎಸ್. ಎಸ್. ಸಂಘದ ಕರ್ನಾಟಕ ಸರ್ ಸಂಚಾಲಕ ಯಾದವರಾವ್ ಜೋಶಿಯವರು ಹುಬ್ಬಳ್ಳಿಗಾಗಿ ಮಂಗಳೂರಿಗೆ ಬಂದಿದ್ದರು. ಮೋಟರ್ ನಿಲ್ದಾಣದಲ್ಲಿ ಅವರನ್ನು ಆರ್. ಎಸ್. ಎಸ್. ಸಂಘದವರು ಸ್ವಾಗತಿಸಿದರು ಶ್ರೀಯುತರು ಜಿಲ್ಲೆಯಲ್ಲಿ ಪ್ರವಾಸಮಾಡುತಿದ್ದಾರೆ.

೨೫ ನೇ ತಾರೀಕು ಮುರವಂತೆ ವಾಚನಾಲಯದ ಸಾರ್ವಜನಿಕ ಸಭೆ ಶ್ರೀ ಯಂ. ನಾಗಪ್ಪಯ್ಯ ಕ್ಯಾನಭಾಗರ ಅಧ್ಯಕ್ಷತೆಯಲ್ಲಿ ಜರುಗಿತು; ಮಂಜುನಾಥ ಕ್ಯಾನುಭಾಗರು, ಶ್ರೀ ಯು ಕೊರಗಪ್ಪನವರು ಸಹಕಾರದ ಆವಶ್ಯಕತೆಗಳನ್ನು ಕುರಿತು ಮಾತಾಡಿದರು. ಶ್ರೀ ನರಸಿಂಹ ಭಾಗವತರು ತಮ್ಮ ಅಪೂರ್ವ ಯಕ್ಷಗಾನ ಪ್ರತಿಭೆಯನ್ನು ಪ್ರದರ್ಶಿಸಿದರು. ಅಧ್ಯಕ್ಷರ ಸಮಾರೋಪದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ವಿಜಾಪುರ

ದೀಪಳಿಗೆ ಹೀಕಾದಲ್ಲಿ ೧೯ ರಿಂದ ೨೩ ರ ವರೆಗೆ ಬಿದ್ದ ಭಯಂಕರ ಮಳೆ ಹಾಗು ಬಿರುಗಾಳಿಯ ಪರಿಣಾಮವಾಗಿ ತುಂಬ ಹಾರದಷ್ಟು ಹಾನಿಯಾಗಿದೆ. ಹೀಕಾದಲ್ಲೆಲ್ಲ ೧೫೦ ಕ್ಕೆ ೮೦-೫೦ ರಷ್ಟು ಗುಡಿಸಲು ಬಿದ್ದು ಹೋಗಿ ಅತ್ಯಂತ ಜಾಜನಕ ಪರಿಸ್ಥಿತಿಯುಂಟಾಗಿದೆ. ಜನರು ಬಳಿ ಗುಟ್ಟಿಗೆ ಗುಡಿಗುಂಡಾರಗಳಲ್ಲಿ ಆಶ್ರಯ ಪಡೆದಿದ್ದಾರೆ. ಪಸಕರ ಗಳಿಗೆ ಹಾನಿಯಾಗಿದೆ.

ವಿಜಾಪುರ ಜಿಲ್ಲೆಯಲ್ಲಿ ಮಳೆಯ ಅನರ್ಥವನ್ನು ಪ್ರತ್ಯಕ್ಷವಾಗಿ ತಿಳಿದುಕೊಂಡು ಪರಿಹಾರೋಪಾಯಗಳನ್ನು ಕುರಿತು ವಿಚಾರ ಮಾಡಲೆಂದು ಒಬ್ಬರು ಉಪಮಂತ್ರಿ ಶ್ರೀ ಕಂಠಿಯವರು ಬಂದಿದ್ದಾರೆ. ದಕ್ಷಿಣ ಭಾಗದ ಕಮೀಶನರರೂ ಬಂದಿರುವರು.

ಉತ್ತರ ಕನ್ನಡ

ದೊಡ್ಡಮನೆಯಲ್ಲಿ ೨೫ ನೇ ತಾರೀಕು ಹರಿಜನ ದಿನವನ್ನಾಚರಿಸಲಾಯಿತು. ಅಂದು ಊರ ಹಿರಿಯರು ಶಾಲಾಶಿಕ್ಷಕರು ಬಾಲಕರು ಮೆರವಣಿಗೆ ಹೋಗಿಬಂದು ಶ್ರೀ ತಿಮ್ಮಣ್ಣ ವಿಘ್ನೇಶ್ವರ ಭಟ್ಟ ಸಾರಂಗ ಇವರ ಹಸ್ತದಿಂದ ದೇವಸ್ಥಾನದ ಎದುರಿಗೆ ಬಿಳೀ ಹಲಗೆಹಣ್ಣಿನ ವೃಕ್ಷಾರೋಪಣವನ್ನು ಮಾಡಲಾಯಿತು. ಮಧ್ಯಾಹ್ನದ ಸಭೆಗೂಡಿ ಮದ್ಯಪಾನ ನಿಷೇಧದ ಬಗ್ಗೆ ಭಾಷಣಗಳಾದವು. ರಾತ್ರಿ ಕೃಷ್ಣ ಸಂಧಾನವೆಂಬ ಯಕ್ಷಗಾನ ಪ್ರಸಂಗವನ್ನು ಹರಿಜನರೊಂದಿಗೆ ಮಾಡಲಾಯಿತು.

ಶಿರ್ಸಿ ತಾಲೂಕಿನ ಗಡಿಹಳ್ಳಿ, ಕಾಗೆರಿ, ಕೆರೆಕೊಪ್ಪ ಈ ಮೂರು ಗ್ರಾಮಗಳ ಬಗ್ಗೆ ಗಡಿಹಳ್ಳಿಯಲ್ಲಿ ಒಂದು ಗಾಮಠಿ ಶಾಲೆಯನ್ನು ತೆರೆಯಲಾಯಿತು. ಇದರಲ್ಲಿ ೩೫ ವಿದ್ಯಾರ್ಥಿಗಳು ಇರುವರು. ಈ ಬಗ್ಗೆ ಪಂಚರನ್ನು ನೇಮಿಸಲಾಯಿತು ನರಸಿಂಹ ವೆಂಕಟರಮಣ ಹೆಗಡೆ ಗಡಿಹಳ್ಳಿ ಪಟೀಲ ಇವರು ಚೇರಮನ್‌ರು.

ಕನ್ನಡ ಸಂಸ್ಥಾನ

ಅ. ಭಾ. ಸಾಮ್ಯವಾದಿ ಪಕ್ಷದ ರಾಷ್ಟ್ರೀಯ ಕಾರ್ಯಸಮಿತಿಯು ಬೆಂಗಳೂರಿನಲ್ಲಿ ಸಭೆಸೇರಿ ಪಕ್ಷದ ಸಂಘಟನೆ ಪಕ್ಷದ ಸಾಹಿತ್ಯ ಮತ್ತು ವೃತ್ತಪತ್ರಗಳ ವಿಧಾಯಕ ಕಾರ್ಯಕ್ರಮ ಮತ್ತು ಸಹಕಾರ ನಿರಾಶ್ರಿತರು ವಿದೇಶ ಧೋರಣ ಮಹಿಳೆಯರಲ್ಲಿ ಸಂಘಟನಾ ಕಾರ್ಯ ಈ ಪ್ರಶ್ನೆಗಳನ್ನು ವಿಚಾರಿಸಲು ಉಪ ಸಮಿತಿಗಳನ್ನು ನೇಮಿಸಲಾಯಿತು. ಅಕ್ಟೋಬರದಲ್ಲಿ ಪ್ರಾಂತಿಕ ಕಾರ್ಯದರ್ಶಿಗಳ ಸಭೆಯನ್ನು ಅಧಿವೇಶನದ ನಂತರ ಮುಂಬಯಿಯಲ್ಲಿ ಸೇರಿಸಬೇಕೆಂದು ನಿರ್ಣಯಿಸಲಾಯಿತು.

ಶಿವಮೊಗ್ಗಿಯ ಸುಪ್ರಸಿದ್ಧ ಅಡಿಕೆ ವ್ಯಾಪಾರಸ್ಥರೂ ಪ್ರಜಾಪ್ರತಿನಿಧಿ ಸಭೆಯ ಹಿಂದಿನ ಸದಸ್ಯರೂ ಆಗಿದ್ದ ಶ್ರೀ ದೇವಂಗಿ ರಾಮಣ್ಣ ಗೌಡ ಅವರು ಕಳದವಾರ ವಯಸ್ಸಿನ ೬೦ ನೇ ವರ್ಷದಲ್ಲಿ ಮರಣ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಸಾಮಾಜಿಕ ಸುಧಾರಣೆ ಅಸ್ಪೃಶ್ಯತಾ ನಿವಾರಣೆ ಪಾನ ನಿರೋಧ ಕಾರ್ಯಗಳಿಂದ ಎಲ್ಲರ ಮೆಚ್ಚಿಗೆಗೆ ಪಾತ್ರರಾಗಿದ್ದರು.

ಕಲೆಯೆಂದರೇನು

(೯ನೆಯ ಪುಟದಿಂದ)

ಗಳೇ ಸಾಮಗ್ರಿಗಳು. ತನ್ನ ಈ ಸಾಧನಗಳನ್ನು ಮನುಷ್ಯನ ಸೌಂದರ್ಯರುಚಿಯನ್ನು ಎಚ್ಚರಿಸಿ ಅವನಲ್ಲಿ ಸೌಂದರ್ಯಬೋಧವನ್ನುಂಟುಮಾಡಲು ರೂಪಗಳ ನಿರ್ಮಾಣದಲ್ಲಿ ಚಿತ್ರಕಾರನು ಹೇಗೆ ಬಳಸಿಕೊಂಡಿದ್ದಾನೆಂಬುದನ್ನು ನೋಡಿಯೆ ಅವನ ಸಾಮರ್ಥ್ಯವನ್ನರಿಯಲಾಗುವುದು. ಕಲಾಕೃತಿ ಸುಂದರವಾಗಿದ್ದಷ್ಟೂ ಸತ್ಯಕ್ಕೆ ಸಮೀಪವಾಗುತ್ತದೆ. ನಿಜವಾದ ಕಲೆಯ ಆಸ್ವಾದನಶಕ್ತಿ ಹೆಚ್ಚಿದಷ್ಟು ಮನುಷ್ಯ ಸೌಂದರ್ಯದಲ್ಲಿ ತಾದಾತ್ಮ್ಯ ಹೊಂದುತ್ತಾನೆ. ಅವನು ತನ್ನತನವನ್ನೂ ತನ್ನ ಎಲ್ಲ ಇತಿಮಿತಿಯನ್ನೂ ಮೀರಿನಿಂತು ಆ ವಿಶಿಷ್ಟ ಕಲಾಮಾರ್ಗದಲ್ಲಿ ಸಾಗಿ ಸೌಂದರ್ಯಸಾಗರದಲ್ಲಿ ಬೆರೆತು ಹೋಗುತ್ತಾನೆ. ಪ್ರತಿಯೊಂದು ನಿಜವಾದ ಕಲಾಕೃತಿಯೂ ವಸ್ತುತಃ ಅನಂತದ ಸಕೃದ್ದರ್ಶನವಾಗಿದೆ. ಕಲಾವಿದನ ಮೇಲ್ಮೆ ಹೆಚ್ಚಿದ್ದಷ್ಟೂ ನಮ್ಮನ್ನು ನಮ್ಮ ಭೌತಿಕ ಇತಿಮಿತಿಗಳ ಬಂಧನದಿಂದೆತ್ತಿ ಅನಂತದ ಧಾಮದತ್ತ ಒಯ್ಯುವ ಅವನ ಸಾಮರ್ಥ್ಯವೂ ಹೆಚ್ಚಾಗಿರುವುದು.

ಮಹಾತ್ಮಾ ಗಾಂಧಿ

(೧೨ನೆಯ ಪುಟದಿಂದ ಬಂದುದು)

ಮಾರ್ಗನಿರ್ದೇಶನ ಮಾಡಲಾಗಲಿಲ್ಲ. ಜನತೆಯು ಎಲ್ಲದಕ್ಕೂ ಸಿದ್ಧರಾಗಬೇಕು ಎಂಬ ಎಚ್ಚರಿಕೆಯ ಮಾತಿನ ಹೊರತು ಬೇರೆ ಏನನ್ನೂ ಹೇಳಲಿಲ್ಲ, ಏನೇ ಆದರೂ ಶಾಂತ ಅಹಿಂಸೆಯ ಮಾರ್ಗವನ್ನು ಬಿಡಬಾರದು ಎಂದು ಹೇಳಲಾಗಿತ್ತು.

ಅಂತೂ ಕೊನೆಗೊಮ್ಮೆ ಸ್ವಾತಂತ್ರ್ಯ ಬಂದಿತು. ಅದರ ಮುರುಕ್ಷಣ ನೆತ್ತರ, ಕಣ್ಣೀರುಗಳ ಕಾಲುವೆಯನ್ನು ನಾವು ಕಾಣಬೇಕಾಯಿತು. ಈ ಕಾಲಾವಧಿಯಲ್ಲಿ ಭಾರತದಲ್ಲಿ ಗಾಂಧೀಜಿಯ ಸಾನ್ನಿಧ್ಯವು ಎಂತಹ ಕಾರ್ಯ ಮಾಡಿತೆಂಬುದು ಎಷ್ಟು ಜನ ತಿಳಿದಿದ್ದಾರೆ? ಈ ಅವಧಿಯಲ್ಲಿ ಅವರು ಸಲ್ಲಿಸಿದ ಸೇವೆ ಹಿಂದೆ ಮಾಡಿದ ಅವರ ಎಲ್ಲ ಸೇವೆಯನ್ನು ಮೀರಿಸಿತು.

ನಾವು ಘನ ಗಂಭೀರವಾದ ಪರೀಕ್ಷಾ ಕಾಲದಲ್ಲಿ ಹಾದು ಬಂದಿದ್ದೇವೆ. ಆ ಕಾಲಾವಧಿ ಇನ್ನೂ ಮುಗಿದಿಲ್ಲ ಗಾಯಗೊಂಡ ಭಾರತವು ಪ್ರತಿಯೊಬ್ಬನನ್ನು ಸೇವೆಗೆ ಕರೆಯುತ್ತಿದೆ, ನಾವು ಭಾರತದ ಸುಪುತ್ರರೆಂಬುದನ್ನು ಸಾರ್ಥಕ ಮಾಡಬೇಕಾಗಿದೆ.

ಆದರೆ ಗೆಳೆಯರೆ, ನಮಗೆ ಇದುವರೆಗೆ ಹಾದಿ ತೋರಿದ ಜ್ಯೋತಿ ನಂದಿತು. ಎಲ್ಲೆಡೆಯಲ್ಲಿಯೂ ಕತ್ತಲೆ ಕವಿದಿದೆ. ಬೆಳಕು ನಂದಿ ಹೋಯಿತೆಂದು ಹೇಳುವುದು ಅಷ್ಟು ಸರಿಯಲ್ಲವೆಂದೇ ಅನಿಸುತ್ತಲಿದೆ. ಅದು ಹೆಚ್ಚು ಜಾಜ್ವಲ್ಯಮಾನವಾಗಿ ಬೆಳಗುತ್ತಲಿದೆ. ಯಾಕಂದರೆ ಆ ಬೆಳಕು ಸತ್ಯದ ಪ್ರತಿನಿಧಿಯಾಗಿದೆ.

ಗಾಂಧೀಜಿಗೆ ಇನ್ನೂ ಮಾಡಬೇಕಾದ ಕಾರ್ಯ ಬೇಕಾದಷ್ಟು ಇದ್ದಾಗ ಈ ಘಟನೆ ಒದಗಿತು. ಅನೇಕಮುಖವಾಗಿ ಇದಿರಾಗುತ್ತಿರುವ ಸಮಸ್ಯೆಗಳು ಇದಿರಾದಾಗ ಗಾಂಧೀಜಿ ಇಲ್ಲದಿರುವ ಭಾವವು ಅಸಹನೀಯವಾಗುತ್ತದೆ. ಗಾಂಧೀಜಿಯನ್ನು ಹೊಗಳುವುದಕ್ಕೆ ಕೂಡ ಯೋಗ್ಯತೆ ಇಲ್ಲದಾಗಿದೆ ನಮಗೆ, ಅವರು ಹೇಳಿದ ಮಾತುಗಳನ್ನನುಸರಿಸಿ ನಡೆಯದೆ ಇರುವಾಗ ಹೊಗಳಿಕೆಯ ಅರ್ಥವೇನು? ಅವರಿಗೆ ನಮ್ಮ ಹೊಗಳಿಕೆಯ ಮಾತು ಬೇಕಾಗಿದ್ದಿಲ್ಲ. ಹೊಗಳುವಂತಹ ಕಾರ್ಯ ನಾವು ಮಾಡಿದ್ದಾದರೆ ಅವರಿಗೆ ಬಹು ಸಂತೋಷ. ಕಾರ್ಯ— ಸ್ವಾರ್ಥತ್ಯಾಗ, ದುಡಿಮೆ, ಇವೆಲ್ಲವುಗಳನ್ನು ಅಪೇಕ್ಷಿಸಿದ್ದರು ಅವರು ನಮ್ಮಿಂದ. ಬದುಕಿನಲ್ಲಿ ಘನತೆ ಪಡೆದ ಗಾಂಧೀಜಿ ಸಾವಿನಲ್ಲಿಯೂ ಘನತೆ ಪಡೆದಿದ್ದರೂ ಬದುಕಿದಾಗ ಮಾಡುತ್ತಿದ್ದ ಕಾರ್ಯವನ್ನು ಸಾವಿನಿಂದ ಸಾಧಿಸಿದರು ಎನ್ನಬಹುದು. ಪ್ರಾರ್ಥನೆಯ ಸಲಕ್ಕೆ ಸಾವು ಬಂದುದು ಅವರ ಬಯಕೆಯನ್ನು ಪೂರೈಸಿತು. ಬಾಪುಜಿ, ಇಲ್ಲಿ ಹೂಗಳಿವೆ. ಇಂದು ನಿಮ್ಮ ಅಸ್ಥಿಭಸ್ಮಕ್ಕಾದರೂ ಅರ್ಪಿಸುತ್ತೇವೆ. ನಾಳೆ ಎಲ್ಲಿ ಅರ್ಪಿಸಲಿ?— ಯಾರಿಗೆ... ಬಾಪೂ...

ಮರಳಿ ಬಂದ ಮಗ

ಲೇಖಕ— ಸ. ನಾರಾಯಣರಾವ್, ಕೋಲಾರ

"ಅಮ್ಮಾ! ಖಂಡಿತ ಮರಳಿ ಬರುವನಮ್ಮ. ನೀನು ಭಯಪಡಬೇಡ. ಅವನು ಇಂದಲ್ಲ ಒಂದು ದಿವಸ ಬಂದೇ ಬರುವನಮ್ಮಾ" ಎಂದು ವಿಮಲ ಕಣ್ಣುಗಳನ್ನು ಕಳೆದುಕೊಂಡ ವೃದ್ಧ ತಾಯಿಯ ಬಳಿ ಧಾರಾಕಾರವಾಗಿ ಕಣ್ಣೀರಿಡುತ್ತಾ ಹೇಳುತ್ತಿದ್ದಳು.

ಅದಕ್ಕೆ ತಾಯಿ "ಅವನು ಬರುವನೆಂದು ನಾನೇನೂ ನಂಬುವುದಿಲ್ಲ" ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ನುಡಿದಳು.

"ನಾನು ಪಾತಕಿ! ಸಾಯುವುದಕ್ಕೆ ಮುಂಚೆ ನನ್ನ ಮಗನನ್ನು ನೋಡಲು ಅದೃಷ್ಟವಿಲ್ಲವಲ್ಲಾ" ಎಂದು ತಾಯಿ ಪ್ರಲಾಪಿಸಿದಳು. ಹಾಗೆ ಉಕ್ಕಿ ಬರುತ್ತಿದ್ದ ಕಣ್ಣೀರನ್ನು ವಿಮಲಳು ತನ್ನ ಕರವಸ್ತ್ರದಿಂದ ಒರಸುತ್ತಾ ಧೈರ್ಯಗೆಡಬೇಡಮ್ಮಾ" ಎನ್ನುತ್ತಿದ್ದಳು.

ಆ ವೃದ್ಧ ತಾಯಿಯು ಕೆಲವು ವರ್ಷಗಳ ಹಿಂದೆ ಕಣ್ಣುಗಳನ್ನು ಕಳೆದುಕೊಂಡಿದ್ದಳು. ಒಂದು ಬಾರಿ ಅವಳ ಊರಲ್ಲಿ ಭಯಂಕರ ತೀಕ್ಷ್ಣವಾದ ಸಿಡುಬು ತಲೆದೋರಿತು. ಆಗ ಅವಳು ತನ್ನ ಕಣ್ಣುಗಳನ್ನು ಕಳೆದುಕೊಂಡಳು. ಅದಕ್ಕೆ ಮುಂಚೆಯೇ ತನ್ನ ಗಂಡನನ್ನು ಕಳೆದುಕೊಂಡಿದ್ದಳು.

ವಿಮಲಳು ತನ್ನ ತಾಯಿಯ ಜೊತೆಯಲ್ಲಿ ಚನ್ನಗಿರಿ ಎಂಬ ಊರಿನಲ್ಲಿ ಒಂದು ಚಿಕ್ಕ ಮನೆಯಲ್ಲಿ ವಾಸಮಾಡಿಕೊಂಡಿದ್ದಳು. ಅದು ಒಂದು ಚಿಕ್ಕ ಊರು. ಸುಂದರವಾದ ಬೀಡು. ಆ ಹಳ್ಳಿಯ ಪಕ್ಕದಲ್ಲಿ ಒಂದು ಹೊಳೆ ಹರಿಯುತ್ತದೆ. ಅದರ ಆಸರೆಯಿಂದ ಅನೇಕ ರೈತರು ತಮ್ಮ ಗದ್ದೆಗಳಲ್ಲಿ ವಿಶೇಷವಾಗಿ ಭತ್ತ, ಕಬ್ಬು ಬೆಳೆಯುತ್ತಾರೆ. ಆ ಊರಿನ ಪಕ್ಕದಲ್ಲಿ ಒಂದು ಬೆಟ್ಟ. ಅದರ ಬುಡದಲ್ಲಿ ಒಂದು ಪುರಾತನ ಹನುಮನ ಗುಡಿಯಿದೆ ಆ ಬೆಟ್ಟದ ಮೇಲೆ ನಿಂತು ನೋಡಿದರೆ ಸೊಗಸಾದ ತೆಂಗಿನ, ಬಾಳೆಯ ತೋಟಗಳನ್ನು ಕಾಣಬಹುದು. ಹಚ್ಚನೆ ಪೈರು, ಶಾಂತವಾಗಿ ಹರಿಯುವ ಹೊಳೆ, ವಿರಳವಾದ ಮನೆಗಳು, ನಿಬಿಡವಾಗಿ ದನಕರುಗಳಿಂದ ಕೂಡಿದ ಹುಲ್ಲುಗಾವಲು ಇವೆಲ್ಲವನ್ನು ಸಂಧ್ಯಾಸಮಯದಲ್ಲಿ, ದಿನಕರನ ಹೊಂಬೆಳಕಿನಲ್ಲಿ ನೋಡಿ ಸವಿಯಬಹುದು. ಆ ಪುಟ್ಟ ಮನೆಯಲ್ಲಿ ವಿಮಲಳು ತನ್ನ ಸಹೋದರನಾದ ವಿನೋದನೊಡನೆ ಸುಖವಾಗಿ ಜೀವನ ಮಾಡುತ್ತಿದ್ದಳು. ಅವನು ಮನೆಬಿಟ್ಟು ಈಗ್ಗೆ ಹದಿನೈದು ವರ್ಷವಾಗುತ್ತಾ ಬಂತು. ಮನೆಬಿಟ್ಟಾಗ ಅವನಿಗೆ ಕೇವಲ ಹದಿನೈದು ವರ್ಷಗಳು ಮಾತ್ರ. ಅವನು ದೃಢಕಾಯನಾಗಿದ್ದನು. ಅವನು ತಂಗಿಯೊಡನೆ ಸಾಮಾನ್ಯ ಮಾತಿಗೆ ಜಗಳವಾಡಿ ಮನೆಬಿಟ್ಟವನು. ಅಲ್ಲದೆ ತಾಯಿಯು ಮಗಳ ಅಲ್ಪವಾದ ಮಾತಿಗೆ ಸ್ವಾಭಾವಿಕವಾಗಿ ಅವಳ ಪಕ್ಷ ವಹಿಸಿ, ಅವನ ಒರಟುತನಕ್ಕೆ ಗದರಿದ್ದಳು. ವಿಮಲಳು ಅವನಿಗಿಂತ ಮೂರು ವರ್ಷ ಚಿಕ್ಕವಳಾಗಿದ್ದಳು. ಅವನು ಮನೆಬಿಟ್ಟ ದಿನದಿಂದ ಅನೇಕ ತೊಂದರೆಗಳು ಒದಗಿ ಬಂದುವು. ವಿಮಲಳು ತನಗೆ ಸಾಧ್ಯವಾದಷ್ಟು ನಿವಾರಣೆ ಮಾಡಿಕೊಂಡು ಬಂದಳು. ತಾಯಿಯ ರೋದನವನ್ನು ತಡೆಯಲಾರದೆ ಹೋದಳು. ಅವಳು ಸಮಾಧಾನೋಕ್ತಿಗಳಿಂದ ಅವಳ ಮನದ ತಾಪವನ್ನು ಸಂತೈಸುತ್ತಿದ್ದಳು. ಅವಳು ಮತ್ತು ಅವಳ ತಾಯಿ ಹಗಲು ರಾತ್ರಿ ಮೌನವಾಗಿ ವಿನೋದನು ಮರಳಿ ಬರಲೆಂದು ದೇವರಲ್ಲಿ ಮೊರೆಯಿಡುತ್ತಿದ್ದರು. ಅಲ್ಲದೆ ನಿಶ್ಶಕ್ತಳಾದ ತಾಯಿಯು ದೇವರ ಉತ್ತರವನ್ನು ಕಾಯುತ್ತಿದ್ದಳು. ವಿಮಲಳು ವಿನೋದನನ್ನು ಆಗಾಗ ತನ್ನ ಮನದಲ್ಲೇ ನೆನೆಯುತ್ತಿದ್ದಳು.

"ವಿನೋದನು ಖಂಡಿತ ಬರುತ್ತಾನೆ! ಅವನು ತನ್ನ ತಂಗಿಯನ್ನೂ ತಾಯಿಯನ್ನೂ ಇನ್ನೊಂದು ಬಾರಿ ನೋಡಲು ಬಯಸುವುದಿಲ್ಲವೆ?.. ಅವನ ಹೃದಯವು ಎಲ್ಲರ ಹೃದಯದಂತಲ್ಲವೆ? ...ಎಂದಾದರೂ ನೋಡಲು ಬಂದೇ ಬರುವನು..... ಅವನ ಹೃದಯ ಕಲ್ಲಿನಂತಲ್ಲ!... ಅವನನ್ನು ನಾನು ಚಿಕ್ಕವಳಾಗಿದ್ದಾಗ ಕಂಡದ್ದು. ಈಗ ಅವನು ದೊಡ್ಡವನಾಗಿರುತ್ತಾನೆ. ದೃಢಕಾಯನಾಗಿ ಬೆಳೆದು ಕೊಂಡಿರುತ್ತಾನೆ... ಈಗ ಅವನು ಬಂದರೂ ಗುರುತಿಸಲಾರದವಳಾಗಿರುತ್ತೇನೆ" ಎಂದು ನೆನೆಯುತ್ತಿದ್ದಳು.

× × ×

ಸೂರ್ಯನು ಮುಳುಗಿದನು. ಸುತ್ತಮುತ್ತಲೂ ಕತ್ತಲೆ ಕವಿಯುತ್ತಾ ಇತ್ತು. ದನಗಳು ತಮ್ಮ ಕರುಗಳನ್ನು ಸಂಧಿಸಲು ಬೇಗಬೇಗನೆ ಹೆಜ್ಜೆಯಿಡುತ್ತಾ ಬರುತ್ತಿದ್ದುವು. ಆಗ ವಿಮಲಳು ಕೊಡದಲ್ಲಿ ಬಾವಿಯಿಂದ ನೀರು ತರಲು ಮನೆಯಿಂದ ಹೊರಗೆ ಬಂದಳು. ಆ ಸಮಯದಲ್ಲಿ ಅವಳ ಗಮನವು ಒಬ್ಬ ಆಗಂತುಕನತ್ತ ಸೆಳೆಯಲ್ಪಟ್ಟಿತು. ಅವನು ಖಾಕಿ ಉಡುಪನ್ನು ಧರಿಸಿದ್ದ. ಅಲ್ಲಿಗೆ ದಂಡಿಗೆ ಸೇರಿದವನೆಂದು ತಿಳಿದು ಬರುತ್ತಿತ್ತು. ವಯಸ್ಸು ೩೦ ವರ್ಷಕ್ಕೆ ಕಡಿಮೆಯಿರಲಿಲ್ಲ. ವಿಮಲ ಅವನನ್ನು ನೋಡಲು ಅವನು—

"ವಯವಿಟ್ಟು ಕ್ಷಮಿಸಿ! ಇಲ್ಲಿ ಗಂಗ ಮತ್ತು ಅವಳ ಮಗಳು ವಿಮಲ ವಾಸ ಮಾಡಿಕೊಂಡಿರುವರೇ?" ತಿಳಿಸುವಿರಾ ಎಂದು ಪ್ರಶ್ನಿಸಲು, ವಿಮಲಳು ದಿಗ್ಭ್ರಾಂತಳಾಗಿ ಒಂದು ಕ್ಷಣ ಕಲ್ಲಿನ ವಿಗ್ರಹದಂತೆ ನಿಂತಳು. ಪುನಃ ತಿಳಿವನ್ನು ತಂದುಕೊಂಡು—

"ಹಾ! ವಿನೋದ್! . ವಿನೋದ್!" ಎಂದು ಬಿಕ್ಕಿಬಿಕ್ಕಿ ಕೂಗಿದಳು "ಮನೆಯೊಳಕ್ಕೆ ಬಾ. - ಅಮ್ಮ, ನಾನು ಬಹಳ ದಿನಗಳಿಂದಲೂ ನಿನಗಾಗಿ ಕಾಯ್ದುಕೊಂಡಿದ್ದೆವು.

ವಿನೋದ್!...... ಕಡೆಗಾದರೂ ಮರಳಿ ಬಂದೆ!" ಎಂದು ಹೇಳುತ್ತಾ ಪಾತ್ರೆಯನ್ನು ಬಿಸುಟು ಓಡಿಬಂದಳು. ಆನಂದದಿಂದ ಅವನ (ಆಗಂತುಕನ) ಕೈಹಿಡಿದುಕೊಂಡು ಮನೆಯೊಳಕ್ಕೆ ಕೂಗುತ್ತಾ ಹೋದಳು.

"ಅಮ್ಮಾ!.. ನಮ್ಮ ವಿನೋದ ಮರಳಿ ಬಂದಿದ್ದಾನೆ.... ಇಲ್ಲಿ ನೋಡು ನಮ್ಮ ಮಧ್ಯದಲ್ಲಿದ್ದಾನೆ....."

ನೋಡು ವಿನೋದ್, ನೋಡು ಅಮ್ಮ ಎಂಟು ವರ್ಷಗಳ ಹಿಂದೆ ಭಯಂಕರ ಸಿಡುಬಿನ ಬಾಧೆಯಿಂದ ಕಣ್ಣುಗಳನ್ನು ಕಳೆದುಕೊಂಡಳು. ಈಗ ನಿನ್ನನ್ನು ನೋಡಲಾರದವಳಾಗಿದ್ದಾಳೆ" ಎಂದು ಗೊತ್ತುಗುರಿಯಿಲ್ಲದೆ ಉಸುರುತ್ತಾ ಅಮ್ಮನು ಮಲಗಿದ್ದ ಬಳಿ ಕರೆತಂದಳು.

ನಿಶ್ಶಕ್ತಳಾದ ತಾಯಿ ಮಗನು ಬಂದದ್ದನ್ನು ತಿಳಿದು—

"ವಿನೋದ್!".... ಮುದ್ದು ಮಗನೆ!... ನನ್ನ ಹತ್ತಿರ ಬಾ...." ಎಂದು ನಡುಗುವ ಕೈಗಳನ್ನು ಅವನೆಡೆಗೆ ನೀಡಿದಳು. ಅವನು ಅವಳ ಕೈಗಳನ್ನು ತನ್ನ ಕೈಗಳಲ್ಲಿ ಇರಿಸಿಕೊಂಡನು.

"ಅಮ್ಮಾ! ನೀನು ಈ ಘಾತಕನನ್ನು ಕ್ಷಮಿಸುವೆಯಾ?" ಎಂದು ಕರುಣಾಜನಕವಾಗಿ ಕೇಳಿದನು. ಅದಕ್ಕೆ ತಾಯಿಯು—

"ಕ್ಷಮಿಸು!" ಯಾಕೆ? ಏತಕ್ಕೋಸ್ಕರ? ನನ್ನ ಕಂದ! ನೀನು ಯಾವ ವಿಧವಾದ ತಪ್ಪನ್ನೂ ನನ್ನ ಎದುರಿಗೆ ಮಾಡಿಲ್ಲ. ಕ್ಷಮಿಸುವದಕ್ಕೆ ನೀನು ಯಾವ ತಪ್ಪು ಮಾಡಿದ್ದೀಯೆ? ಯಾವ ವಿಧವಾದ ತಪ್ಪೂ ಇಲ್ಲ! ಸರ್ವ ಸಮರ್ಥನಾದ ಪರಮೇಶ್ವರನು ಮೆಚ್ಚಿ ನನ್ನ ಇಷ್ಟಾರ್ಥವನ್ನು ಸಲ್ಲಿಸಿರುತ್ತಾನೆ" ಎಂದು ಹೇಳಿ ತನ್ನ ಕೈಗಳಿಂದ ಅವನನ್ನು ಅಪ್ಪಿದಳು. ಹಾಗೆಯೇ ಮೈಯನ್ನು ಸವರುತ್ತಿರುವಾಗ ಹಣೆಯ ಮೇಲಿದ್ದ ಗಾಯದ ಕಲೆಯನ್ನು ಕಂಡು ಅದೇನೆಂದು ಕೇಳಿದಳು. ಅದಕ್ಕವನು-

"ಅಮ್ಮ! ತುಪಾಕಿ ಗುಂಡಿನಿಂದ ಎಡಕಿ ಗಾಯವಾಗಿರುತ್ತೆ. ನಾನು ದಂಡಿನಲ್ಲಿ ಕೆಲಸಕ್ಕೆ ಸೇರಿದ್ದೇನೆ ಅಂತ ನಿನಗೆ ಗೊತ್ತಿಲ್ಲವೆ? ನಾನು ಬರ್ಮ ಉತ್ತರ ಆಫ್ರಿಕದಲ್ಲಿ ಯುದ್ಧ ಮಾಡಿದ್ದೇನೆ. ಆ ಯುದ್ಧದಲ್ಲಿ ನಡೆದ ಉತ್ಸಾಹ, ಶೌರ್ಯ, ಮನ್ನು ವಿನೆಂದು ಕಾಣೆ ಹೇಳಲಿ. ಈಗ ಅವೆಲ್ಲವನ್ನು ನೆನೆದರೆ ರೋಮಾಂಚನವಾಗುತ್ತದೆ." ಎಂದನು.

"ಮುದ್ದು ಕಂದ! ಯುದ್ಧವೆಂದರೆ ನನಗೆ ಬೆನ್ನುಮೂಳೆ ಮುರಿದಂತಾಗುತ್ತದೆ. ನೀನು ಖಂಡಿತ ಪುನಃ ದಂಡಿಗೆ ಹೋಗಬೇಡ!... ನೀನು ಆ ಕೆಲಸಕ್ಕೆ ಹೋಗುವುದು ನನಗಿಷ್ಟವಿಲ್ಲ. ನೀನು ಯುದ್ಧದಲ್ಲಿ ಭಾಗವಹಿಸಿದರೆ ಎಂದಾದರೂ ಗುಂಡಿನೇಟಿಗೆ ತುತ್ತಾಗಿ ಪ್ರಾಣ ಕಳೆದುಕೊಳ್ಳಬೇಕಾಗುವುದು" ಎಂದಳು ತಾಯಿ.

ಮಗನು ಮರಳಿ ಬರಲೆಂದು ತಾಯಿಯು ದೇವರಿಗೆ ಮೊರೆಯಿಟ್ಟು ಮುಡಿಪು ಕಟ್ಟಿದ್ದಳು... ಆದರೆ ಅವಳು ನೆನೆದಂತೆ ಆಗಲಿಲ್ಲ. ಅಮ್ಮ [illegible]

[illegible] ಮಾಡಿದ [illegible] ಕಾರಣನಾಗುತ್ತದೆ. [illegible] ಅನಂದವು [illegible] ಅದರಿಂದ ರಾತ್ರಿ, ಅವಳು ಭಯಂಕರ [illegible] ತಾಳ್ಮೆ [illegible] ಮುಂದೆ [illegible] ಹೊರಟನು. [illegible] ವಿನೋದನು [illegible] ಶರೀರದ [illegible]

"ನನ್ನ ಮುದ್ದು ಮಕ್ಕಳೇ.......ವಿಮಲ, ವಿನೋದ್ ಹತ್ತಿರ ಬನ್ನಿ! ನನ್ನ ಕೈಯನ್ನು ಹಿಡಿಯಿರಿ.. ವಿನೋದ್! ಇದು ನಿನ್ನ ಕೈಯೋ....ವಿಮಲ, ನಿನ್ನ ಕೈಯನ್ನು ತಾ..."

"ವಿನೋದ್!..... ನನ್ನ [illegible] ಸಮೀಪಿಸುತ್ತಾ ಬಂದಿದೆ. ಈಗ ಕಡೆಗೆ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಾನು ಸಾಯಲಿಕ್ಕೆ [illegible] ಸಂತೋಷವಾಗಿ ಈ ದೇಹವನ್ನು ಬಿಟ್ಟು ಹೊರಡಲು ಸಿದ್ಧಳಾಗಿದ್ದೇನೆ. ಯಾಕೆಂದರೆ, ನಿನ್ನ ಮುರಿನಲ್ಲಿ ಈ ದೇಹವನ್ನು [illegible] ಅದೃಷ್ಟವೇ ಸರಿ. ನಿರ್ಭಾಗ್ಯಳಿಂದ ನಾನು ಕಣ್ಣುಗಳಿಂದ ನೋಡಲಾರದವಳಾಗಿದ್ದೇನೆ.

"ವಿನೋದ್— ನನ್ನ [illegible] ನಂತರ, ವಿಮಲಳಿಗೆ ನೀನೊಬ್ಬನೇ ಸಂರಕ್ಷಕನಾಗಿರುತ್ತೀ. ಅವಳಿಗೆ ಈ ಪ್ರಪಂಚದಲ್ಲಿ ಬೇರಾರೂ ಇಲ್ಲ. ನೀನವಳನ್ನು ಕೈಬಿಡುವುದಿಲ್ಲವೆಂದು ನಂಬಿದ್ದೇನೆ, ಮಾತು ಕೊಡು!" ಎಂದು ದೀನ ಸ್ವರದಿಂದ ಕೇಳಲು— "ಖಂಡಿತವಾಗಿಯೂ ಮಾಡುತ್ತೇನೆ, ಅಮ್ಮ!....." ಎಂದು ಹೇಳಿ ಅವನು ತನ್ನ ಕೈಗಳಿಂದ ತಾಯಿಯ ಕೈಹಿಡಿಯುತ್ತಲೇ ತಲೆ ಪಕ್ಕಕ್ಕೆ ಹೊರಳಿತು. ಆಕೆಯ ಶರೀರದ ಪಂಜರದಿಂದ ಪ್ರಾಣಪಕ್ಷಿ ಹಾರಿಹೋಯಿತು.

"ಅಮ್ಮಾ!.... ಅಮ್ಮಾ" ಎಂದು ವಿಮಲಳು ನಿರಾಶಳಾಗಿ ಕೂಗಿದಳು.... ಅವನು ಮೌನವಾಗಿ ಪಕ್ಕದಲ್ಲಿ ಕುಳಿತಿದ್ದನು... ಅವನ ಕಣ್ಣಿನಿಂದ ಕಣ್ಣೀರು ಸುರಿಯುತ್ತಿತ್ತು.

× × ×

ವೃದ್ಧ ತಾಯಿಯ ಉತ್ತರ ಕ್ರಿಯೆಗಳು ಮುಗಿದುವು. ಶಾಸ್ತ್ರೋಕ್ತವಾದ ಕರ್ಮಗಳನ್ನು ಮಗನು ಮುಗಿಸಿದನು. ಮಾರನೆ ದಿನ ವಿನೋದನು ವಿಮಲಳನ್ನು ಕರೆದು ನಿಧಾನವಾಗಿ—

"ವಿಮಲ, ನಾನು ಒಂದು ವಿಷಯ ಹೇಳಬೇಕೆಂದಿದ್ದೇನೆ" ಎಂದ. ಅವಳು ಅನಿರೀಕ್ಷಿತವಾದ ಮಾತನ್ನು ಕೇಳುತ್ತಲೇ ಉತ್ಸುಕತೆಯಿಂದ ಅವನನ್ನು ನೋಡಿದಳು ಆಗ...

[illegible]

ರೋಖ ಇನಾಮು ರೂಪಾಯಿ ೧೦೦೦

[illegible] ಈ ಮಾಂತ್ರಿಕ ಉಂಗುರವನ್ನು [illegible] ಮಂತ್ರಶಕ್ತಿಯ [illegible]

ಶಾಯಿನಿಂಗ ಮೆಸ್ಮೆರಿಝಂ ಹೌಸ (ಕ. ಮ.)

ಕರ್ತಾರಪುರ (ಪೂರ್ವ ಪಂಜಾಬ)

Shining Mesmerism House(K. V. B.) KARTARPUR (E.Pb.)

ಮಕ್ಕಳಿಗಾಗಿ

ದುರ್ಗಾದೇವಿಯ ಕಥೆ

ದೇವತೆಗಳಲ್ಲಿ ಅತಿ ಮುಖ್ಯರಾದವರು ಮೂವರು: ಸೃಷ್ಟಿ, ಸ್ಥಿತಿ ಮತ್ತು ಲಯಕ್ಕೆ ಕಾರಣರಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು

ಬ್ರಹ್ಮನ ಉಡಿಗೆ ಶುದ್ಧ ಬಿಳುಪು; ಮೈ ಬಣ್ಣ ಕೆಂಪು. ಆತನಿಗೆ ಚತುರ್ಮುಖಗಳು, ಚತುರ್ಬಾಹುಗಳು; ನಾಲ್ಕು ಹಸ್ತಗಳಿಂದ ಮೂರು ವಸ್ತುಗಳನ್ನು ಹಿಡಿದಿದ್ದಾನೆ: ಜಪಸರ, ವೇದಗಳು ಮತ್ತು ಒಂದು ಸೌಟು. ಆತನ ವಾಹನ ಹಂಸ.

ಬ್ರಹ್ಮನ ಹೆಂಡತಿ ಸರಸ್ವತಿ. ಅವಳು ಜ್ಞಾನಕ್ಕೆ ಅಧಿದೇವತೆ. ಶರೀರದ ವರ್ಣ ಬಿಳುಪು. ಆಕೆಯ ಉಡಿಗೆ ಬಳಿ ಇಲ್ಲವೆ ನೀಲಿ. ಅವಳು ವೀಣಾಪಾಣಿ. ಅವಳ ವಾಹನ ರಾಜಹಂಸ.

ವಿಷ್ಣುವಿನದು ನೀಲದೇಹ. ಆವನಿಗೆ ನಾಲ್ಕು ತೋಳಗಳು; ನಾಲ್ಕು ಹಸ್ತಗಳು. ಒಂದೊಂದರಲ್ಲಿಯೂ ಶಂಖ, ಚಕ್ರ ಮತ್ತು ಗದೆ, ಪದ್ಮಗಳನ್ನು ಧರಿಸಿದ್ದಾನೆ. ಗರುಡ ವಾಹನ. ಗರುಡ, ಅರ್ಧಪಕ್ಷಿ ಅರ್ಧ ಮಾನವನ ರೂಪವುಳ್ಳವನು.

ವಿಷ್ಣುವಿನ ಹೆಂಡತಿ ಲಕ್ಷ್ಮಿ, ಸಂಪತ್ತಿಗೆ ಅಧಿದೇವತೆ ಕಮಲದ ಹೂವನ್ನು ಕೈಯಲ್ಲಿ ಹಿಡಿದಿದ್ದಾಳೆ.

ಶಿವನ ಮೈಬಣ್ಣ ಬಿಳುಪು, ಬೂದಿಬಡಕ, ಆನೆಯ ತೊಗಲು ಹೊದ್ದವ; ಸರ್ಪ ಭೂಷಣ, ಬಹು ಜಟೆಯುಳ್ಳವನು, ನೀಲ ಕಂಠ. ಅವನ ವಾಹನ ನಂದಿ, ಆಯುಧ ತ್ರಿಶೂಲ.

ಪಾರ್ವತಿ ಶಿವನ ಅರ್ಧಾಂಗಿ. ಅನುಪಮ ಸುಂದರಿ. ಈಕೆಯ ಇನ್ನೊಂದು ರೂಪವೇ 'ದುರ್ಗೆ' ಮೇಲಿನ ಕಥೆಗೆ ಸಂಬಂಧಪಟ್ಟ ನಾಯಿಕೆ. ಅವಳದು ಬಂಗಾರದ ವರ್ಣ ಸಿಂಹವಾಹನ.

ಶಿವನ ಮಗ ಗಣೇಶ, ವಿಘ್ನನಿವಾರಕ ಆತನ ವಾಹನ 'ಇಲಿ' ಆವನದು ಆನೆಯ ಮುಖ. ಆವನು ಏಕದಂತ. ತಿಂಡಿಯೆಂದರೆ ಪ್ರಾಣ-ಅವರಲ್ಲೂ ಸಿಹಿ ಪದಾರ್ಥ: ಕರಿಗಡುಬು. ಅವನು ಶ್ರೀ ವ್ಯಾಸಮಹರ್ಷಿಗಳ ಲೇಖಕನಾಗಿದ್ದನು. ವ್ಯಾಸರು ಮಹಾಭಾರತವನ್ನು ಆತನಿಂದಲೇ ಬರೆಸಿದರೆಂಬ ಪ್ರತೀತಿಯುಂಟು.

ಇನ್ನೊಬ್ಬ ಮಗ ಕಾರ್ತಿಕೇಯ;ಯುದ್ಧಾಭಿಮಾನಿ. ನವಿಲು ಆವನ ವಾಹನ. ಅವನಿಗೆ ದ್ವಾದಶ ಬಾಹುಗಳು, ಆರು ತಲೆಗಳು. ಏಕೆಂದರೆ ಅವನಿಗೆ ಆರುಮಂದಿ ಸಾಕು ತಾಯಿಯರಿದ್ದರಂತೆ.

ಇಂದ್ರ—ಸ್ವರ್ಗಾಧಿಪತಿ. ವಾಹನ ಐರಾವತ. ವಜ್ರಾಯುಧವೇ ಈತನ ಪ್ರಿಯವಾದ ಆಯುಧ; ಕಾಮನಬಿಲ್ಲೇ ಈತನ ಧನಸ್ಸು.

ಅಗ್ನಿ ಬೆಂಕಿಗೆ ಅಧಿದೇವತೆ; ಮೈಕೆಂಪು; ಧಗ ಧಗ ಉರಿಯುವ ಮೂರು ತಲೆಗಳುಳ್ಳವ. ಅವನಿಗೆ ಮೂರು ಕಾಲುಗಳು ಮತ್ತು ಏಳು ತೋಳುಗಳು;ಹಣ್ಣುಗಳ ಹಾರ ಟಗರೇ ಆವನ ರಥ.

ವರುಣ ಸಮುದ್ರಾಭಿಮಾನಿ. ಶಂಖವನ್ನು ಹಿಡಿದಿದ್ದಾನೆ; ಮೊಸಳೆಯ ಮೇಲೆ ಕೂಡುತ್ತಾನೆ.

ಯಮ ಕಾಲಪುರುಷ. ಸಾವಿಗೆ ದೇವತೆ. ಆವನು ಅತಿಕಪ್ಪು. ಕೆಂಪು ಬಣ್ಣದ ಬಟ್ಟೆ ಉಡುತ್ತಾನೆ ಕೋಣದ ಮೇಲೆ ಕುಳಿತು ಕೈಯಲ್ಲಿ ಪಾಶವನ್ನೂ ಒಂದು ಕೋಲನ್ನೂ ಹಿಡಿದುಕೊಂಡಿದ್ದಾನೆ. ಹಿಂದೆ ಎರಡು ನಾಯಿಗಳು; ಒಂದೊಂದಕ್ಕೆ ನಾಲ್ಕು ಕಣ್ಣುಗಳಿವೆ.

ಕುಬೇರ, ಧನಾಧಿಪತಿ— ಅವನ ವಾಹನ ಕುದುರೆ.

ವಾಯು ದೇವರು ಸಾರಂಗದ ಮೇಲೆ ಹೊರಡುತ್ತಾನೆ.

ಸೂರ್ಯ ಬೆಳಕನ್ನು ಕೊಡುವ ದೇವರು. ಅವನ ಮೈಬಣ್ಣ ಕಪ್ಪು ಕೆಂಪು ಮಿಶ್ರ. ಅವನಿಗೆ ಮೂರು ಕಣ್ಣುಗಳು. ಸಪ್ತಾಶ್ವಗಳಿಂದ ಎಳೆಯಲ್ಪಡುವ ರಥದಲ್ಲಿ ಅವನ ಸವಾರಿ. ಸಾರಥಿ ಕಾಲಿಲ್ಲದ ಅರುಣ; ಗರುಡನ ಅಣ್ಣ.

ಒಂದಾನೊಂದು ಕಾಲದಲ್ಲಿ ಒಬ್ಬ ಕ್ರೂರಿಯೂ ಭಯಂಕರನೂ ಆದ ರಾಕ್ಷಸನಿದ್ದನು. ಅವನ ಹೆಸರು ಮಹಿಷಾಸುರ. ಅವನಷ್ಟು ಬಲಿಷ್ಠರು ಯಾರೂ ಇರಲಿಲ್ಲ. ಆದ್ದರಿಂದ ಅವನು ಈ ಎಲ್ಲ ದೇವತೆಗಳನ್ನು ಸೋಲಿಸಿ, ಅವರೆಲ್ಲರನ್ನೂ ಅವರ ಲೋಕದಿಂದ ಓಡಿಸಿದನು.

ತಮ್ಮ ಸ್ಥಳಗಳಿಂದ ತಳ್ಳಲ್ಪಟ್ಟವರಾಗಿ, ಕಡೆಗವರೆಲ್ಲರೂ ಬ್ರಹ್ಮ ವಿಷ್ಣು ಮಹೇಶ್ವರರಲ್ಲಿ ಬಹಳವಾಗಿ ಮೊರೆಯಿಟ್ಟರು. ತನ್ನೊಳಗಿನ ಜಗಳವೆಲ್ಲವನ್ನೂ ಮರೆತು ಒಂದುಗೂಡಿದರು ದೇವತೆಗಳು. ಒಬ್ಬೊಬ್ಬರು ತಮ್ಮ ಮಹತ್ವಪೂರಿತವಾದ ಒಂದೊಂದು ಆಯುಧವನ್ನು, ಈ ರಾಕ್ಷಸವನ್ನು (ಮಹಿಷಾಸುರ) ಕೊಲ್ಲಲು ಕೊಟ್ಟರು.

ತ್ರಿಮೂರ್ತಿಗಳಿಂದ ಬಹಳ ಭೀಕರವಾದ ಬೆಂಕಿಯ ತುಂಡೊಂದು ಬಂದಿತು. ಅದರಲ್ಲಿ ಎದ್ದು ಬಂದಳು ಓರ್ವ ಕನ್ನಿಕೆ. ಅವಳೇ "ದುರ್ಗೆ" ಅವಳಿಗೆ ಸರ್ವರೂ ಆಯುಧಗಳನ್ನು ಕೊಟ್ಟರು.


ಹೀಗೆ ಸರ್ವರಿಂದಲೂ ಆಯುಧವನ್ನು ಪಡೆದು, ಶಸ್ತ್ರಸುಸಜ್ಜಿತಳಾಗಿ ಅವಳು ವಿಂಧ್ಯ ಪರ್ವತದೆಡೆಗೆ ಹೊರಟಳು. ಅವಳ ಸೌಂದರ್ಯಕ್ಕೆ ಮೋಹಗೊಂಡು, ಅವಳನ್ನು ಹಿಡಿಯಲು ಹೊರಟ ರಾಕ್ಷಸ.

ಹತ್ತಿತು ಜಗಳ. ಅದು ಭೀಕರವಾಗು[...] ಬಂದಿತು; ದೀರ್ಘ ಕಾಲ ನಡೆಯಿತು. ರಾಕ್ಷಸ ವಿವಿಧ ರೂಪಗಳನ್ನೂ ಧರಿಸಿ[...] ಆದರೂ ಕಡೆಗೆ ದುರ್ಗೆಯು ತನ್ನ [...]ಯಿಂದ ಬಲವಾಗಿ ತಿವಿದು ರಾಕ್ಷಸನನ್ನು [...]ಕ್ಕುರುಳಿಸಿ ಕೊಂದಳು. ಕೊನೆಗೆ "[...]ಯದು ಕೆಟ್ಟದನ್ನು ನಾಶಮಾಡಬಲ್ಲುದು" ಎಂದು ಎಲ್ಲರಿಗೂ ಮನದಟ್ಟಾಯಿತು.

ಮಕ್ಕಳಿರಾ, ಆ ದುರ್ಗೆಯ ಪೂಜೆಯ[...] ನವರಾತ್ರಿಯಲ್ಲಿ ನೀವು ಮಾಡಿದರಷ್ಟೆ!



ಜಮ್ಮುವಿನಲ್ಲಿರುವ ಹಿಂದೀ ಸೈನ್ಯದ ಕಮಾಂಡರರಾದ ಮೇ| ಜನರಲ್ ಅತ್ಮಸಿಂಗರು ಸೆಪ್ಟೆಂಬರ ೨೨ ಕ್ಕೆ ಮೋಟಾರ ಅಪಘಾತಕ್ಕೆ ತುತ್ತಾಗಿ ಸ್ವರ್ಗಸ್ಥರಾದರು. ಅವರ ಅಂತ್ಯವಿಧಿ ದಿಲ್ಲಿಯಲ್ಲಿ ಸರ್ವಸೈನಿಕ ಗೌರವಗಳೊಡನೆ ಆಯಿತು. ಅವರ ಕಳೇಬರವನ್ನು ಚಿತೆಯ ಮೇಲೇರಿಸಲಾಗಿತ್ತು



ಬ್ರಿಟನ್ನಿನ "ಅವರೋ ಟ್ರ್ಯೂಡರ್‌ಲ" ಪ್ರವಾಸಿ ವಿಮಾನ: ಅದೀಗ ಹಿಂದೆಂದೂ ಮುಟ್ಟದ ೮ ಮೈಲಿನಷ್ಟು ಎತ್ತರದಲ್ಲಿ ಹಾರುವಲ್ಲಿ ಯಶಸ್ವಿಯಾಗಿದೆ.